ಉಚಿತ ಪುಸ್ತಕ



ಡಾ॥ ಎಲ್ ಆರ್ ಹೆಗಡೆ

ಅಪ್ರಕಟಿತ ಸಂಗ್ರಹ ಮಾಲೆ

೨

# ಆಯ್ದ ನಾಮಧಾರಿ ಕಥನಗೀತೆಗಳು

ಸಂಪಾದಿಸಿದವರು: ಶ್ರೀಮತಿ ರೇಣುಕಾ ರಾಮಕೃಷ್ಣ ಭಟ್ಟ



ಮಿತ್ರಮಾಧ್ಯಮ

ಮುಕ್ತ ಮಾಹಿತಿಗೆ ಪುಟ್ಟ ಹೆಜ್ಜೆ

ಉಚಿತ ಪುಸ್ತಕ

## ಡಾ|| ಎಲ್ ಆರ್ ಹೆಗಡೆ

ಅಪ್ರಕಟಿತ ಸಂಗ್ರಹ ಮಾಲೆ

೨

# ಆಯ್ದ ನಾಮಧಾರಿ ಕಥನಗೀತೆಗಳು

**ಸಂಪಾದಿಸಿದವರು**

ಶ್ರೀಮತಿ ರೇಣುಕಾ ರಾಮಕೃಷ್ಣ ಭಟ್ಟ

ಮಿತ್ರಮಾಧ್ಯಮ

ಮುಕ್ತ ಮಾಹಿತಿಗೆ ಪುಟ್ಟ ಹೆಜ್ಜೆ

ಈ ಪುಸ್ತಕವನ್ನು 'ಮಿತ್ರಮಾಧ್ಯಮ'ದ 'ಉಚಿತ ಪುಸ್ತಕ ಸಂಸ್ಕೃತಿ' ಅಭಿಯಾನದ ಭಾಗವಾಗಿ ಪ್ರಕಟಿಸಿದ್ದು, ಸಾಫ್ಟ್ ಪ್ರತಿಗಳನ್ನು **freebookculture.riverthoughts.com** ವೆಬ್‌ಸೈಟ್‌ನಲ್ಲಿ ಉಚಿತವಾಗಿ ಪಡೆಯಬಹುದು.

*This book is published as part of `Mitramaadhyama' Trust's campaign FREE BOOK CULTURE; people who wish to have their own copy can download it from freebookculture.riverthoughts.com*

# ಆಯ್ದ ನಾಮಧಾರಿ ಕಥನಗೀತೆಗಳು

# Ayda Naamadhaari Kathanageetegalu

ಸಂಗ್ರಹಕಾರರು
ಡಾ॥ ಎಲ್ ಆರ್ ಹೆಗಡೆ

COLLECTED BY
**Dr. L R Hegde**

ಸಂಪಾದಕರು
ಶ್ರೀಮತಿ ರೇಣುಕಾ ರಾಮಕೃಷ್ಣ ಭಟ್ಟ

EDITED BY
**Smt. Renuka Ramakrishna Bhat**

ಇ - ಪ್ರಕಟಣೆ
**ಮಿತ್ರಮಾಧ್ಯಮ**
ಬೆಂಗಳೂರು

E-PUBLICATION BY
**MITRAMAADHYAMA (TRUST)**
Bangalore

ಮೊದಲ ಇ-ಪ್ರಕಟಣೆ : ಸೆಪ್ಟೆಂಬರ್ ೨೦೨೦
ಆಕಾರ: 1/8 ಡೆಮಿ
ಪುಟಗಳು: ೧೧೮+೪

First E-Edition: September 2020
Size: 1/8 Demy
Pages: 118+4

ಈ ಪುಸ್ತಕದ ಉಚಿತ ಅಕ್ಷರ ಜೋಡಣೆ ಮಾಡಿ ಸಹಕರಿಸಿದವರು
**ಕು. ಸುಷ್ಮಾ ಮೂಡಬಿದ್ರಿ**
**ಶ್ರೀ ಕೋಟೆಗದ್ದೆ ಎಸ್ ರವಿ**

**ಮುಖಪುಟ ರಚನೆ:** ಶ್ರೀ ಕೋಟೆಗದ್ದೆ ಎಸ್ ರವಿ

**This work is licensed under a Creative Commons Attribution-Non Commercial-NoDerivatives 4.0 International License.**

ಈ ಪುಸ್ತಕವು ಕ್ರಿಯೇಟಿವ್ ಕಾಮನ್ಸ್ ಹಕ್ಕುಪದ್ಧತಿಯಲ್ಲಿ 4.0 ಅಂತಾರಾಷ್ಟ್ರೀಯ ಪರವಾನಗಿಯನ್ನು ಹೊಂದಿದ್ದು ಇದನ್ನು ಯಥಾವತ್ತಾಗಿ ವಾಣಿಜ್ಯೇತರ ಉದ್ದೇಶಗಳಿಗೆ ಮರುಮುದ್ರಿಸುವುದಕ್ಕೆ ಅನುಮತಿ ಇರುತ್ತದೆ.

# ಪ್ರಕಾಶಕರ ಮಾತು

ಸುಮಾರು ಎರಡೂವರೆ ವರ್ಷದ ಹಿಂದೆ ಶ್ರೀಮತಿ ರೇಣುಕಾ ರಾಮಕೃಷ್ಣ ಭಟ್ಟ ಅವರು ನನಗೆ ಕರೆ ಮಾಡಿ, ತಮ್ಮ ಪರಿಚಯ ಮಾಡಿಕೊಂಡರು. ನಾನು ಭಾರತವಾಣಿ ಬಹುಭಾಷಾ ಜ್ಞಾನಕೋಶ ಯೋಜನೆಯಲ್ಲಿ ಇರುವುದನ್ನು ತಿಳಿದುಕೊಂಡಿದ್ದ ಅವರು ತಮ್ಮ ತಂದೆ ದಿ. ಎಲ್ ಆರ್ ಹೆಗಡೆಯವರ ಅಪ್ರಕಟಿತ ಜಾನಪದ ಸಂಗ್ರಹಗಳ ಹಸ್ತಪ್ರತಿಗಳನ್ನು ಗಮನಿಸಬಹುದೇ ಎಂದು ಕೇಳಿದರು.

ನಾನು 1990-92ರ ಅವಧಿಯಲ್ಲಿ ಶಿರಸಿಯಲ್ಲಿದ್ದಾಗ ಒಂದೆರಡು ಸಲ ಶ್ರೀ ಎಲ್ ಆರ್ ಹೆಗಡೆಯವರನ್ನು ಬಸ್ ನಿಲ್ದಾಣದಲ್ಲಿ ಕಂಡಿದ್ದೆ. ಮಾತನಾಡಿಸಲು ಧೈರ್ಯ ಇರದವನಾಗಿದ್ದೆ. ಈಗ ಅವರ ಅಪ್ರಕಟಿತ ಸಂಗ್ರಹವೇ ಇದೆ ಎಂದು ತಿಳಿದಾಗ ಕುತೂಹಲ ಹೆಚ್ಚಾಯಿತು. ಶ್ರೀಮತಿ ರೇಣುಕಾ ಭಟ್ ಅವರ ಮನೆಗೇ ಹೋದೆ. ಅಲ್ಲಿರುವ ಅಪಾರ ಸಂಗ್ರಹವನ್ನು ನೋಡಿ ಅಚ್ಚರಿಯಾಯಿತು. ಅದಾಗಲೇ ಶ್ರೀ ಎಲ್ ಆರ್ ಹೆಗಡೆಯವರು 83 ಪುಸ್ತಕಗಳನ್ನು ಪ್ರಕಟಿಸಿದ್ದವರು. ಆದರೂ ಇಷ್ಟೆಲ್ಲ ಉಳಿದುಕೊಂಡಿದ್ದವು!

ಈಗ ಅವುಗಳಲ್ಲಿ ಆಯ್ದ ಸಂಗ್ರಹಗಳನ್ನು ಒಂದು ಸರಣಿಯಾಗಿ, ಮುಕ್ತ ಮಾಹಿತಿಯಾಗಿ ಪ್ರಕಟಿಸಲಾಗಿದೆ. ಇದನ್ನು ಕ್ರಿಯೇಟಿವ್ ಕಾಮನ್ಸ್ ಹಕ್ಕಿನಡಿಯಲ್ಲಿ ಪ್ರಕಟಿಸಿರುವುದರಿಂದ ಇವುಗಳ ಮುದ್ರಿತ ಪ್ರತಿಗಳನ್ನು ಯಾವುದೇ ಆಸಕ್ತರು ಯಾವ ಅನುಮತಿಯೂ ಇಲ್ಲದೆ, ಇದ್ದ ಹಾಗೆಯೇ ಮುದ್ರಿಸಬಹುದು!

**ಆನ್‌ಲೈನ್‌ನಲ್ಲಿ ಕೇಂದ್ರ ಸರ್ಕಾರದ `ಭಾರತವಾಣಿ' ಯೋಜನೆ, ರಾಜ್ಯ ಸರ್ಕಾರದ `ಕಣಜ' ಯೋಜನೆಗೆ, ಇನ್ನಾವುದೇ ಮುಕ್ತ ಮಾಹಿತಿಯ ಜಾಲತಾಣಕ್ಕೆ ಉಚಿತವಾಗಿ ಈ ಪ್ರತಿಗಳನ್ನು ನೀಡಲಾಗುತ್ತಿದೆ.**

ಜಾನಪದ ಸಾಹಿತ್ಯದ ಮೌಲ್ಯಮಾಪನ ಆಗುವ ಮಾತಿರಲಿ, ಇದ್ದುದನ್ನು ಹೇಗಾದರೂ ಮಾಡಿ ಉಳಿಸಿಕೊಳ್ಳುವ ಕಾಲ ಈಗ ಎದುರಾಗಿದೆ. ಆಧುನಿಕತೆ, ನಗರೀಕರಣದ ಪ್ರಭಾವದಿಂದ ಭಾಷೆ - ಲಿಪಿ - ಪರಂಪರಾಗತ ಅರಿವು ಎಲ್ಲವೂ ಕಣ್ಮರೆಯಾಗುತ್ತಿವೆ. ಇಂತಹ ಸಂದರ್ಭದಲ್ಲಿ ಸಿಕ್ಕಿದ್ದನ್ನು ಉಳಿಸಿಕೊಂಡು ಹೋಗುವ ತರಾತುರಿಯಲ್ಲಿ ಇದನ್ನು ಪ್ರಕಟಿಸಲಾಗಿದೆ ಎಂಬುದನ್ನು ಓದುಗರು ಗಮನಿಸಬೇಕಿದೆ.

**ಈ ಪುಸ್ತಕದ ಅಕ್ಷರಜೋಡಣೆಗೆ ಸಹಕರಿಸಿದ, ಮುಖಪುಟ ರಚಿಸಿಕೊಟ್ಟ ಫೇಸ್‌ಬುಕ್ ಮಿತ್ರಲೋಕಕ್ಕೆ ಮಿತ್ರಮಾಧ್ಯಮದ ಅನಂತ ವಂದನೆಗಳು. ಡಿಜಿಟಲ್ ಜನಪದವು ಪರಂಪರಾಗತ ಜನಪದವನ್ನು ಉಳಿಸಿಕೊಳ್ಳಲು ಮುಂದಾಗಿರುವುದು, ಅದರಲ್ಲೂ ಹಲವು ಯುವ ವಯಸ್ಕರೇ ಈ ಕೆಲಸ ಮಾಡಿರುವುದು ಕೊಂಚ ಸಮಾಧಾನದ ಸಂಗತಿ. ಇಂತಹ ಜೀವನ್ಮುಖಿ ಯುವಸಮುದಾಯ ವಿಸ್ತಾರವಾಗಲಿ ಎಂದು ಹಾರೈಸುತ್ತೇವೆ.**

**ಮುಕ್ತಮಾಹಿತಿಗೆ ಪುಟ್ಟ ಹೆಜ್ಜೆ ಇಡುವ ಮಿತ್ರಮಾಧ್ಯಮದ ಘೋಷವಾಕ್ಯವನ್ನು ಬೆಂಬಲಿಸುವ ಎಲ್ಲರಿಗೂ ವಂದನೆಗಳು.**

**- ಬೇಳೂರು ಸುದರ್ಶನ ಮತ್ತು ಕೃಷ್ಣನ್**

ಜುಲೈ 2019

# ಸಂಪಾದಕರ ಮಾತು

ನಮ್ಮ ಪೂಜ್ಯ ತಂದೆಯವರಾದ ಡಾ॥ ಎಲ್. ಆರ್. ಹೆಗಡೆಯವರು ಕನ್ನಡ ಜಾನಪದ ಸಾರಸ್ವತಲೋಕದಲ್ಲಿ ಚಿರಪರಿಚಿತರು. ಅವರು ತಮ್ಮ ಪೂರ್ತಿ ಜೀವನವನ್ನು ಉತ್ತರ ಕನ್ನಡದ ನಶಿಸಿಹೋಗುತ್ತಿರುವ ಜಾನಪದ ಸಂಪತ್ತನ್ನು ಸಂಗ್ರಹಿ, ಉಳಿಸುವ ಕಾರ್ಯದಲ್ಲಿ ತೊಡಗಿಸಿಕೊಂಡಿದ್ದರು. ಯಕ್ಷಗಾನ ಅಕಾಡೆಮಿಯವರು ಪ್ರಕಟಿಸಿದ, ತಮ್ಮ ಕೊನೆಯ ದಿನಗಳಲ್ಲಿ ಅವರೇ ಬರೆದ- 'ಕ್ಷೇತ್ರದಲ್ಲಿ ಕಾರ್ಯದ ನೆನಪುಗಳು' ಗ್ರಂಥವನ್ನು ಓದಿದರೆ ಜಾನಪದ ಕ್ಷೇತ್ರದಲ್ಲಿ ಅವರ ಅಪೂರ್ವ ಸಾಧನೆಯ, ಪಟ್ಟ ಕಷ್ಟಗಳ ಪರಿಚಯವಾಗುತ್ತದೆ. ಅವರಿರುವಾಗ ಪ್ರಕಟವಾದ ಪುಸ್ತಕಗಳು ಹಾಗೂ ಅವರೇ ಬರೆದ ಪಾಂಡಿತ್ಯ ಪೂರ್ಣ ಪೀಠಿಕೆಗಳು, ಮುನ್ನುಡಿಗಳು ಜಾನಪದ ಕ್ಷೇತ್ರದಲ್ಲಿ ಅವರ ಅಳವಾದ ಅಧ್ಯಯನವನ್ನು ಎತ್ತಿ ತೋರಿಸುತ್ತವೆ. ತುಲನಾತ್ಮಕ ವಿಶ್ಲೇಷಣೆಗಳು ನಿಜವಾಗಿಯೂ ಶ್ಲಾಘನೀಯ. ಉತ್ತರ ಕನ್ನಡದ ಬುಡಕಟ್ಟು ಜನಾಂಗಗಳ ಕುರಿತ ಅಧ್ಯಯನಗಳು ಅನನ್ಯವಾಗಿದೆ. ಸಂಶೋಧನಾ ಪ್ರಬಂಧಗಳು, ಭಾಷಣಗಳು, ಜಾನಪದ ಲೇಖನಗಳು ಉಲ್ಲೇಖನೀಯ.

ಜಾನಪದ ಅಧ್ಯಯನದ ಜೊತೆಗೆ ಹೋಮಿಯೋಪಥಿ, ಆಯುರ್ವೇದ, ಹಳ್ಳಿಯ ಚಿಕಿತ್ಸಾ ಪದ್ಧತಿಗಳಲ್ಲಿಯೂ ಕೂಡ ಅಪಾರ ಜ್ಞಾನ ಮತ್ತು ಅನುಭವಗಳನ್ನು ಪಡೆದುಕೊಂಡಿದ್ದರು. ಸಾವಿರಾರು ರೋಗಿಗಳು ಇದರ ಲಾಭವನ್ನು ಪಡೆದುಕೊಂಡಿದ್ದಾರೆ. ಉಚಿತವಾಗಿ ಔಷಧಿಗಳನ್ನು ಕೊಡುತ್ತಿದ್ದರು. ಕೆಲಸ ಮಾಡುವ ವೈಖರಿಯನ್ನು ನೋಡಿದಾಗ ಇಂಗ್ಲೀಷಿನ 'One man army' ನೆನಪಾಗುತ್ತದೆ.

ನಾವು ನಾಲ್ಕು ಮಕ್ಕಳು ರೇಣುಕಾ, ರಾಮಕೃಷ್ಣ, ಸುನಂದಾ ಹಾಗು ಸವಿತಾ. ನಾವು ಚಿಕ್ಕವರಿರುವಾಗ, "ಯಾಕಪ್ಪಾ ಈ ಹಳ್ಳಿಗರ ಹಾಡು, ಕಥೆ, ಸಾಹಿತ್ಯಗಳನ್ನಾದರೂ ಸಂಗ್ರಹಿಸುತ್ತಾರೋ" ಏನೂ ಪ್ರಯೋಜನವಿಲ್ಲದ ಉಪಯೋಗವಿಲ್ಲದ ಕೆಲಸವೆಂದೂ, ವೇಳೆ ಹರಣವೆಂದೂ ಅನ್ನಿಸುತ್ತಿತ್ತು. ಆದರೆ, ಈಗ ಕಷ್ಟಪಟ್ಟು ಸಂಗ್ರಹಿಸಿದ್ದರಲ್ಲಿ ಕೆಲವನ್ನಾದರೂ ಉಳಿಸಬೇಕೆಂಬ ಹಂಬಲದಿಂದ ಕೆಲಸ ಮಾಡತೊಡಗಿದಾಗ ಇದೆಷ್ಟು ಕಷ್ಟತರವಾದ, ಕ್ಲಿಷ್ಟವಾದ ಕೆಲಸವೆಂದು ತಿಳಿಯಹತ್ತಿದೆ. Absent minded professor ಆದರೂ ಜಾನಪದ ವಿಷಯಗಳನ್ನು ಸಂಗ್ರಹಿಸುವಾಗ ಹೇಳಿದವರ ಹೆಸರು, ಬರೆಸಿಕೊಂಡ ದಿನಾಂಕ, ವಿವಿಧ ವಿಷಯಗಳ ವಿಂಗಡಣೆ, ಸಂಸ್ಕರಣೆಗಳನ್ನು ಅಚ್ಚುಕಟ್ಟಾಗಿ ಮಾಡಿದ್ದಾರೆ, ಅಂದಿನ ದಿನಗಳಲ್ಲಿ ಅಷ್ಟೊಂದು ಶ್ರಮ ವಹಿಸದಿದ್ದಾರೆ. ಸಂಗ್ರಹಿಸಿದ್ದೆಲ್ಲವೂ ನಶಿಸಿಹೋಗುತ್ತಿದ್ದವೆಂಬ ಅನುಭವವಾಗುತ್ತದೆ. ದೂರದೃಷ್ಟಿ ಮೆಚ್ಚುವಂಥದ್ದು. ಬಹುಶಃ ನಿರೂಪಕರಾರೂ ಈಗಿಲ್ಲ. ಅವರ ಸಂಗ್ರಹಗಳೂ ಅವರ ಜೊತೆಯೇ ಆಧುನಿಕತೆಯ

ಜೀವನಶೈಲಿಯಲ್ಲಿ ಅಡಗಿಹೋಗಿದೆ. ಈಗಿನ ತಲೆಮಾರಿನವರ ಹತ್ತಿರ ಸ್ವಲ್ಪವೂ ಸಿಗುವ ಆಸೆಯಿಲ್ಲ. ಮಾಡಿದ ಸಂಗ್ರಹವನ್ನು ಅವಲೋಕಿಸಿದಾಗ ಜನಪದರ ಮುಗ್ಧ ಮನಸ್ಸು, ಸ್ವಚ್ಛಂದ ವಾತಾವರಣ, ಆಗಿನ ಸಾಮಾಜಿಕ ರೀತಿ-ನೀತಿಗಳ ಕಲ್ಪನೆ, ಜೀವನದ ಸರಳತೆ, ಸರಳ-ಸುಲಭ ಚಿಕಿತ್ಸಾಪದ್ಧತಿ ಎಲ್ಲ ತಿಳಿಯ ಹತ್ತಿದೆ.

ತಂದೆಯವರೇ ಹೇಳಿಕೊಂಡಂತೆ ಅವರಿಗೆ ಹಳ್ಳಿಯ ಹಾಡುಗಳನ್ನು ಕಲಿತು, ಹೇಳುವ ಹವ್ಯಾಸ ಚಿಕ್ಕಂದಿನಿಂದೇ ಇತ್ತು. ಧ್ವನಿ ಬಹಳ ಮಧುರವಾಗಿತ್ತು; ಸುಶ್ರಾವ್ಯವಾಗಿ ಹೇಳುತ್ತಿದ್ದರು. ಹವ್ಯಕ ಹೆಂಗಸರಲ್ಲಿ ಹಬ್ಬ-ಹರಿದಿನಗಳಲ್ಲಿ, ಮದುವೆ ಮುಂಜಿಗಳಲ್ಲಿ, ಮುಂಜಾನೆ, ಸಂಜೆ ಕೆಲಸ ಮಾಡುವಾಗ ಹಾಡುಗಳನ್ನು ಹೇಳುವ ಪರಿಪಾಠವಿತ್ತು. ಹೀಗಾಗಿ ಅರಿವಿಲ್ಲದಂತೆ ಜಾನಪದದತ್ತ ವಾಲಿದ್ದರು. ಮೊದಮೊದಲು ಸಮಯದ ಅಭಾವದಿಂದ, ಹೋಮಿಯೋಪಥಿ ಔಷಧಗಳ ಅಭ್ಯಾಸ, ದಿನಾಲೂ ಬರುವ ರೋಗಿಗಳ ಉಪಚಾರ, ಕಾಲೇಜಿನ ಕೆಲಸಗಳ ಮೂಲಕ ಹೆಚ್ಚು ಸಮಯ ಸಿಗುತ್ತಿರಲಿಲ್ಲ. ಕೆನರಾ ಕಾಲೇಜಿಂದ ಅಧ್ಯಾಪಕ ಕೆಲಸದಿಂದ ನಿವೃತ್ತಿಯ ನಂತರ ಉಳಿದ ಪೂರ್ತಿ ಆಯುಷ್ಯವನ್ನು ಜಾನಪದಕ್ಕಾಗಿಯೇ, ಆದರ ಸಂಗ್ರಹ, ಉಳಿಸುವ ಕೆಲಸಕ್ಕೇ ಮೀಸಲಿಟ್ಟಿದ್ದರು. ಉತ್ತರ ಕನ್ನಡದ ಬಹುತೇಕ ಎಲ್ಲ ಹಳ್ಳಿಗಳನ್ನು ತಿರುಗಿ ಸಾಕಷ್ಟು ವೈವಿಧ್ಯಪೂರ್ಣ ಜಾನಪದ ಸಾಹಿತ್ಯವನ್ನು ಸಂಗ್ರಹಿಸಿದ್ದರು. ಸಾಧ್ಯವಾದಷ್ಟು ಪ್ರಕಟಣೆ ಕಂಡಿವೆ.

ಈ ಕ್ಷೇತ್ರದಲ್ಲಿ ಅವರ ಏಳ್ಗೆಯನ್ನು ಕಂಡು ಪ್ರಕಟಣೆಗಳಿಗೆ ತೊಡಕನ್ನು ತಂದು ಒಡ್ಡುವವರೂ ಇದ್ದರು. ಗಮನಕ್ಕೆ ಬಂದರೂ ಅಷ್ಟಾಗಿ ಹಚ್ಚಿಕೊಳ್ಳದೆ ತಮ್ಮ ಕೈಯಿಂದ ಖರ್ಚು ಮಾಡಿ ಹಲವಾರು ಪುಸ್ತಕಗಳನ್ನು ಪ್ರಕಟಿಸಿದ್ದರು. ಜಾನಪದ ವೈದ್ಯಕೀಯದಲ್ಲಿ, ಅಂದರೆ- ಹಳ್ಳಿಯ ಚಿಕಿತ್ಸಾಪದ್ಧತಿಗಳನ್ನು ಅವರಷ್ಟು ಸಂಗ್ರಹಿಸಿ ಪ್ರಕಟಿಸಿದವರು ವಿರಳವೆಂದೇ ನನ್ನ ಭಾವನೆ. ಆದರೆ, ಕೊನೆಗಾಲದಲ್ಲಿ ಪರಿಷ್ಕರಿಸಿ, ವಿಂಗಡಿಸಿ, ನಾವಿಬ್ಬರೂ ಕೂಡಿ ತಯಾರಿಸಿದ ಹಸ್ತಪ್ರತಿಗಳು– ಸುಮಾರು ಮೂವತ್ತೈದು ಹಸ್ತಪ್ರತಿಗಳು. ನಮಗಾರಿಗೂ ಅರಿವಿಲ್ಲದಂತೆ ಅವೆಲ್ಲವೂ ಯಾರದೋ ಕೈ ಸೇರಿದೆ; ಅವೆಲ್ಲ ಅತ್ಯಮೂಲ್ಯವಾಗಿದ್ದವು. ಎಷ್ಟು ಪ್ರಯತ್ನಿಸಿದರೂ ಲಭ್ಯವಾಗಲಿಲ್ಲ. ಆದರೆ, ಒಂದು ಮಾತು– ಪರಿಷ್ಕರಿಸಿ, ವಿಂಗಡಿಸುವ ಮೊದಲು ಅವುಗಳ ಎರಡು-ಮೂರು ಮೂಲಪ್ರತಿಗಳು ಇರುತ್ತಿದ್ದವು. ಆ ಸಂಗ್ರಹಗಳನ್ನು ನಮ್ಮ ಮನೆಗೆ ತಂದು, ಆ ಮೂಲಪ್ರತಿಗಳಿಂದ ಸುಮಾರು ೧೪-೧೫ ಹಸ್ತಪ್ರತಿಗಳನ್ನು ತಯಾರಿಸಿ ಅದನ್ನು ಇ-ಪ್ರಕಟಣೆಯ ಮೂಲಕ ಜಾನಪದ ಪ್ರೇಮಿಗಳಿಗೆ ತಲುಪಿಸುವ ಪ್ರಯತ್ನ ಮಾಡಲಾಗಿದೆ.

ನಾವಂತೂ ಈ ಕೆಲಸದ ಆಶೆಯನ್ನೇ ಬಿಟ್ಟಿದ್ದೆವು. ಅನೇಕ ಜಾನಪದ ಕ್ಷೇತ್ರದಲ್ಲಿದ್ದವರ ಸಂಪರ್ಕ ಮಾಡುವ ಪ್ರಯತ್ನ ಮಾಡಿದರೂ ಏನೂ ಪ್ರಯೋಜನವಾಗಲಿಲ್ಲ. ಎಲ್ಲರೂ ಹೆಗಡೆಯವರ ಬಗ್ಗೆ ಗೌರವದ ಮಾತನಾಡುವವರೇ ಹೊರತು ಸಹಾಯಕ್ಕೆ ಅಥವಾ

ಮಾರ್ಗದರ್ಶನಕ್ಕೆ ಯಾರೂ ಮುಂದೆ ಬರಲಿಲ್ಲ. ಕೊನೆಯಲ್ಲಿ ಶ್ರೀಯುತ ನಂದಕುಮಾರರ ಪರಿಚಯವಾಗಿ ಅವರು ಶ್ರೀಯುತ ಬೇಳೂರು ಸುದರ್ಶನರ ಬಗ್ಗೆ ಹೇಳಿದರು. ನಾನು ನಿರಾಸೆಯಿಂದಲೇ ಕೊನೆಯ ಪ್ರಯತ್ನವೆಂದು ಅವರಿಗೆ ಫೋನ್ ಮಾಡಿದೆ. ಅವರು ಸಹಾಯ ಹಾಗೂ ಮಾರ್ಗದರ್ಶನ ಮಾಡಲು ಮುಂದೆ ಬಂದರು. ಇಂದು ಅವರ ಜೊತೆಯಲ್ಲಿ ಅವರ ಅನೇಕ ಸ್ನೇಹಿತರೂ ಕೈ ಜೋಡಿಸಿದ್ದಾರೆ. ತಂದೆಯವರೇ ಹೇಳಿಕೊಂಡಂತೆ ೧೫ ಸಾವಿರ ಪುಟಗಳ ಸಂಗ್ರಹದಲ್ಲಿದ್ದ ಸ್ವಲ್ಪ ಭಾಗವನ್ನು ಉಳಿಸುವ ಪ್ರಯತ್ನ ಸಾಗಿದೆ. ಇಷ್ಟು ಉಳಿದರೂ ನಮ್ಮೆಲ್ಲರ ಪ್ರಯತ್ನ ಸಾರ್ಥಕವಾಯಿತೆಂದು ತಿಳಿಯುತ್ತೇನೆ. ಈ ನಿಟ್ಟಿನಲ್ಲಿ ಸಹಾಯ ಮಾಡಿದ (ಪ್ರತ್ಯಕ್ಷವಾಗಿ, ಅಪ್ರತ್ಯಕ್ಷವಾಗಿ) ಎಲ್ಲರಿಗೂ ನಾವು ಚಿರಋಣಿಗಳು.

**ಶ್ರೀಮತಿ ರೇಣುಕಾ ರಾಮಕೃಷ್ಣ ಭಟ್ಟ**

9535192074 / 8660421309

# ಡಾ॥ ಎಲ್ ಆರ್ ಹೆಗಡೆ ಕೃತಿಗಳು

### ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

| | | |
|---|---|---|
| ೧ | ಮೂಢನಂಬಿಕೆಗಳು | (ಪ್ರಚಾರೋಪನ್ಯಾಸ) |
| ೨ | ಜಾನಪದ ಕಥೆಗಳು | (ಪ್ರಚಾರೋಪನ್ಯಾಸ) |
| ೩ | ಪುರಾಣ ಜಿಜ್ಞಾಸೆ | (ಪ್ರಚಾರೋಪನ್ಯಾಸ) |
| ೪ | ಜನಪದ ಸಾಹಿತ್ಯದಲ್ಲಿ ಮದುವೆ | (ಪ್ರಚಾರೋಪನ್ಯಾಸ) |
| ೫ | ಬತ್ತಲೇಶ್ವರ ರಾಮಾಯಣ | (ಪ್ರಚಾರೋಪನ್ಯಾಸ) |
| ೬ | ಮಕ್ಕಳಲ್ಲಿ ಮೂಢನಂಬಿಕೆಗಳ ಬೆಳವಣಿಗೆ | (ಪ್ರಚಾರೋಪನ್ಯಾಸ) |
| ೭ | ಪರಮೇಶ್ವರಿಯ ಪದಗಳು | (ಕಥನಗೀತೆಗಳು) |
| ೮ | ಗುಮ್ಮನ ಪದಗಳು | (ಕಥನಗೀತೆಗಳು) |
| ೯ | ಉತ್ತರ ಕನ್ನಡ ಜನಪದ ಕಥೆಗಳು | (ಪ್ರಚಾರೋಪನ್ಯಾಸ) |
| ೧೦ | ಹಾಲಿನ ತೆನೆ | (ಜಾನಪದ ತ್ರಿಪದಿಗಳು) |
| ೧೧ | ಕುಮಾರವ್ಯಾಸನ ಪಾತ್ರಸೃಷ್ಟಿ | (ಮಹಾಪ್ರಭಂಧ) |
| ೮೦ | ಗಾಮೊಕ್ಕಲ ಕಥೆಗಳು | |

### ಮೈಸೂರು ವಿಶ್ವವಿದ್ಯಾಲಯ

| | | |
|---|---|---|
| ೧೨ | ತಿಮ್ಮಕ್ಕನ ಪದಗಳು | (ಕಥನಗೀತೆಗಳು) |
| ೧೩ | ಕೆಲವು ಲಾವಣಿಗಳು | (ಕಥನಗೀತೆಗಳು) |
| ೧೪ | ನಮ್ಮ ಜನಪದ ಕಥೆಗಳು | (ಕಥನಗೀತೆಗಳು) |
| ೧೫ | ಮಲೆನಾಡಿನ ಸೆರಗಿನ ಕಥೆಗಳು | (ಕಥನಗೀತೆಗಳು) |

### ಬೆಂಗಳೂರು ವಿಶ್ವವಿದ್ಯಾಲಯ

| | | |
|---|---|---|
| ೧೬ | ಹಾಡುಂಟೇ ನನ್ನ ಮಡಿಲಲ್ಲಿ | (ತ್ರಿಪದಿ ಸಂಕಲನ) |
| ೧೭ | ಗುಮಟೆಯ ಪದಗಳು | (ಜನಪದ ಗೀತೆಗಳು) |
| ೧೮ | ಮುಕ್ರಿ ಮತ್ತು ಹೊಲೆಯರ ಪದಗಳು | (ಜನಪದ ಗೀತೆಗಳು) |

### ಗ್ರಾಮಜೀವನ ಕಾರ್ಯಾಲಯ, ಕುಮಟಾ

| | | |
|---|---|---|
| ೧೯ | ಬಾಳ ದೀಪಾವಳಿ | (ಕವನ ಸಂಕಲನ) |

### ವಿವೇಕೋದಯ ಗ್ರಂಥಮಾಲೆ, ಗುಡಿಬಂಡೆ

| | | |
|---|---|---|
| ೨೦ | ಜೈನಭಾರತ ಕಥೆಗಳು | |

## ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು

| | | |
|---|---|---|
| ೧೧ | ಜನಪದ ಸಾಹಿತ್ಯ | (ವಿಮರ್ಶಕ ಗ್ರಂಥ) |
| ೧೨ | ಗೊಂಡರ ಪದಗಳು | (ಜನಪದ ಗೀತೆಗಳು) |
| ೧೩ | ಮಾಚಯ ಕಥನ ಗೀತಗಳು | ಕ.ಸಾ.ಪ., ಬೆಂಗಳೂರು ೨೦೦೨ |
| ೧೪ | ಕತೆ ಗಾದೆಗಳು | ಕ.ಸಾ.ಪ., ಬೆಂಗಳೂರು ೨೦೦೪ |

## ಸಮಾಜ ಪುಸ್ತಕಾಲಯ, ಧಾರವಾಡ

| | | |
|---|---|---|
| ೧೫ | ಕಾವ್ಯ ವ್ಯಾಸಂಗ | (ಕಾವ್ಯವಿಮರ್ಶೆ) |
| ೧೬ | ಸುವ್ವೀ ಸುವ್ವೀ ಸುವ್ವಾಲೆ | (ಜಾನಪದ ತ್ರಿಪದಿಗಳು) |
| ೧೭ | ಬೆಳಿಯಮ್ಮನ ಹಾಡುಗಳು | (ಕಥನಗೀತೆಗಳು) |
| ೧೮ | ಜನಪದ ಜೀವನ ಮತ್ತು ಕಲೆ | (ಲೇಖನಗಳು) |
| ೧೯ | ಗಾಂವಠಿ ಚಿಕಿತ್ಸೆ | |
| ೨೦ | ಪಾಕರಸಾಯನ | (ಅಡಿಗೆ ಗ್ರಂಥ) |

## ಐ.ಬಿ.ಎಚ್. ಪ್ರಕಾಶನ, ಬೆಂಗಳೂರು

| | | |
|---|---|---|
| ೨೧ | ಕರ್ನಾಟಕದ ಕರಾವಳಿಯ ಜನಪದ ಗೀತೆಗಳು | |
| ೨೨ | ಕರ್ನಾಟಕ ಕರಾವಳಿಯ ಜನಪದ ಕಥೆಗಳು | |
| ೨೩ | ಗೇಣುಗುಡ್ಡದ ಕುಳ್ಳ | (ಮಕ್ಕಳ ಕಥೆಗಳು) |
| ೨೪ | ಉತ್ತರ ಕನ್ನಡದ ಗೊಂಡರು | |
| ೨೫ | ಉತ್ತರ ಕನ್ನಡದ ಸಿದ್ದಿಯರು | (೨ನೇ ಆವೃತ್ತಿ) |
| ೨೬ | ಜನಪದ ಸಾಹಿತ್ಯ | (ಇತರರೊಡನೆ ಬರೆದುದು) |
| ೨೭ | ಗೇಣುಗಡ್ಡದ ಕುಳ್ಳ ಮತ್ತು ಇತರ ಕಥೆಗಳು - ೧೯೮೦ | |

## ಸಾಹಿತ್ಯ ಭಂಡಾರ, ಹುಬ್ಬಳ್ಳಿ

| | | |
|---|---|---|
| ೨೮ | ಲಂಕಾದಹನ | (ಬತ್ತಲೇಶ್ವರ ರಾಮಾಣದ ಭಾಗ) |
| ೨೯ | ಅನುಭವ ಚಿಕಿತ್ಸೆ | (ವೈದ್ಯಗ್ರಂಥ) |
| ೪೦ | ಆರೋಗ್ಯ ಧರ್ಮ ಪಾಲನೆ | (ವೈದ್ಯಗ್ರಂಥ) |
| ೪೧ | ದನಗಳ ವೈದ್ಯ | (ವೈದ್ಯಗ್ರಂಥ) |
| ೪೨ | ರೂಢಿಯ ಚಿಕಿತ್ಸೆ | (ವೈದ್ಯಗ್ರಂಥ) |

## ವಿಶ್ವ ಪ್ರಕಾಶನ, ಹುಬ್ಬಳ್ಳಿ

೪೩ ಸುಲಭ ಚಿಕಿತ್ಸೆ (ವೈದ್ಯಗ್ರಂಥ)

---

## ಜ್ಞಾನಸಾಧನ ಗ್ರಂಥಮಾಲೆ ಹೆಗೆಡೆ, ಕುಮಟಾ/ಸಿದ್ದಾಪುರ

೪೪ ಹಕ್ಕಿ ನರಸಣ್ಣ (ಕಥಾ ಸಂಕಲನ)

೪೫ ಸಿದ್ದಿಯರ ಕಥೆಗಳು (ಜನಪದ ಕಥೆಗಳು)

೪೬ ಕರಾವಳಿಯ ಕಥೆಗಳು (ಜನಪದ ಕಥೆಗಳು)

೪೭ ಜನಪದ ಭಾರತದ ಕಥೆಗಳು (ಜನಪದ ಕಥೆಗಳು)

೪೮ ಕುಮರಿ ಮರಾಟಿಗರ ಕಥೆಗಳು (ಜನಪದ ಕಥೆಗಳು)

೪೯ ಜನಪದ ವೈದ್ಯ (ಜನಪದ ಕಥೆಗಳು)

೫೦ ಹೆಂಗಸರ ಗೀತಗಳು

೫೧ ಕುಮಾರವ್ಯಾಸ (ವಿಮರ್ಶೆ)

೫೨ ಮಂಗಲ ಗೀತಗಳು

೫೩ ಪೂಜಾ ಗೀತಗಳು

೫೪ ಒಗಟುಗಳು ಮತ್ತು ಕಥೆಗಳು

೫೫ ಅಪೂರ್ವ ಮೃದಂಗ (ಜನಪದ ಕಥೆಗಳು)

೫೬ ಹೋಮಿಯೋಪಥಿ ಚಿಕಿತ್ಸೆ

---

## ಕದಂಬ ಪ್ರಕಾಶನ, ಸಿರ್ಸಿ

೫೭ ಹಾಲಕ್ಕಿ ಹೆಂಗಸರ ಮದುವೆ ಹಾಡುಗಳು

---

## ಸಾಹಿತ್ಯ ಅಕಾಡೆಮಿ, ನವದೆಹಲಿ

೫೮ ಜಾನಪದ ಗಿರಿಜನರ ಕಥೆಗಳು

---

## ಶ್ರೀ ರಾಜು ಶೆಟ್ಟಿ, ಕುಮಟಾ

೫೯ ಆಹಾರ ಉಪಾಹಾರ

೬೦ ಆರೋಗ್ಯವೇ ಭಾಗ್ಯ

---

## ಜ್ಞಾನಜ್ಯೋತಿ ಪ್ರಕಾಶನ, ಸಿದ್ದಾಪುರ (ಉ.ಕ)

೬೧ ಊರೌಷಧಿಗಳ ಚಿಕಿತ್ಸೆ

---

## ಸಾಹಿತ್ಯ ಪ್ರಕಾಶನ, ಹುಬ್ಬಳ್ಳಿ

೬೨ ಪಶುವೈದ್ಯ ರತ್ನಾಕರ

## ಜ್ಞಾನಸಾಧನ ಗ್ರಂಥಮಾಲೆ, ಸಿದ್ದಾಪುರ (ಉ.ಕ)

| | | |
|---|---|---|
| ೬೩ | ಕನ್ನಡ ಗಾದೆಗಳು | |
| ೬೪ | ಹಳಗನ್ನಡದ ಕವಿಗಳು | |
| ೬೫ | When The Indicated Remedy Fails in Homeopathic Practice | |
| ೬೬ | ಗರ್ಭಿಣಿ, ಬಾಣಂತಿ ಉಪಚಾರ | ಸಂಗ್ರಾಹಕಿ ಸೌ. ರೇಣುಕಾ ಭಟ್ಟ |
| ೬೭ | ಮಧುರ ಗೀತಗಳು | ಸಂಗ್ರಾಹಕಿ ಸೌ. ರೇಣುಕಾ ಭಟ್ಟ |

## ಡಾ. ಎಲ್. ಆರ್. ಹೆಗಡೆ ಕೃತಿ ಪ್ರಕಾಶನ ಸಮಿತಿ, ಸಿರ್ಸಿ

| | | |
|---|---|---|
| ೬೮ | ಡಾ. ಎಲ್. ಆರ್. ಹೆಗಡೆ ಕೃತಿ ಸೂಚಿ | |
| ೬೯ | ಬಿಂಬ ಪ್ರತಿಬಿಂಬ | |
| ೭೦ | ಗಾದೆ ಕಥೆಗಳು | |
| ೭೧ | ಹೊನ್ನಮ್ಮನ ಮನೆಯ ಕಥೆಗಳು | |
| ೭೨ | ಮಾತಿನರಗಿಣಿಯೇ ನುಡಿದಾವೋ | |
| ೭೩ | ನಾಡ ಮದ್ದು | |
| ೭೪ | ಜಾನಪದ ಕ್ರೀಡೆ | |
| ೭೫ | ಆರೋಗ್ಯ ದರ್ಶನ | |
| ೭೬ | ಸಣ್ಣ ಕೂಸ ಹೇಳಿದ ಕಥೆಗಳು | |
| ೭೭ | ಪಡುವಣದ ಬೆಡಗು | (ವಿದ್ವಾಂಸರ ಉಪನ್ಯಾಸಗಳು) |
| ೭೮ | ನಾಮಧಾರಿ ಕತೆಗಳು | ಡಾ.ಎಲ್. ಆರ್. ಹೆಗಡೆ ಕೃತಿ ಪ್ರಕಾಶನ ಸಮಿತಿ, ಕುಮಟಾ |

## ಕನ್ನಡ ಸಂಘ ಕ್ರೈಸ್ತ ಕಾಲೇಜು, ಬೆಂಗಳೂರು

| | | |
|---|---|---|
| ೭೯ | ಅವರಿವರು ಹೇಳಿದ ಕಥೆಗಳು | |

## ರಂಗಕಲೆಗಳ ಅಧ್ಯಯನ ಕೇಂದ್ರ, ಉಡುಪಿ, ೨೦೦೨

| | | |
|---|---|---|
| ೮೦ | ಲೋಕಗೀತ ಮಂಜರಿ | ರಂಗಕಲೆಗಳ ಅಧ್ಯಯನ ಕೇಂದ್ರ ಉಡುಪಿ, ೨೦೦೨ |
| ೮೧ | ಸಾಂಪ್ರದಾಯಿಕ ಅಡುಗೆಗಳು | ಸಂಗ್ರಾಹಕಿ ಸೌ.ರೇಣುಕಾ ಭಟ್ಟ |

## ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು

| | | |
|---|---|---|
| ೮೨ | ಡಾ|| ಎಲ್. ಆರ್. ಹೆಗಡೆಯವರ ಕ್ಷೇತ್ರ ಕಾರ್ಯದ ನೆನಪುಗಳು | ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು |

**ಸಪ್ನ ಬುಕ್ ಹೌಸ್**

೮೩ ಆರೋಗ್ಯಕರ ಚಿಕಿತ್ಸೆ (ವೈದ್ಯಗ್ರಂಥ)

೮೪ ಹೋಮಿಯೋಪಥಿ ಔಷಧಿ ಗುಣಧರ್ಮ
ಮತ್ತು ಚಿಕಿತ್ಸಾಸಾರ

---

- ಇವುಗಳಲ್ಲಿ 'ಹಾಲಕ್ಕಿ ಹೆಂಗಸರ ಮದುವೆಯ ಹಾಡುಗಳು' ಎಂಬ ಗ್ರಂಥಕ್ಕೆ ೧೯೮೮ನೇ ಸಾಲಿನ 'ಉತ್ತಮ ಜನಪದ ಗೀತ ಸಂಕಲನ' ಎಂದು ಮತ್ತು 'ಜನಪದ ಮತ್ತು ಗಿರಿಜನರ ಕಥೆಗಳು' ಎಂಬ ಗ್ರಂಥಕ್ಕೆ ಗದ್ಯ ಪ್ರಕಾರದಲ್ಲಿ ೧೯೯೦ನೇ ಸಾಲಿನ ಉತ್ತಮ ಗ್ರಂಥವೆಂದೂ ಕರ್ನಾಟಕ ಜಾನಪದ ಯಕ್ಷಗಾನ ಅಕಾಡೆಮಿಯ ಪುಸ್ತಕ ಬಹುಮಾನ ದೊರೆತಿವೆ.
- ೧೯೮೬ ಜಾನಪದ ಅಕಾಡೆಮಿ ಪ್ರಶಸ್ತಿ- ಹೊಸಪೇಟೆಯಲ್ಲಿ ಹಾ.ಮಾ. ನಾಯ್ಕರಿಂದ ಪ್ರಶಸ್ತಿ ಪ್ರಧಾನ.
- ೨೦೦೧ ನವಂಬರ್ ೧, ಮಾನ್ಯ ಮುಂತ್ರಿ ಎಸ್.ಎಂ. ಕೃಷ್ಣರಿಂದ ರಾಜ್ಯ ಪ್ರಶಸ್ತಿ ಪ್ರಧಾನ.

# ಪರಿವಿಡಿ


ಪೀಠಿಕೆ 15

1. ಅರ್ಜುನ ಜೋಗಿ 27
- **ದೇವಿ ಕೋಂ ಗಣಪಯ್ಯ ನಾಯ್ಕ**, ಗೇರಸೊಪ್ಪೆ

2. ಮಗಳು ನಾನೇ ಮಗನುವಾ ನಾನೇ 54
- **ಸೌ| ಮಾಸ್ತಿ ರಾಮನಾಯ್ಕ**, ವಸ್ತಿ: ಹೆಗಡೆ ಊರು

3. ಘಾತಕ ಅಣ್ಣ 61
- **ದಿ. ಗೌರಿ ಶಿವಪ್ಪನಾಯ್ಕ**, ಹೆಗಡೆ ಊರು

4. ನನಗೇ ಕುದ್ರಿಗೇ ವಂದೇ ಸೊಡ್ಲೇ 68
- **ಸೌ| ಮಾಸ್ತಿ ರಾಮನಾಯ್ಕ**, ಮೂರೂರು, ವಸ್ತಿ: ಹೆಗಡೆ ಊರು

5. ದುಡುಕಿದ ಕೆಡುಕು 76
- **ತಿಮ್ಮಕ್ಕ ಕಂಚು ನಾಯ್ಕ**, ಹೆಗಡೆ ಊರು

6. ಕೆಂಚಮ್ಮ 82
- **ದಿ. ಬೆಳಿಯಮ್ಮ ಪುಟ್ಟುನಾಯ್ಕ**, ಹೊಸಾಕುಳಿ

7. ಅತ್ತೆ ಗೌರಮ್ಮ, ಸೊಸೆ ಹೊನ್ನಮ್ಮ 88
- **ದಿ. ಸೌ| ನಾಗಮ್ಮ ಮಾಸ್ತಿನಾಯ್ಕ**, ಹೆಗಡೆ ಊರು

8. ಕೋಳಿ ಜನ್ಮ 95
- **ದೇವಿ ಗಣಪತಿ ನಾಯ್ಕ**, ಊರಕೇರಿ

9. ಕಾಸೀ ದೇಸಾಂತ್ರೇ ನೆಡುದಾನೇ 101
- **ಮಾದೇವಿ ನಾರಾಯಣ ನಾಯ್ಕ**, ಗೇರಸೊಪ್ಪೆ

10. ಕಾಳಿಂಗರಾಯ 104
- **ದಿ. ನಾಗಮ್ಮ ನರಸ ನಾಯ್ಕ**, ಮಿರ್ಜಾನ

11. ಸೂರ್ಯಚಕ್ರ 110
- **ದಿ. ನಾಗಮ್ಮ ಗೋವಿಂದ ನಾಯ್ಕ**, ತಾರಿಬಾಗಿಲ, ಹೆಗಡೆ ಊರು

# ಪೀಠಿಕೆ

**“ಅರ್ಜುನ ಜೋಗಿ”** ಎಂದು ಹೆಸರಿಸಿದ ಕಥನಗೀತದಲ್ಲಿ ಅರ್ಜುನ ಮತ್ತು ಆತ ಜಾಲಗುನ್ನಿಯನ್ನು ಮಾಡಿ ಕದ್ದುಕೊಂಡು ಹೋದ ಹೆಂಗಸು ಸುಭದ್ರೆ ಎಂದು ತಿಳಿಸಿದ್ದರು. ಇವರು ಮಹಾಭಾರತದ ಅರ್ಜುನ ಸುಭದ್ರೆ ಅಲ್ಲ. ಮಹಾಭಾರತದ ಕಥೆಯ ಪಾಠಗಳಲ್ಲಿ ಅರ್ಜುನನು ಜೋಗಿ ವೇಷ ತೊಟ್ಟು ಕಳಿಸಿದ ಹಲವು ಗೀತ ಪಾಠಗಳಿವೆಯಾದರೂ ಇಲ್ಲಿ ಹೆಸರುಗಳನ್ನು ಬಿಟ್ಟರೆ ಇದೊಂದು ಬಹಳ ಜನಪ್ರಿಯವಾದ ಜನಪದ ಕಥೆಯ ಪಾಠ.

ಇಲ್ಲಿ ಏಳು ಮಂದಿ ಮಕ್ಕಳು ಒಬ್ಬ ತಾಯಿಗೆ ಮತ್ತು ಅವರಿಗೂ, ಮಹಾಭಾರತ ಕಥೆಗೂ ಯಾವುದೇ ಸಂಬಂಧವಿಲ್ಲ ಎಂಬುದು ಸ್ಪಷ್ಟವೇ ಇದೆ. ಹಿಂದಿನ ಕಾಲದ ಹಲವು ಗೀತಗಳಲ್ಲಿಯಂತೆ ಯುದ್ಧಕ್ಕೆ ಹೋಗಲು ದಂಡಿನ ಕರೆಯೋಲೆ ಬರುವದು ಇಲ್ಲೂ ಇದೆ. ಸಶಕ್ತ ಗಂಡು ಹುಡುಗರು ಪ್ರಾಯ ಬರುವಾಗ ಆ ಕಾಲದ ಯುದ್ಧದಲ್ಲಿ ಬಳಸುವ ಆಯುಧಗಳನ್ನು ಉಪಯೋಗಿಸುವುದನ್ನು ಕಲಿತಿರುತ್ತಿದ್ದರು.

ದಂಡಾಡಲು ಹಿರಿಯನು ಹೊರಡುವ ಮೊದಲು– ತಾಯಿ ಅಡಿಗೆ ಮಾಡುವ, ಬಚ್ಚಲ ನೀರು ಕಾಯಿಸುವ ಸಂಕ್ಷಿಪ್ತ ಬಣ್ಣನೆ, ಬೇಕಾದ ವಿವರಗಳು ಇಲ್ಲಿವೆ. ಇಲ್ಲಿ ದೇವರ ಪೂಜೆ ಮಾಡಿ, ಉಂಡು, ಕುದುರೆ ಹತ್ತಿದ ಏಳು ಜನರಿಗೆ ಹೆಂಡಿರು ಚಿನ್ನದ ಆರತಿಯನ್ನು ಬೆಳಗಿ ಕಳಿಸುವ ಸುಂದರ ಚಿತ್ರಣವೂ ಇದೆ.

ಅವರು ಹೋದ ಮೇಲೆ ಬಂದ ಅರ್ಜುನ ಜೋಗಿಯು ತಾಳ ಹೊಡೆದು ಬಂದು ಕೂತನು. ಇವನು ಮಾಂತ್ರಿಕ ಶಕ್ತಿಯುಳ್ಳ ದುಷ್ಟ. ಆರು ಜನರು ಮಡದಿಯರು ‘ಪಡಿಧಾನ್ಯ ಕೊಡುವೆ’ ಅಂದರೆ, ‘ಕಿರಿಯ ಸುಭದ್ರೆಯೇ ಪಡಿ ಕೊಡಬೇಕು’ ಎಂದು ಹೇಳುವನು. ಹೆಂಗಳೆಯರು ಕೈಕೈ ಹಿಡಿದು ನಿಂತಾಗವನು ಮಂಡಲ ಬರೆದು- ‘ಅದರಲ್ಲಿ ಕೊಡಬೇಕು’ ಎಂದನು. ಕಿರಿಯ ಸುಭದ್ರೆಯ ಅಂದ-ಚೆಂದ ಅಸಾಧಾರಣ. ಆರು ಅಕ್ಕಂದಿರು ತಂಗಿಯನ್ನು ಹಿಡಿದವರು ಅವನು ಎಲ್ಲರೂ ಬಿಡಿರೆಂದು ಹೇಳಲು ಬಿಟ್ಟರು.

ಮಾಂತ್ರಿಕ ಹರಳನ್ನು ಒಗೆದು ಅವಳನ್ನು ಜಾಲಗುನ್ನಿ ರೂಪಕ್ಕೆ ಪರಿವರ್ತಿಸಿದನು. ಈ ಮಾಂತ್ರಿಕ ನಾಯಿಯೊಡನೆ ನಡೆದನು. ಹಿರಿಯನಿಗೆ ಈ ಘಟನೆಯ ತಾರುಕ್ ಆಯಿತು, ಕಿರಿಯಳನ್ನು ಒಯ್ದದ್ದೇ ಅವರಿಗೆ ಸ್ಪಷ್ಟ ತಿಳಿಯದಿದ್ದರೂ ‘ಏನೋ ಅನಾಹುತವಾಯಿತೆಂ’ದು ಮರಳುವ ಎತ್ತುಗಡೆ ಮಾಡಿದರು. ಹೆಜ್ಜೆ ಹೆಜ್ಜೆಗೂ ಕಥನ ಕಲೆಯ ಸ್ಪರ್ಶವಿರುವದು ಇಲ್ಲಿ ಕಾಣುತ್ತದೆ. ನುಡಿತದಲ್ಲಿ ಸಿದ್ಧಶೈಲಿಯ ಸಾಲುಗಳು ಅಲ್ಲಲ್ಲಿ ಮಿನುಗುತ್ತವೆ. ವಿಷಯ ತಿಳಿದ ‘ಏಳು ಮಂದಿ ಶೋಧನೆಗಾಗಿ ಹೊರಟರು.’

ಅಪಹರಿಸಿದಾಗ ಮೂರು ತಿಂಗಳ ಗರ್ಭಿಣಿ ಹಿರಿಯನ ಹೆಂಡತಿ. ಸುಭದ್ರೆ ಜೋಗಿಗೆ,

'ತನ್ನವರು ಏಳು ಮಂದಿ ಬಂದರೆ ನಿನ್ನನ್ನು ಕೊಲ್ಲುವರೆಂ'ದು ಬೆದರಿಸುತ್ತಾಳೆ. ಬಂದ ಅವರನ್ನು ಜೋಗಿ ಹರಳು ಹೊಡೆದು ಕಲ್ಲು ಮಾಡಿದ.

ಹಿರಿಯನ ಗರ್ಭಿಣಿ ಹೆಂಡತಿಗೆ ಮಗ ಹುಟ್ಟಿ ಬಾಲ್ಯದಲ್ಲಿ 'ಸ್ಕೂಲಿಗೆ ಹೋಗುವೆ' ಎಂದಿದ್ದು, ಶಾಲೆಯ ಹುಡಗರು ಚೆಂಡಿನ ಆಟವನ್ನು ಗೆದ್ದು ಹುಡುಗನಿಗೆ 'ರಂಡೆಗೆ ಹುಟ್ಟಿದ ಪೋರ' ಎಂದುದೂ, ಅಪ್ಪ ಇಲ್ಲದೆ ಹುಟ್ಟಿದವ ಎಂದುದೂ ಹಲವು ಕಥೆಗಳಲ್ಲಿ ಬರುವಂತಹದೇ. ಒಂದು ನೆನುಪು ಆಗಲು ಚಂಡಿಕೆಗೆ ಗಂಟು ಹಾಕಿದುದು, ಸ್ನಾನ ಮಾಡಿಸುವಾಗ ತಾಯಿ ಕೇಳುವದು, ಹುಡುಗನ ತಂದೆ ಮತ್ತು ಅವನ ತಮ್ಮಂದಿರೂ, ಚಿಕ್ಕತಾಯಿಯ (ಜಾಲಗುನ್ನಿ ಆದದ್ದು) ಶೋಧಕ್ಕೆ ಹೋದುದನ್ನು ಹೇಳಿದ್ದು ಸಂಕ್ಷಿಪ್ತವಾಗಿ ಸರಿಯಾಗಿ ಬಣ್ಣತವಾಗಿದೆ.

ಮುಂದೆ ಶೋಧ ಪ್ರಯಾಣ ಮಾಡಿದ ಹುಡುಗ ಅಜ್ಜವ್ವಿಯ ಮನೆಗೆ ಹೋಗಿ ಉಳಿದು, ಮುಂದೆ ಅವ ದಂಡೆ ಕಟ್ಟಿ ಚಿಕ್ಕಿಗೆ ಚೀಟಿ ಬರೆದು ಕಳಿಸಿದ್ದು ಸಮರ್ಪಕವಾಗಿದೆ. ಮುಂದೆ ಜೋಗಿಯ ಪ್ರಾಣ ಏಳು ಸಮುದ್ರದಾಚೆಯ ಪಂಜರದ ಗಿಳಿಯಲ್ಲಿರುವದನ್ನು ತಿಳಿದು ಚಿಕ್ಕತಾಯಿ ಹೇಳುವಳು. ಹುಡುಗ ಹರಳಿನ ಸಹಾಯದಿಂದ ಸಮುದ್ರದಾಟಿ ಹೋಗಿ ನವಿಲನ್ನು ಮಂತ್ರಿಸಿದ ಹರಳು ಹೊಡೆದು ಮುದ್ದೆ ಮಾಡಿದ್ದು, ಕ್ರಮೇಣ ಕೈಕಾಲು ರುಂಡ ಮುರಿದು ಕೊಂದಾಗ ಜೋಗಿ ಸಾಯುವುದು... ಹಲವು ಕಥೆಗಳಲ್ಲಿ ಬರುವ ಆಶಯ ಭಾಗವಾಗಿರುತ್ತಿದ್ದು. ವಿವರ ಹೆಚ್ಚು ಬೆಳೆಸದೆಯೇ ಕಥೆ ಮುಂದುವರಿಸಿರುವದು ಇಲ್ಲಿದೆ. ಅಲ್ಲಲ್ಲಿ ನಿರೂಪಣೆಯ ಜಾಣ್ಮೆಕಾಣುತ್ತದೆ. ಹುಡುಗನು ತನಗೆ ಆಶ್ರಯ ನೀಡಿದ್ದ ಅಜ್ಜಿಗೆ ಜೋಗಿಯ ಸಂಪತ್ತನ್ನು ಕೊಟ್ಟು, ಚಿಕ್ಕಿಯೊಡನೆ ಹೊರಟು ಮಂತ್ರಿಸಿದ ಹರಳಿನಿಂದ ಎಲ್ಲರನ್ನೂ ಮನುಷ್ಯರನ್ನಾಗಿ ಮಾಡಿ ಮರಳುವದು ಒಳ್ಳೇ ಕಥಾ ಸರಣಿಯಲ್ಲಿದೆ.

**"ಮಗಳೂ ನಾನೇ ಮಗನೂ ನಾನೇ"** ಕಥನ ಗೀತವು ಗ್ರೀಕ್ ರುದ್ರ ನಾಟಕಗಳ ವಸ್ತುವಿನ ನೆನಪು ಮಾಡುವ ದುಃಖಾಂತ ಗೀತಗಳಲ್ಲಿ ಒಂದಾಗಿದೆ. ಈ ಗೀತದ ನಡೆಯಲ್ಲಿ ಸವೇಗವಾದ, ಹಿತಮಿತವಾದ ಕಥನವಿದೆ. ಇಲ್ಲಿನ ತಂಗಿಯು– ಅಣ್ಣನು ಧರಿಸಿದ್ದ ಆಭರಣಗಳನ್ನು ತನ್ನ ಗಂಡನು ಮೈಮೇಲೆ ಧರಿಸುವಂತೆ ಮಾಡಲು ಕರೆಯಲು ಬಂದ ಅಣ್ಣನನ್ನು ಕತ್ತಿಯಿಂದ ಕೊಲ್ಲುತ್ತಾಳೆ. ಕೇವಲ ಎರಡು ಆಭರಣ. ಉಂಗುರ ಮತ್ತು ಬೆಳ್ಳಿಯ ನೇವಳದ ಸಲುವಾಗಿ ಕೊಲೆಯನ್ನು ಮಾಡುವುದು ವಾಸ್ತವಿಕವಾದ ನೆಲೆಯಲ್ಲಿ ಸಾಧ್ಯವಿದೆ. ಯುರಿಪಿಡೀಸನ 'ಮೀಡಿಯಾ' ರುದ್ರ ನಾಟಕದಲ್ಲಿ– ಮೀಡಿಯಾಳಿಗೆ ತನ್ನ ಗಂಡ ಬೇರೆ ಹೆಂಗಸನ್ನು ಮದುವೆಯಾಗಲಿರುವನೆಂಬ ಕ್ರೋಧದಲ್ಲಿ ಭಯಂಕರವಾದ ರೀತಿಯಲ್ಲಿ ಅವಳನ್ನ, ತನಗೆ ಗಂಡನ ಮೇಲೆ ಮತ್ತೆ ಸೇಡುತೀರಿಸಿಕೊಳ್ಳಲು ಮಕ್ಕಳನ್ನೂ ವಧಿಸುವುದಕ್ಕೆ ಒಂದು ರೀತಿಯಿಂದ ಪ್ರಬಲವಾದ ಕಾರಣವಿರುವಂತೆ, ಇಲ್ಲಿನ ತಂಗಿ ಅಣ್ಣನ ಕೊಲೆ ಮಾಡಲು ಬಲವತ್ತರವಾದ ಕಾರಣವಿರುವುದಿಲ್ಲ. 'ನನ್ನ ಗಂಡ ಬಡವ. ನೀನು ಧರಿಸಿರುವ ಆಭರಣಗಳನ್ನು ಕೊಡು, ಅವನು ಧರಿಸುವದನ್ನು ನಾನು ನೋಡಬೇಕು' ಎಂದ್ದಿದ್ದರೆ, ಅಣ್ಣನು ತಾನಾಗಿಯೇ ಅವನ್ನು ಕೊಡಬಹುದಾಗಿತ್ತು. ಆದರೆ, ಆಸೆಯ

ತೆಕ್ಕೆಯಲ್ಲಿ ಮುಂದಾಗುವವಳಿಗೆ ಇಂಥ ವಿವೇಕದಿಂದ ನಡೆಯುವುದು ಸಾಧ್ಯವಿರಲಿಲ್ಲ. ಹೀಗೆ ಈ ದುರಂತಕ್ಕೆ ಬಲವಾದ ಕಾರಣವಿಲ್ಲದಿದ್ದರೂ ಅನರ್ಥವು ನಡೆಯುವುದು. ಇಲ್ಲಿನ ತಂಗಿಯ ವಿಶಿಷ್ಟ ಪಾತ್ರದಲ್ಲಿ ಅವಳು ತನಗಾಗಿ ಈ ಆಭರಣಗಳನ್ನು ಬಯಸಲಿಲ್ಲ, ಗಂಡನ ಪ್ರೇಮ ಮತ್ತು ಬಹುಶಃ ಸುಂದರನಾಗಿದ್ದ ಅವನ ಆಕರ್ಷಣೆಗೆ ಆಭರಣಗಳು ಹೆಚ್ಚು ಸೊಬಗನ್ನು ನೀಡುತ್ತವೆ, ತನ್ನ ಗಂಡನ ಪ್ರಣಯದಲ್ಲಿ ಹೆಚ್ಚು ಸೊಗಸು ತನಗೆ ಲಭಿಸುವುದು ಎಂದು ಅವಳು ಭಾವಿಸಿದ್ದಳು ಎಂದು ಊಹಿಸಬಹುದು.

ಇಲ್ಲಿ ಮೂಲ ಗೀತದಲ್ಲಿ ಅವಳು ಸಾರಾಯಿ ಕುಡಿದು ಅದರ ಆಮಲಿನಿಂದ ಈ ಹೇಯ ಕೃತ್ಯವನ್ನು ಮಾಡಿದ್ದಳೆಂದು ಚಿತ್ರಣ ಇದ್ದಿರಬಹುದಾದರೂ ನಿರೂಪಣೆಯಲ್ಲಿ ಈ ಬಗ್ಗೆ ಯಾವುದೇ ಸೂಚನೆ ಕಾಣುವುದಿಲ್ಲ; ದುರಂತನಾಯಕಿಯೂ ಅವಳಾಗಲಿಲ್ಲ. ಆದರೆ, ಇಲ್ಲಿನ ದುಃಖದ, ದುರಂತದ ತೀವ್ರತೆಯು ಹೆಚ್ಚುವುದು ಅಣ್ಣ-ತಂಗಿಯರ ತಂದೆ-ತಾಯಿ ಇಬ್ಬರೂ ಕುರುಡಾಗಿದ್ದರೆಂದು ಪ್ರಾರಂಭವಾಗುವುದು. ಕೊನೆಯಲ್ಲೂ ಸಹ ಹೃದಯಸ್ಪರ್ಶಿಯಾಗುವಂತೆ ಮುಕ್ತಾಯವು ಬರುವುದಕ್ಕೆ ಸಹಾಯಕವಾಗಿ ನಿರೂಪಣೆಯು ಕಲೆಗಾರಿಕೆಗೆ ಮೇಲ್ಮೆಯನ್ನು ತರುತ್ತದೆ.

ಗಂಡನಿಗೆ ತನ್ನ ಪ್ರೇಮವನ್ನು ತೋರಿಸುವಲ್ಲಿ ಅವಳ ಅನ್ಯಾಯದ ಫಲದ ಕುರಿತು ಅವಳ ಕುರುಡತನವನ್ನು ಕಥಾನಕವು ಸೂಚಿಸುತ್ತದೆ. ಅವಳ ಗಂಡನು ಭಾವನ ಮತ್ತು ಇಬ್ಬರ ಹೆಣ ಸುಡಲು ಗುಡಸಲಿಗೆ ಬೆಂಕಿ ಹಚ್ಚುವ ರೌದ್ರ ಸೇಡಿನ ಚಿತ್ರಣದಿಂದ ಕಥಾನಕಕ್ಕೆ ವಿಶೇಷ ಶಕ್ತಿ ಬರುತ್ತದೆ.

ಮುಂದೆ ಅತ್ತೆಯ ಮನೆಗೆ ಹೋದಾಗ, ಅತ್ತೆಯು ತನ್ನ ಮಗ-ಮಗಳು ಬರಲೆಲ್ಲವೆಂದು ತಿಳಿಯದ ಸನ್ನಿವೇಶವು, ಅಳಿಯ ಅತ್ತೆ-ಮಾವಂದಿರಿಗೆ ಹೇಳುವ ರೀತಿ ತುಂಬ ಕಲಾತ್ಮಕವಾಗಿದೆ. 'ನನಗೆ ತಾಯಿಯಿಲ್ಲ. ನೀವೇ ನನ್ನ ತಾಯಿ-ತಂದೆ... ನಾನೇ ನಿಮ್ಮ ಮಗ-ಮಗಳು, ನಿಮಗೆ ಆಧಾರ ನಾನೇ' ಎನ್ನುವ ನಾಟಕೀಯ ಮುಕ್ತಾಯವು ಒಳ್ಳೇ ಧಾರಾವಾಹಿಯಾಗುವ ಸಾಧ್ಯತೆಯನ್ನು ತೋರಿಸುತ್ತದೆ. 'ನಿಮ್ಮ ಮಗ ನಾನೇ... ನಿಮ್ಮನ್ನು ಸಲುಹುವವ ನಾನೇ' ಎಂದು ಅಳಿಯ ಹೇಳುವ ಹಾಗೂ ಅತ್ತೆ-ಮಾವ ಇವರ ಮಾತುಗಳು ಒಳ್ಳೇ ಸಮಂಜಸವಾದವುಗಳು. ಕುರುಡರಾದುದರಿಂದ 'ನೀವು ಯಾರು?' ಎಂದು ಅವರು ಅಳಿಯನನ್ನೇ ಕೇಳುತ್ತಾರೆ. ಇದು ತೀರ ವಿರಳ. 'ತಾಯಿ-ತಂದೇ, ನಾನೇ ನಿಮ್ಮ ಮಗ' ಎಂದನು ಅಳಿಯ. ಅಳಿಯ-ಮಗಳ ಮನೆ ತಿಂಗಳ ರಾಜ್ಯದಲ್ಲಿದೆ ಎಂಬುದು, ಅವರ ಮನೆ ದೂರದಲ್ಲಿತ್ತು ಎಂದು ಸೂಚಿಸುತ್ತದೆ.

**"ಘಾತಕ ಅಣ್ಣ"** ಪ್ರಸಿದ್ಧವಾದ ಒಂದು ಕಥೆಯ ಪಾಠಾಂತರವಾಗಿದೆ. ಆದರೆ, ಇಲ್ಲಿಯೂ ಪವಾಡದಿಂದ ಹಾವು ಕಚ್ಚಿ ಮಡಿದ ಅಣ್ಣನ ಜೀವವನ್ನು ಬದುಕಿಸುವುದಿದೆ. ಈ ಬದುಕಿಸಿದ್ದು ಬುದ್ಧಿವಂತ ಎತ್ತು. ಇದರಲ್ಲಿ ಹಲವು ವೈಶಿಷ್ಟ್ಯಗಳುಂಟು.

ಎತ್ತುಗಳ ಮೇಲೆ ಕೂತು ಸವಾರಿ ಮಾಡುವುದಿತ್ತು ಹಿಂದಿನ ಕಾಲದಲ್ಲಿ. ಬುದ್ಧಿವಂತ ಎತ್ತು ಕುದುರೆ ಸಾಲೆಯಲ್ಲಿತ್ತು. ಅದನ್ನೇರಿಕೊಂಡು ಬೇಕಾದ ವೇಷಭೂಷಣ ತೊಟ್ಟು ತಂಗಿಯನ್ನು ಹಬ್ಬಕ್ಕೆ ಕರೆಯಲು ಹೋದ ಅಣ್ಣನನ್ನು ತಂಗಿಯು ಮಾತಾಡಿಸುವಲ್ಲಿ ಸಿದ್ಧವಾದ ಮಾತಿನ ಸರಣಿ ಕಾಣುತ್ತದೆ. ಮೆಟ್ಟಿ(ಕಟ್ಟಿದ) ಹೂ ದಂಡೆ ಮಾಡಿದ ತಂಗಿಯು--ತೌರಮನೆಗೆ ಹೊರಡಲು ಬೇಕಾದ ರೇಶ್ಮೆ ಪಟ್ಟೆ ಉಟ್ಟು, ಬೇಕಾದ ಚಿನ್ನ ಧರಿಸಿ ಸಿದ್ಧಳಾದಳು. ತಂಗಿಯನ್ನು ಮುಂದೆ ಕುಳ್ಳಿಸಿಕೊಂಡ ಅಣ್ಣ ಅಡವಿಯ ದಾರಿಯನ್ನು ಹಿಡಿದ. ಅದು ಸಮೀಪದ ದಾರಿ ಎಂದು ಸಮಜಾಯಿಸಲು ನೋಡಿದನು. ತಂಗಿಯ ಆಭರಣಗಳ ಆಸೆಯಿಂದ ತಂಗಿಯನ್ನು ಕೊಲಲ್ಲು ಚೂರಿಯನ್ನು ತೆಗೆದ ಅಣ್ಣ ಅವಳ ಕೈಯನ್ನು, ಕಣ್ಣನ್ನು ಕಟ್ಟಿ ಕಲ್ಲನ್ನು ಮರಿಸಿದುದು ಯಾಕೆ? ಕಲ್ಲನ್ನೆತ್ತಿ ತಂಗಿಯನ್ನು ಕೊಲ್ಲಲು ಬಯಸಿದ್ದರೆ ಚೂರಿ ತೆಗೆದುದು ಯಾಕೆ? ಎಂದು ತಿಳಿಯಲಿಲ್ಲ. ಇಲ್ಲಿನ 'ಹುಳ' ಅಂದರೆ ನಾಗರಹಾವು, ಸರ್ಪ ಎನ್ನಲು ಹಳ್ಳಿಗರು ಬಳಸುವ ಶಬ್ದ. ಸರ್ಪ ಕಚ್ಚಿದ್ದನ್ನು 'ಹುಳ ಮುಚ್ಚಿತು' ಎನ್ನುವ ರೂಢಿ.

'ಹುಳ ಮುಟ್ಟಿದ್ದಕ್ಕೆ ಮದ್ದು ಹೇಳು' ಎಂದ ಅಣ್ಣನಿಗೆ 'ಕಣ್ಣು, ಕೈ ಬಿಚ್ಚು' ಎಂದು ತಂಗಿ ಹೇಳಿದರೂ ಅಣ್ಣನು ಅವಳ ಕಣ್ಣು, ಕೈ ಬಿಡಿಸಲಿಲ್ಲ. ಅವನ ದುಷ್ಟ ಆಸೆಯ ಕಾರಣ ಅವಳು ಅವನಿಗೆ ಮದ್ದನ್ನು ಹೇಳಲೇ ಇಲ್ಲ, ಬುದ್ಧಿವಂತ ಎತ್ತು ಅದೇ ಸ್ಥಿತಿಯಲ್ಲಿ ತಂಗಿಯನ್ನು ತೌರಿಗೆ ಕರೆತಂದಿತು; ತಾಯಿಗೆ ಕಣ್ಣು-ಕೈ ಬಿಡಿಸಲು ಮಗಳು ಹೇಳಿದಳು. ತಾಯಿಯು ದುಃಖದಿಂದ ಹೊರಳಾಡಿದ್ದನ್ನು ನೋಡಿದ ಎತ್ತು ಓಡಿ ಹೋಗಿ ಮದ್ದನ್ನು ತಂದು ಅಣ್ಣನನ್ನು ಬದುಕಿಸಿತು. ಇಲ್ಲಿ ಇನ್ನೂ ವಿವರ ಬೇಕಾಗಿತ್ತು. ಮೂಲ ಗೀತದಲ್ಲಿ ಮುಂಗುಸಿ ಮತ್ತು ಹಾವಿನ ಹೋರಾಟದ ಬಣ್ಣನೆಯಿತ್ತು. ಏನೋ ಮುಂಗುಸಿಯು ಸರ್ಪದ ವಿಷ ಪರಿಹಾರದ ಬೇರನ್ನು ಕಿತ್ತುದನ್ನು ನೋಡಿ ಎತ್ತು ಅದನ್ನು ತಂದು ಅಣ್ಣನಿಗೆ ಬಾಯಿಗೆ ಹಾಕಿ ಬದುಕಿಸಿದ್ದರಬಹುದೇನೋ.

ಹೀಗೆ ಒಂದು ನಿರೂಪಣೆಯ ಕೊರತೆ ಇದ್ದರೂ, ಸರಳವಾಗಿ ಸಂಭಾಷಣೆಯನ್ನು ತಂದು ಕಥನವನ್ನು ಮುಗಿಸಿದ ಜಾಣ್ಮೆ ಇಲ್ಲಿದೆ. ಗಂಡನಿಗೆ ತನ್ನ ಅಣ್ಣ ಮಾಡಿದ್ದ ದ್ರೋಹವನ್ನು ತಿಳಿಸಲಿಲ್ಲ ಅವಳು.

ಉತ್ತರ ಕನ್ನಡದಲ್ಲಿ (ಬೇರೆಡೆ ಸಹಾ) ಕ್ಷಾತ್ರ ಪರಂಪರೆಯುಳ್ಳ ದೀವರ (ನಾಮಧಾರಿ ಎಂದು ಪ್ರಸಿದ್ಧಿ ಪಡೆದ), ಹಳೇ ವೈಕರ ಸೈನ್ಯ ಸಾಹಸದ ಇನ್ನೊಂದು ಕಥನಗೀತ– **"ನನಗೇ ಕುದ್ರಿಗೇ ವಂದೇ ಸೊಡ್ಲೆ".** 'ಸೊಡ್ಲೆ'-- ಸುಡಲು ಒಯ್ಯುವ ಸ್ಥಳ ಸ್ಮಶಾನ.

'ಇಲ್ಲಿನ ಹಾಲಪ್ಪ ದೊರೆಯ ಕತೆ ಲಾಯಕದೆ' ಎಂದ ನಿರೂಪಕಿ ಸೌ. ಮಾಸ್ತಿ ರಾಮು ನಾಯ್ಕ, ನನಗೆ ಮೊದಲೇ ಹೇಳಿದ್ದ ಸ್ವಾರಸ್ಯವಾದ ಗೀತ ಇದು, ಸಂದೇಹವಿಲ್ಲ. ಹಾಲಪ್ಪ ದೊರೆ ದೀವರವನು ಎಂದು ಗೀತದಲ್ಲಿ ಉಲ್ಲೇಖ ಬಂದಿಲ್ಲ. ಹೀಗಿದ್ದರೂ ವೀರಪುತ್ರರನ್ನು ಪಡೆದಿದ್ದ ಹಾಲಪ್ಪ ದೀವರವನೇ ಇದ್ದಿರಬಹುದು. ಮೂವರು ಮಕ್ಕಳ ತಂದೆ ಹಾಲಪ್ಪ ದೊರೆ ಮಕ್ಕಳಿಗೆ ಕ್ಷಾತ್ರ ಪರಂಪರೆಯ ವಿದ್ಯೆ ಕಲಿಸಲು ತನ್ನ ಮುಪ್ಪಿನ ಕಾಲದಲ್ಲಿ ಶಾನಭಾಗರಿಗೆ ಅಪ್ಪಣೆ ಮಾಡಿದನು.

ಶಾನಭಾಗರು ವಿದ್ಯೆ ಕಲಿಸಿದ ಮೇಲೆ, ಅಡವಿಗೆ ಕಳಿಸಿ ಗರಡಿ ಕಂಬ ತರಿಸಲು ಹೇಳಿದ ಮೇಲೆ ತಲೆ ಕೆಳಗೆ ಮಾಡಿ, ಕಾಲು ಮೇಲೆ ಮಾಡಿ ಗರಡಿ ಸಾಧಕ ಸಹ ಕಲಿಸಿದ ವಿವರವು ಲಕ್ಷಿಸತಕ್ಕದ್ದಾಗಿದೆ.

ದಂಡಿನ ಕರೆ ಬಂತು– ಮೂವರು ಯುದ್ಧಕ್ಕೆ ಹೊರಟು ಕುದುರೆಯೇರಿ ಹೋಗಿ, ಯುದ್ಧ ಮಾಡಿದ ಚಮತ್ಕಾರಿಕ ಬಣ್ಣನೆ ಸ್ವಾರಸ್ಯವಾಗಿದೆ. ಇಲ್ಲಿಯೂ ಹಾರುವರ ದಂಡನ್ನು ಹಾರಾಡಿ ಕಡಿದ ಉಲ್ಲೇಖವಿದೆ. ತುರುಕರ ದಂಡನ್ನು ತುದಿಕಾಲಲ್ಲಿ ಕಡಿದ, ಮೊಗಲರ ಮುಡುಗಿದ ದಂಡಾಳುಗಳ ಸೈನ್ಯವನ್ನು ನಾಶ ಮಾಡಿ ಕುದುರೆಯ ಮೇಲೆಯೇ ತಿರುಗಿದವನನ್ನು ಕಳ್ಳರು ಮುಂದೆ, ಹಿಂದೆ ನಿಂತು ಗುಂಡಿಕ್ಕಿ ಕೊಂದರು. ಮಹಾವೀರನು- 'ಅಡಗಿ ತನ್ನನ್ನು ಹೇಡಿಗಳಂತೆ ಗುಂಡಿಕ್ಕಿ ಕೊಲ್ಲುವವರು ಹೆಂಗಸರಿಗಿಂತ ಕಡೆಯಾದರಿ' ಎಂದು ಹೀಯಾಳಿಸಿ, ಕುದುರೆಯ ಕೊರಳಿಗೆ- 'ತನಗೂ, ತನ್ನ ಕುದುರೆಗೂ ಒಂದೇ ಸುಡು ಜಾಗ' ಎಂದು ಬರೆದದ್ದನ್ನು ಕಟ್ಟಿ ಮನೆಗೆ ಬಂದಾಗಲೂ, 'ವಿಜಯದ ಆರತಿ ತನ್ನಿ' ಎಂದು ಹೇಳಿದ ವೀರನು ಅಸಾಮಾನ್ಯ ಧೀರ ಸೈನಿಕನೇ. ಹಿತಮಿತವಾಗಿ, ಸರಳ ಸುಂದರವಾಗಿ ನಿರೂಪಿಸಿದ ಈ ವೀರಶ್ರೀ ಗಾಥೆಯು ಮೆಚ್ಚುವಂತಹದು.

**"ಅತ್ತೆ ನಾಗಮ್ಮ ಸೊಸೆ ಹೊನ್ನಮ್ಮ"** ಕಥನ ಗೀತವು ಪ್ರಾರಂಭ ಭಾಗದಲ್ಲಿ ಉತ್ತಮವಾಗಿ ನಿರೂಪಿತವಾಗಿದೆ. ಮುಂದೆ ಶಂಕೆಯಿಂದ ಸತಿಯನ್ನು ಕೊಂದ ಪತಿ, ರಣಹದ್ದಿನ ವೇಷದಿಂದ ಅರಳಿಯ ಮರದ ಮೇಲೆ ಕೂತ ಎಂಬಲ್ಲಿಯವರೆಗೆ ಉತ್ತಮವೇ ಆಗಿದೆ. ಮುಂದೆ ಕೊಲ್ಲಿಸಲ್ಪಟ್ಟ ಹೊನ್ನಮ್ಮನು ಕೆರೆಯಲ್ಲಿ ಅರಳಿದ ಕಮಲವಾಗಿ ಯಾರ ಕೈಗೂ ಸಿಗದೆಯೇ ಕೊಂದ ಗಂಡನ ಕೈಗೆ ಹೂವು ಸಿಕ್ಕ ಬಣ್ಣನೆಯು ಹಲವು ಗೀತಗಳಲ್ಲಿಯೂ ಇರುವುದು. ಅಲ್ಲದೆ, ಈ ಅಸಹಜವಾದ ನಿರೂಪಣೆಯಿಂದ ಕಥನಗೀತದ ಮೇಲ್ಮೆ ಕುಗ್ಗಿದೆ ಎಂದೇ ನನ್ನ ಅಭಿಪ್ರಾಯ.

ನಾಗಮ್ಮನ ಮಗನು ದಂಡಿಗೆ ಹೋಗುವಾಗ, 'ಸೊಸೆಯನ್ನು ನೀರಿಗಾಗಲಿ, ಬೆಂಕಿಗಾಗಲಿ ಹೊರಗೆ ಕಳಿಸಬೇಡ' ಎಂದು ತಾಯಿಗೆ ಹೇಳಿ ಹೋಗಿದ್ದನು. ನಾಗಮ್ಮನು ಬಳೆಗಾರ ಬಂದಾಗ. 'ಅವನಿಂದ ಬಳೆ ತೊಡಿಸಿಕೋ' ಎಂದು ಅತ್ತೆ ಹೇಳಿದ ಮೇಲೆ ಹೊನ್ನಮ್ಮ ಬಳೆ ತೊಡಿಸಿಕೊಂಡಿದ್ದು– ಗಂಡನಿಗೆ ಅಲ್ಲಿ ಸ್ವಪ್ನದಿಂದ ತಿಳಿದುಬಂದಿದ್ದು.... ಇದೆಲ್ಲ ಚೆನ್ನಾಗಿಯೇ ಬಂದಿದೆ. ಆದರೆ, ಇದರಲ್ಲಿ ಹೊನ್ನಮ್ಮ ಅತ್ತೆಯ ಮಾತನ್ನು ಪಾಲಿಸಿದಳು. ಅವಳ ತಪ್ಪೇನೂ ಇರಲಿಲ್ಲ ಎಂಬುದು ಗಂಡನಿಗೆ ತಿಳಿಯಲೇ ಇಲ್ಲ. ತಾಯಿ ಹೇಳಿದ ಮೇಲೆ ಮಡದಿ ಆರತಿ ತಂದುದು, ನೀರು ತಂದುದು ಸರಿಯಾದ ಬಣ್ಣನೆಯೇ ಆಗಿದೆ. ಸಂಶಯ ಪಿಶಾಚಿಯ ತೆಕ್ಕೆಯಲ್ಲಿದ್ದ ಗಂಡನಿಗೆ ತಿಳಿಯಲೇ ಇಲ್ಲ. ತಾಳ್ಮೆಯೇ ಬರಲಿಲ್ಲ. ಇದು ಸಹಜವಾದ ಮಾನುಷೀ ದೌರ್ಬಲ್ಯ. ಇದರಿಂದ ನಿರಪರಾಧಿಗೆ ಘೋರ ಶಿಕ್ಷೆ ಮಾಡಿದುದು ಸಹಜವಾಗಿಯೇ ರೂಪಿತವಾಗಿರುವುದು. ಆದರೂ ಹೊನ್ನಮ್ಮನು ಔದಾರ್ಯದಿಂದ ಗಂಡನನ್ನು ಕ್ಷಮಿಸಿದ ಬಣ್ಣನೆಯಲ್ಲಿ ಕಾವ್ಯನ್ಯಾಯವನ್ನು ಸರಿಯಾಗಿ

ಪಾಲಿಸಲಿಲ್ಲವೆಂದೇ ತೋರುತ್ತದೆ. ಇಲ್ಲಿ ಸ್ತ್ರೀಯ ಪ್ರತಿಭಟನೆಯ ಅಂಶವೇ ಕಾಣುವುದಿಲ್ಲ. ಅದನ್ನು ತೋರಿಸಿದ್ದರೆ ಗೀತದ ಸತ್ವವು ಹಿರಿದಾಗಿರುತ್ತಿತ್ತು. ಬಂದ ಅವಳ ಏಳು ಜನ ಅಣ್ಣಂದಿರೂ ಭಾವನ ಘೋರ ಅಪರಾಧವನ್ನು ಮಾತಿನಿಂದಲಾದರೂ ಪ್ರತಿಭಟಿಸದಿದ್ದುದು ಗೀತ ನಿರೂಪಣೆಯಲ್ಲಿನ ಇನ್ನೊಂದು ದೋಷವಾಗಿದೆ.

**"ಕೆಂಚಮ್ಮ"** ಕಥನಗೀತವು ಪ್ರಖ್ಯಾತಳಾದ, ಶ್ರೇಷ್ಠ ನಿರೂಪಕಿ– ಬಿಳಿಯಮ್ಮ ಪುಟ್ಟು ನಾಯ್ಕ ಹೊಸಾಕುಳಿ ಇವರು ಹೇಳಿದ್ದು. ಕೆಂಚಮ್ಮನ ಹರಕೆ 'ಮಗ ಹುಟ್ಟಿದರೆ ಗಾರಹೊಳೆಗೆ ತಾನು ಬಲಿಯಾಗುವೆ' ಎಂಬುದು ನಮ್ಮ ಕನ್ನಡದ ವೀರ ರಮಣಿಯರ, ವೀರರ ಬಲಿದಾನದ ಗಾಥೆಗೆ ಇನ್ನೊಂದು ಜೋಡಣೆಯಾಗಿದೆ. 'ಕೆಂಚು' ಎಂದರೆ- ಮರದ ನಡುವಿನ ಗಟ್ಟಿಯಾದ ತಿರುಳು, ಅಂಥ ಮನಸ್ಸಿನ ದೃಢತೆಯ ಸಂಕೇವೂ 'ಕೆಂಚಮ್ಮ' ಎಂಬ ಹೆಸರಿನಲ್ಲಿದೆ.

ವಾಸ್ತವಿಕ ನೆಲೆಯಲ್ಲಿ ಕೆಂಚಮ್ಮ ಹರಕೆಯನ್ನು ತೀರಿಸಲು ಹೊಳೆಯಲ್ಲಿ ಬಿದ್ದು ಮುಳುಗಿ ಬಲಿಯಾಗಿದ್ದಿರಬೇಕು, ನಮ್ಮ ಜನಪದರು ಇಂಥ ಕೆಚ್ಚಿನ ವೀರರಿಗೆ ವೀರರಮಣಿಯರಿಗೆ ದೇವತ್ತ್ವವನ್ನು ಕಲ್ಪಿಸಿ, ಪವಾಡ ರೂಪದಲ್ಲಿ ಅವರ ಕೊನೆಯನ್ನು ಬಣ್ಣಿಸುವ ಚಟವೇ ಹಲವು ಗೀತ-ಕಥೆಗಳಲ್ಲಿ ಕಾಣುತ್ತದೆ.

ಕೆಂಚಮ್ಮನಿಗೆ ಗಂಡಾಗಲಿ, ಹೆಣ್ಣಾಗಲಿ ಹುಟ್ಟುವ ಬಸಿರೇ ಆಗಿದ್ದಿರಲಿಲ್ಲ. ಅದನ್ನು ನಿರೂಪಕಿಯು– 'ಮುಟ್ಟಳ ಕೆಂಚಮ್ಮ' ಎಂಬ ಪ್ರಾರಂಭದ ನುಡಿಯಲ್ಲೇ ಸೂಚಿಸಿದ್ದಳು. ಮುಟ್ಟಾಗಿದ್ದವಳು ತಿಂಗಳು ತಿಂಗಳೂ ಮುಟ್ಟಾಗಿ ನಡೆಯುತ್ತಿದ್ದಳು. ಕೆಂಚಮ್ಮ ಅವಳು ಮುಟ್ಟಾಗಿ ಮೀಯಲು ಹರಿವ ನದಿಗೆ ಹೋಗಿ ಮುಳುಗಿ ಮಿಂದಳು. ಹೀಗೆ ಶುದ್ಧಳಾಗಿ ಕನ್ನೆಯರಿಗೆ ಕೈಮುಗಿದು ಹರಕೆಯನ್ನು ಹೇಳಿಕೊಂಡಳು. ಇಲ್ಲಿ ಕನ್ನೆಯರು ನದೀ ದೇವತೆಗಳು ನದಿಯಲ್ಲಿ ಮಧ್ಯಾಹ್ನದ ಬಿಸಿಲಿನಲ್ಲಿ ಹಾವಸೆಯು ನೀರಿನಲ್ಲಿ ಪ್ರತಿಫಲಿಸಿದಾಗ ನದೀ ದೇವತೆಗಳು ಮಿಂದರು' ಎಂದು ಜನರು ನಂಬಿ ನುಡಿಯುತ್ತಾರೆ. ಅಂಥ ಏಳು ಮಂದಿ ಜಲದೇವತೆಗಳಿಗೆ ಪ್ರಾರ್ಥನೆ ಸಲ್ಲಿಸಿ, 'ಬಂಜೆ ಎಂಬುದನ್ನು ತಪ್ಪಿಸಲು ತನಗೆ ಸಂತತಿ ಕರುಣಿಸಿದರೆ ಗಾರ ಹೊಳೆಯಲ್ಲಿ ಬಿದ್ದು ಬಲಿಯಾಗುವೆ' ಎಂದು ಹೇಳಿ ಹರಕೆಯನ್ನು ಹೊತ್ತಳು ಕೆಂಚಮ್ಮ.

ಕೆಂಚಮ್ಮ ಮುಟ್ಟಾಗೊಂದು ತಿಂಗಳಾ, ಮುಟಾಗಿರುವಲ್ಲಿ ಮುಟ್ಟಾಗದೆ ಒಂದು ತಿಂಗಳು... ಹೀಗೆಲ್ಲ ತಿದ್ದಿಕೊಳ್ಳಬೇಕು. ಯಾಕಂದರೆ, ಗರ್ಭಿಣಿಯಾದಾಗ ಮುಟ್ಟಾಗುವದೇ ಇಲ್ಲ. ಇಲ್ಲಿ ಬಸುರಿಯ ಬಯಕೆಯ, ಸೀಮಂತದ ಯಾವುದೇ ಬಣ್ಣನೆ ಮಾಡದೆ ಒಂಬತ್ತು ತಿಂಗಳಾಗಿ ಗಂಡು ಮಗುವನ್ನು ಹಡೆದಳು ಎಂದು ತಿಳಿಸಿದ್ದು ವಿಶೇಷ. ಚೆನ್ನದುಂಗುರದಿಂದ ಬಾಣಂತಿಯ ಬೆನ್ನು ತಿಕ್ಕಿದ್ದು, ಎಣ್ಣೆ ತಿಕ್ಕಿದ್ದರಿಂದ, ಸೀಗೆ ಹುಡಿಯಿಂದ ಮೀಯಿಸಿದ ಸಣ್ಣ ವಿವರ ಇಲ್ಲಿದೆ. ಕೆಂಚಮ್ಮನು ಹೊಳೆಗೆ ಬೀಳಲು ಹೊರಟಾಗ ಕತ್ತಿ ಹಿಡಿದವರು, ಕೋವಿ ಹಿಡಿದವರು ತಡೆಯಲು ಬಂದರು. ಆಕೆ ಲೆಕ್ಕಿಸದೆ ಹೊಳೆಗೆ ಮೀಯಲು ಹೋಗಿ ತಾಯಿ

ಬಳಗಕ್ಕೂ, ತಂದೆಯ ಬಳಗಕ್ಕೂ, ಗಂಡನ ಬಳಗಕ್ಕೂ (ಮೂರು) ಓಲೆ ಬರೆದ ಕೆಂಚಮ್ಮ ಓದು-ಬರೆಹ ಬಲ್ಲವಳು. ತಂದೆಯು ತಾಯಿಯೊಡನೆ, 'ಒಂದೇ ಮಗಳನ್ನು ಹೊಳೆಗೆ ಆಹುತಿ ಕೊಡುವ' ಎಂದು ದುಃಖಿಸಿ ಹೇಳುವುದಿದೆ. ಗಂಡನು ಬಂದು ಕೂತಾಗಿನ ಸಂಭಾಷಣೆಯೂ ಚಿಕ್ಕದಾಗಿ ಬಂದಿದೆ.

'ಕಂದಯ್ಯನ ಗೊಡವೆ ಇಲ್ಲ; ಹೂಗಳ ಗೂಡವೆ ಇಲ್ಲ; ತಂದೆಯ, ತಾಯಿಯ, ಅಣ್ಣನ, ತಮ್ಮನ ಯಾರ ಗೊಡವೆಯೂ ಇಲ್ಲ' ಎಂಬ ಆಕೆಯ ನುಡಿಯು ಕೆಂಚಮ್ಮನ ದೃಢ ಮನಸ್ಸನ್ನು ಚೆನ್ನಾಗಿ ನಿರೂಪಿಸಿದೆ. ಕೆಂಚಮ್ಮನು, 'ಗಂಡನಿಗೆ ತನ್ನ ತಂಗಿಯನ್ನು ಮದುವೆ ಮಾಡಿ ಕೊಡಿ' ಎಂದು ಹೇಳಲು ಮರೆಯಲಿಲ್ಲ. ಹೊಳೆಗೆ ಬೀಳಲು ಬಂದಾಗ ಹಣ್ಣು, ಹೂಗಳ ರಾಶಿಯನ್ನೇ ಬಳಗದವರು ತಂದರು, ಹೊಳೆಗೆ ಪೂಜೆ ಸಲ್ಲಿಸಿದ ಕೆಂಚಮ್ಮ ಹೊಳೆಯಲ್ಲಿ ಹಾರಿದ್ದಿರಬೇಕು. ಆ ಸಾಲುಗಳು ಇಲ್ಲಿ ಹಾರಿಹೋಗಿವೆ.

ಮಗನನ್ನು ಸಲಹಿಕೊಳ್ಳಲು ತಂಗಿಯನ್ನು ಗಂಡನಿಗೆ ಮದುವೆ ಮಾಡಿಸಲು ಹೇಳಿ ಹೊಳೆಯಲ್ಲಿ ಬೀಳುವಷ್ಟರಲ್ಲಿ, 'ದೇವಲೋಕದಿಂದ ದಂಡಿಗೆ (ಪಲ್ಲಕ್ಕಿ) ಬಂದು, ಕೆಂಚಮ್ಮ ಅದರಲ್ಲಿ ಕೂತುಕೊಂಡು ಸ್ವರ್ಗಕ್ಕೆ ಹೋದಳು' ಎಂದು, ನದಿಗೆ ಹಾರಿ ಪ್ರಾಣದ ಆಹುತಿ ನೀಡಿದ್ದ ಕೆಂಚಮ್ಮನಿಗೆ ಸೌ.ಕುಮಾರ್ಯದಿಂದ ದೇವಲೋಕಕ್ಕೆ ಸೇರಿಸಲು ನಾಟಕೀಯವಾಗಿ ಪಲ್ಲಕ್ಕಿಯನ್ನು ಕಳಿಸಿದ ಬಣ್ಣನೆಯಿದೆ. ಕನ್ನಡದ ವೀರರು ಕಟ್ಟಾಯದ ಭಾಷೆಯನ್ನು ಸಲ್ಲಿಸಲು ವೀರಮರಣವನ್ನು ಪಡೆದುದರ ಒಂದು ಉದಾಹರಣೆಯಿಂದ ಈ ಬಲಿದಾನದ ವೈಶಿಷ್ಟ್ಯವನ್ನು ತಿಳಿಸಲಾಗಿದೆ. ಒಂದೆರಡು ಲೋಪದೋಷಗಳಿದ್ದರೂ ಈ ಕಥನ ಗೀತ ಉತ್ತಮ ರೀತಿಯಲ್ಲಿ ನಿರೂಪಿತವಾಗಿದೆ.

**"ಅತ್ತೆ ಗೌರಮ್ಮ, ಸೊಸೆ ಹೊನ್ನಮ್ಮ"** ಕಥನ ಗೀತವು ಅರ್ಧ ಭಾಗದಲ್ಲಿ ಶ್ರೇಷ್ಠತೆಯನ್ನು ಮೆರೆದುದು ಮುಂದೆ ನಿರೂಪಕಿಯು ಸುಖಾಂತವಾಗಿ ಮುಗಿಸುವ ಚಾಪಲ್ಯದಿಂದಾಗಿ ಗಂಡನಿಂದ ಕೊಲ್ಲಲ್ಪಟ್ಟ, ಅಣ್ಣಂದಿರಿಂದ ಸುಡಲ್ಪಟ್ಟವಳನ್ನು ತಾವರೆ ಹೂ ಮಾಡಿ ಗೀತದ ಹಿರಿಮೆಯೇ ಕುಗ್ಗುವಂತೆ ಆಗಿದೆ. ಇಲ್ಲಿಯೂ ಸಹ ಅರಸು, ದಂಡಿಗೆ ಹೋಗಲು ಹೊರಟು - 'ಸೊಸೆಯನ್ನು ನೀರಿಗೆ ಕಳಿಸಬೇಡ, ಬೆಂಕಿಗೆ ಕಳಿಸಬೇಡ' ಎಂದು ಹೇಳಿಹೋದ.

ಇಲ್ಲಿ ಮದುವೆಯಾದರೂ ಹೆಂಡತಿಯನ್ನು ಮನೆಯಲ್ಲಿ ಇರಿಸಿ, ಯುದ್ಧ ಮಾಡಲು ಹೊರಟ ಗಂಡನು ಸುಂದರಿಯಾದ ತನ್ನ ಹೆಂಡತಿಯು ಮನೆಯ ಹೊರಗೆ ಹೋದರೆ, ಹೊಸಲು ದಾಟಿದರೆ, ಕಾಮುಕ ಗಂಡಸರ ದೃಷ್ಟಿಗೆ ಬಿದ್ದು, ಶೀಲಭ್ರಷ್ಟಳಾಗಬಹುದು ಎಂಬ ಸಂದೇಹ ಪಡುವಂಥವನು ಮತ್ತು ತನ್ನ ಅಪ್ಪಣೆ ಮೀರಿ ನೀರಿಗೆ ಅವಳು ಹೋದಾಗ ಕ್ರೂರತನದಿಂದ ಅವಳನ್ನು ಬೇರೆ ಯಾವ ತಪ್ಪು ಕಾಣದಿದ್ದರೂ ಕೊಲ್ಲುವಂಥ ನರಾಧಮನಾಗಿದ್ದಾನೆ. ಆತ 'ದಂಡಿಗೆ ಹೋಗುವೆ' ಎಂದುದು ತನ್ನ ಹೆಂಡತಿಯ ನಿಷ್ಠೆಯನ್ನು ಪರೀಕ್ಷಿಸುವ ಸಲುವಾಗಿ ಮಾತ್ರ ಎಂದು ಈ ಗೀತದಲ್ಲಿ ತೋರುತ್ತದೆ.

ಅವನು ಸುಂದರನಾಗಿ ಸಿರಿವಂತನಾಗಿದ್ದ ಎಂಬುದು ಆತನ ಹೆಂಡತಿ ಬೆಳ್ಳಿಯ ಕೊಡ, ಚಿನ್ನದ ಕೊಡ ತಕ್ಕೊಂಡು ನೀರಿಗೆ ಹೋದಳೆಂಬುದರಿಂದ ಸೂಚಿತವಾಗಿದೆ.

ಗಂಡನು ಆಗ ಕೆರೆಗೆ ಬಂದಿದ್ದನ್ನು ತಿಳಿದ ಹೊನ್ನಮ್ಮ ಅವನ ಕ್ರೂರ ಶಿಕ್ಷೆಗೆ ಹೆದರಿದ್ದು, ಮುತ್ತಿನ ಕಣ್ಣೀರನ್ನು ಬಿಟ್ಟಳು ಎಂಬುದರಿಂದ ಸೂಚಿತವಾಗಿದೆ. ತಿರುಗಿ ಬಂದವಳು ಕುದುರೆಗೆ ಆರತಿಯನ್ನು ತಂದರೂ ಅವನ ಕ್ರೋಧ ಇಳಿಯಲಿಲ್ಲ. 'ನಿನ್ನ ಸೊಸೆಯನ್ನು ತೌರಮನೆಗೆ ಕರೆದುಕೊಂಡು ಹೋಗುವೆ' ಎಂದು ಸುಳ್ಳನ್ನು ಹೇಳಿ ಅಡವಿಗೆ ಒಯ್ದು, ಅವಳ ಶಿರಚ್ಛೇದ ಮಾಡಿದನು. ದಾರಿ ತಪ್ಪಿತು ಎಂದ ಹೆಂಡತಿಗೆ ಸಬೂದು ಹೇಳಿ ಮೋಸ ಮಾಡಿದನು.

ಇತ್ತ ಅವಳ ತಾಯಿಗೆ ಸ್ವಪ್ನ ಬಿದ್ದು ಮಗಳನ್ನು ಅಳಿಯ ಮೋಸದಿಂದ ಕೊಂದನೆಂಬುದು ತಿಳಿಯಿತೆಂಬುದು ಉತ್ತಮವಾದ ಜೋಡಣೆ. ಮಕ್ಕಳಿಗೆ ತಿಳಿಸಿ ಅವರು ಹೊರಟು ಬಂದರು.

ನಿಜವಾಗಿ ಈ ಗೀತ ಅಸಾಧಾರಣವಾಗಿ ಹಿರಿಮೆಯನ್ನು ಪಡೆದ ಸಂದರ್ಭವು ಯಾವುದೆಂದರೆ, ಹೆಂಡತಿಯನ್ನು ಕೊಂದು ಬಂದ ಮಗನನ್ನು ಕೊಲ್ಲಲು ತಾಯಿಯು ಖಡ್ಗವನ್ನು ಹಿಡಿದು ಹೊಸ್ತಿಲಲ್ಲಿ ಕೂತು ಕೊಂಡಿದ್ದುದು. ಮಗನು ಮಾಡಿದ ಅನ್ಯಾಯವನ್ನು ತಾಯಿಯು ಪ್ರತಿಭಟಿಸಿ ಮಗನ ಮೇಲಿನ ಮಮತೆಯನ್ನು ಬಿಟ್ಟಿದ್ದು ಅದ್ಭುತವಾದ ಕಲ್ಪನೆಯಾಗಿದೆ; ಕನ್ನಡಿತಿಯರ ಕೆಚ್ಚು ಇದರಿಂದ ತಿಳಿದು ಬರುವಂತಿದೆ.

ಆದರೆ, ತಾಯಿ ಮಗನನ್ನು ಕೊಲ್ಲುವುದನ್ನು ತಪ್ಪಿಸಲು ಗೀತರಚನೆಯನ್ನು ಮಾಡಿದವಳೋ, ಮುಂದೆ ಅದನ್ನು ಹೇಳಿದ ಹೆಂಗಸೋ ಅಣ್ಣಂದಿರೆ ಅಡವಿಯಲ್ಲಿ ಹೋಗಿ ಅವಳ ಹೆಣವನ್ನು ಸುಟ್ಟು ಬೂದಿ ಮಾಡಿದುದನ್ನು ತಿಳಿಸಿಯೂ ಕೃತ್ರಿಮವಾಗಿ ಸುಖಾಂತವಾಗಿ ಮಾಡಿದುದು ಇದರ ಹಿರಿಮೆಗೆ ಕುಂದು ಆಗಿದೆ.

ಸರಳವಾಗಿ ಹೇಳಿದ ಈ ಗೀತವು ಈ ಅನೌಚಿತ್ಯವನ್ನು ಮೀರಿಯೂ ಉತ್ತಮವಾಗಿದೆ. ಪ್ರಖ್ಯಾತ ಜರ್ಮನ ಮನೋವಿಜ್ಞಾನಿ ಕಾರ್ಲೆಯರಿಗೆ ಅವರು ಪ್ರತಿಪಾದಿಸಿದ್ದ "ಟೆರ್ರಿಬಲ್ ಮದರ್"– ಭಯಂಕರ ತಾಯಿ ಎಂಬುದನ್ನು ನೆನಪಿಗೆ ತರುತ್ತಾಳೆ ಇಲ್ಲಿನ ವೀರಮಾತೆ.

**"ಕೋಳಿ ಜನ್ಮ"** ಗೀತದ ಕಥೆಯು ತಕ್ಕಮಟ್ಟಿಗೆ ಜನಪ್ರಿಯವಾಗಿದೆ. 'ಗೇಣುಗಡ್ಡದ ಕುಳ್ಳ' ಕಥೆಯಲ್ಲಿ ಗಡ್ಡದ ಕುಳ್ಳನು ರಾಜನ ಮಗಳ ಲಗ್ನವಾಗಲು ಬರುವಾಗ ಬೇರೆ ಬೇರೆ ಪ್ರಾಣಿಗಳನ್ನು ತನ್ನ ಕಿವಿಯಲ್ಲಿ ಅಡಗಿಸಿಕೊಂಡು ಬಂದುದರ ಆಶಯಗಳ ನೆನಪು ಈ ಗೀತ ಕಥೆಯಲ್ಲಿ ಆಗುತ್ತದೆ. ಅಲ್ಲದ, ಗೊಂಡರ ಪದದಲ್ಲಿ ಮತ್ತು ಬೇರೆ ಕಥೆಯಲ್ಲೂ ಕೋಳಿಯು ರಾಜನ ಮಗಳನ್ನು ಮದುವೆಯಾಗಲು ಹೋದುದಿದೆ.

ಅಲ್ಲಿ ಕುಳ್ಳ ಚಿಕ್ಕ ರೂಪದ ಮನುಷ್ಯ. ಉಳಿದ ಪಾಠಗಳ ಕೋಳಿಯು ದೇವತಾಶಕ್ತಿಯುಳ್ಳದಾಗಿ ಕಾಣಲು ಕೋಳಿಯಾಗಿದ್ದರೂ ಮುಂದೆ ರೂಪಪರಾವರ್ತನದಿಂದ ಮನುಷ್ಯ ರೂಪ ಪಡೆಯುವುದು.

ಇಲ್ಲಿನ ಕೋಳಿಯನ್ನು ಬಹಳ ಮಹತ್ವಾಕಾಂಕ್ಷೆಯುಳ್ಳ ಮನುಷ್ಯನ ಪ್ರತಿನಿಧಿ ಎನ್ನಬಹುದು. ಅವನಿಗೆ ಮಾಟಗಾರಿಕೆಯ ಶಕ್ತಿ ಇರುತ್ತದೆ. ನಮ್ಮ 'ಕೋಳಿ ಜನ್ಮ' ಗೀತದ ಕೋಳಿಗೆ ಚಿನ್ನದ ವರುಣ(ವರ್ಣ) ಅಂದರೆ ಇದು ಸಾಮಾನ್ಯ ಕೋಳಿಯಲ್ಲ ಮತ್ತು ಮಾತಾಡುವ ಶಕ್ತಿಯುಳ್ಳ ಮನುಷ್ಯನ ಪ್ರತಿನಿಧಿ. ಆದರೆ, ಇಲ್ಲಿ ನಿರೂಪಕಳು ಮನುಷ್ಯ ರೂಪವನ್ನು ಕೋಳಿಯು ಮದುವೆಯಾದಾಗ ಪಡೆದುದನ್ನು ತಿಳಿಸದಿರುವುದು ದೊಡ್ಡ ಲೋಪವಾಗಿದೆ. ನಾಲ್ಕಾಣೆಗೆ ಕೋಳಿಯನ್ನು ಅಜ್ಜಿಯು ಕೊಂಡಿದ್ದಳು. ಆಗಿನ ಸೋಯಿ ಕಾಲದ ದರ ಇದು. ಈ ಕಾಲದಲ್ಲಿ ಕಡಿಮೆಯೆಂದರೆ ಎಪ್ಪತ್ತೈದು ರೂಪಾಯಿ ಕೋಳಿಯ ಬೆಲೆ.

ಮಾಟದ ಶಕ್ತಿಯಿಂದ ದೊಡ್ಡ ಭಯಂಕರ ಪ್ರಾಣಿಗಳನ್ನು ಚಿಕ್ಕದಾಗಿ ಮಾಡಿ, ಕಿವಿಯಲ್ಲಿಟ್ಟು ರಾಜನ ಮನೆಗೆ ಹೋಗಿ ಮಗಳನ್ನು ಮದುವೆಯಾಗುವ ಎಂದಂತೆ ಮದುವೆಯಾಯಿತು. ಆದರೆ, ಆದ ಮೇಲೆ ಮನುಷ್ಯ ರೂಪ ಅದಕ್ಕೆ ಬರಲಿಲ್ಲ, ಅದನ್ನು ಇಲ್ಲಿ ತಿಳಿಸಲಿಲ್ಲ. ಮಕ್ಕಳ ಮನರಂಜನೆಗೆ ಈ ಗೀತ ಕಥೆ ಯೋಗ್ಯವಾಗಿದೆ.

**'ಕಾಸೀ ದೇಸಾಂತ್ರೇ ನೆಡುದಾನೇ'** ಚಿಕ್ಕ ಗೀತದಲ್ಲಿ ಪ್ರಸಿದ್ಧವಾದ, "ತಿಮ್ಮಕ್ಕನ ಪದಗಳು" ಗ್ರಂಥದಲ್ಲಿರುವ 'ಮಾರಕ್ಕ ದೇವಿಯ ಮದುವೆ' ಎಂಬ ಕಥನ ಗೀತದ ಹೋಲಿಕೆಯಿದೆ.

ತಿಮ್ಮಕ್ಕ ಹೇಳಿದ ಹಾಡಿನಲ್ಲಿನ 'ಮಂಡಲಗೊಂಡಿತ್ತೇ ಗುರುಗುಂಜೇ' ಎಂಬ ಧ್ವನಿರಮ್ಯವಾದ ಸಾಲಿನ ಮಹತ್ವವು 'ಸಂಗಡ ಗುಲಗಂಜೀ ಬಲ ಬಂದು' ಎಂಬ ಸಾಲಿನಲ್ಲಿ ಇಲ್ಲ. ಅಲ್ಲಿನ ಗುರುಗುಂಜಿಯು ಮಾರಕ್ಕನು ಋತುಮತಿಯಾಗಿದ್ದುದನ್ನು ಸೂಚಿಸುತ್ತದೆ. ಇಲ್ಲಿನ ಗುಲಗಂಜಿ ಶಬ್ದಕ್ಕೆ– 'ಬಲಬಂದು' ಎಂಬ ಶಬ್ದ ಜೋಡಣೆಯಾಗಿ ಅರ್ಥವು ದುರ್ಬಲವಾಗಿದೆ. ಅಲ್ಲಿನ ಮಂಡಲಗೊಂಡ ಗುರುಗುಂಜಿಯ ಬಣ್ಣವು ಋತುಮತಿಯ ಯೋನಿ ಸೂಚಕವಾಗಿರುತ್ತದೆ.

ಇಲ್ಲಿ ಅಣ್ಣನು ಸೋದರಭಾವನಿಗೆ ತಂಗಿಯನ್ನು ಲಗ್ನ ಮಾಡಿಕೊಡಲು ಮನಸ್ಸಿದ್ಧವನಾದರೂ, 'ಹನ್ನೆರಡು ವರ್ಷದ ತಲದಂಡಿನ ಕಾಳಗಕ್ಕೆ ಹೋಗಿ ಬಂದು ಧಾರೆ ಎರೆಯುವೆ' ಎಂದುದು ವ್ಯಾವಹಾರಿಕ ವಿಚಾರವಲ್ಲ.

ತಂಗಿಗೆ ಹೇಳುವ, 'ಗೆಂಟ ಕಟ್ಟಲು ಬೇಡಾ' ಎಂಬುದು ಕಿರುಗಣಿ ಉಡುವ ಹುಡುಗಿಯು ತರುಣಿಯಾಗಿ ಸೆರಗಿನ ಗಂಟನ್ನು ಎದೆ ಮೇಲೆ ಕಟ್ಟುವ ಹಾಲಕ್ಕಿ ಹೆಂಗಸರ ರೂಢಿಯನ್ನು ನೆನಪಿಗೆ ತರುತ್ತದೆ.

ಅಣ್ಣ ಐದು ಖಂಡುಗ ಬೀಜ ಬಿತ್ತುವಷ್ಟು ವಿಸ್ತಾರವಾದ ಗದ್ದೆಗಳ ಒಡೆಯ, ಸಿರಿವಂತ. ಅದರಿಂದಲೇ ಮನೆಯು ಕಲ್ಲು ಕದ, ಕಲ್ಲು ಮಾಳಿಗೆಯುಳ್ಳದ್ದಾಗಿರಲು ಸಾಧ್ಯವಾದುದು.

ಇಲ್ಲಿನ ಸಲುಜಾಣನ ಹಂಚಿಕೆಯೂ ಹೊಸದಲ್ಲ, ಅತ್ತಿಗೆಯ ಮೇಲೆ ಮೋಹ ಮಾಡಿ ಬಂದ ಮೈದುನನೂ ಆಕೆ ಕದ ತೆಗೆಯದಿದ್ದಾಗ, ಅವಳು ಹೊರಗೆ ಬರುವಂತೆ ಮಾಡಲು ಕೊಟ್ಟಿಗೆಯ ದನಗಳನ್ನು ಬಿಡುವುದಿದೆ. ತಿಮ್ಮಕ್ಕನ ಪದದಲ್ಲೂ ಇದೇ ಹಂಚಿಕೆಯಿದೆ.

ಇಲ್ಲಿ ಬಣ್ಣ ಹಚ್ಚಿದ ಡಾಬನ್ನು ಹಿಡಿದುಕೊಂಡು ಹುಡುಗಿ ಮಾಲಕ್ಷ್ಮಿ ಕಲ್ಲು ಮಾಳಿಗೆ ಇಳಿದು ಬಂದುದರಲ್ಲಿ ಸ್ವಲ್ಪ ಮಾತ್ರ ವೈಶಿಷ್ಟ್ಯವಿದೆ. ಪ್ರಾಯದ ಮದವತಿ ಮಾಲಕ್ಷ್ಮಿಯು ಸುಲಭವಾಗಿ ಸೋದರ ಭಾವನಿಗೆ ಈಲಾಗುತ್ತಾಳೆ. ಅವಳು ತನ್ನನ್ನು ಒಲಿದವಳು ಎಂಬುದನ್ನು ಖಾತ್ರಿ ಮಾಡಿಕೊಳ್ಳಲು ಸಲುಜಾಣನು ಅತ್ತಿಯ ಮಗನಲ್ಲ ಯಂತಾಗಿ ಹೇಳಿದುದು, ಅವನು ಜಾಣ ಎಂಬುದನ್ನು ಸೂಚಿಸುತ್ತದೆ. ಪಗಡೆಯಾಡುವದು ಇಲ್ಲಿ ಇಲ್ಲ. ಇಬ್ಬರೂ ಸಹಭೋಜನ ಮಾಡಿದ್ದಷ್ಟರಲ್ಲಿ ಅಣ್ಣನು ಹಿಂತಿರುಗಿ ಬಂದುದಿದೆ. ಪಗಡೆಯಾಟ ಮೂಲಗೀತದಲ್ಲಿದ್ದಿರಬೇಕು. ಅಣ್ಣನಿಗೆ ಸ್ವಪ್ನ ಬಿದ್ದು ಬರುವ ಪ್ರಸಂಗ ಇಲ್ಲಿಲ್ಲ.

ಮಾಲಕ್ಷ್ಮಿಗೆ ಪ್ರಾಯ ಬಂದುದು ಅಣ್ಣನಿಗೆ ತಿಳಿದಿದ್ದಿರಲಿಲ್ಲ ಎಂದು ತಿಳಿವಂತಿದೆ. ಅವಳು ಕಿರುಗಣಿ ಉಡುತ್ತಿದ್ದಳು. ಕಿರುಗಣಿ ಉಡುವಾಗ ಬರೇ ಸೊಂಟದವರೆಗೆ ಸೀರೆ ಸುತ್ತಿ, ರವಕೆ ಹಾಕಿಕೊಳ್ಳುವ ಪದ್ಧತಿ ಹಿಂದೆ ಇತ್ತು. ಇತ್ತೀಚೆಗೆ ಕಿರುಗಣಿ ಉಡುವುದನ್ನು ಬಿಟ್ಟು ಹುಡುಗಿಯರು ಅಂಗಿಯನ್ನಾಗಲಿ, ಸ್ಕರ್ಟ ಆಗಲಿ ಧರಿಸುವುದು ರೂಢವಾಗಿದೆ. ಆದರೆ, ಈ ಗೀತದ ರಚನೆಯ ಕಾಲವು ಹಳೇ ಕಾಲ. ಅದರಿಂದ ಕಿರುಗಣಿಯನ್ನು ಉಟ್ಟ ತಂಗಿಯ ಪ್ರಾಯ ಬಂದು, ಮೊಲೆ ಮೂಡಿಬಂದುದು ಅಣ್ಣನಿಗೆ ತಿಳಿಯದೆಯೇ 'ತಂಗಿ ಇನ್ನೂ ಚಿಕ್ಕವಳು' ಎಂದು 'ತಾನು ಯುದ್ಧಕ್ಕೆ ಹೋಗಿ ಬರುವೆ' ಎಂದು ಹೇಳಿ ಯುದ್ಧಕ್ಕೆ ಹೋಗಲು ಹೊರಟವನು ದನಗಳ ಗುಂಪನ್ನು ಹೊರಗೆ ದಬ್ಬಿದ್ದನ್ನು ನೋಡಿ ಮರಳಿ ಮನೆಗೆ ಬಂದನು.

ಆಗ ತಂಗಿಯು ಭಾವನೊಡನೆ ಊಟ ಮಾಡಿ, ಚಂದವಾಗಿ ಉಳಿದಿದ್ದರಿಂದ 'ಪ್ರಾಯ ಬಂದಿದೆ ಅವಳಿಗೆ' ಎಂದು ತಿಳಿದ ಅಣ್ಣನು ತಾನೇ ಭಾವನೊಡನೆ ಜತೆಯಾಗಿದ್ದುದನ್ನು ನೋಡಿ, 'ಇನ್ನು ಮದುವೆ ಮಾಡಿಕೊಳ್ಳಿ' ಎಂದು ಹೇಳಿ ದೇಶಾಂತರಕ್ಕೆ ಹೋದನು ಎಂಬಲ್ಲಿಗೆ ಮುಕ್ತಾಯವಾಗಿದೆ.

ಕೆಲವು ವಿವರಗಳ ಕೊರತೆಯಿದ್ದ ಈ ಪಾಠದಲ್ಲಿ ವೈಶಿಷ್ಟ್ಯಗಳು ಇರುವುದರಿಂದ ಇದಕ್ಕೆ ತಕ್ಕಮಟ್ಟಿಗಿನ ಗುಣ ಬಂದಿರುತ್ತದೆ. ಇಲ್ಲಿ ತನ್ನ ತಂಗಿಯನ್ನು ಬೇರೆ ಕಡೆಗೆ ಮದುವೆ ಮಾಡಿ ಕಳಿಸಲಾರದ ಅಣ್ಣನ ಪ್ರೇಮದ ಚಿತ್ರಣವಿದೆ. ಅದು ಸೋದರ ಭಾವನೊಡನೆ ಅವಳು ಮದುವೆಯಾದರೂ ತವರಮನೆಗೆ ಎರವಾಗುವಳು ಎಂಬ ಬೇಸರ ಅಣ್ಣನಿಗಿತ್ತು.

ಸುಪ್ರಸಿದ್ಧವಾದ "ಕಾಳಿಂಗರಾಯ" ಕಥನಗೀತದ ಪ್ರಭಾವವು ಕರ್ನಾಟಕದಲ್ಲೆಲ್ಲಾ ಪಸರಿಸಿದ್ದಿತು. ವಿವರವಾಗಿ ನಾಟಕೀಯವಾಗಿ ನಿಬಿಡವಾದ ಕಾವ್ಯ ಗುಣದಿಂದ ಕೂಡಿ ಕರಾಕ್ರ ಸಂಪಾದಿತ– 'ಕಾಳಿಂಗರಾಯ' ಕಥನಗೀತವು ಹಿರಿಮೆಯನ್ನು ಪಡೆದು

ಪ್ರಸಿದ್ಧವಾಗಿದೆ. ಡಾ| ಎಂ. ಎಸ್. ಸುಂಕಾಪುರರು ಸಂಪಾದಿಸಿದ ಗ್ರಂಥದಲ್ಲಿ 'ಚೆನ್ನಮ್ಮನ ದಂಡಿ' ಎಂಬ ಹೆಸರಿನಿಂದ ಈ ಕಥನಗೀತವು ಪ್ರಸಿದ್ಧವಾಗಿದೆ.

ನನ್ನ ಸಂಗ್ರಹದ "ಕಾಳಿಂಗರಾಯ" ಅತಿಶಯ ಸಂಕ್ಷಿಪ್ತವಾಗಿ, ಸರಳವಾಗಿ ಕಥನವನ್ನು ನಿರೂಪಿಸಿ ಲಗುಬಗನೆ ಮುಗಿದುಹೋಗಿದೆ. ಇಲ್ಲಿನ ಕತ್ತಲರಾಯ ಹೇಗಿದ್ದ ಎಂಬುದನ್ನು 'ಚಿತ್ರೊಳ್ಳಾ ಬಿನುಮಣ್ಣಾ' ಎಂದು ಸೂಚಿಸಲಾಗಿದೆ. ಚಿತ್ರದಲ್ಲಿ ಬರುವಂತೆ ಬಿನುಮ ಚಂದವಾಗಿದ್ದನಂತೆ. ಮುಪ್ಪಿನ ಕಾಲದಲ್ಲಿ ಸಂತತಿಗಾಗಿ ಬೇಡಲು ಸೂಲಿಸಕರ (ಸೂರ್ಯಚಕ್ರ) ಸೂರ್ಯದೇವನ ಬಳಿಗೆ ಹೋದನೆಂಬಲ್ಲಿ ಒಂದು ವೈಶಿಷ್ಟ್ಯವಿದೆ. ಸೂರ್ಯ ಕಣ್ಣಿಗೆ ಕಾಣುವ ದೇವರು, ಅವನ ಬಳಿ ಆಸೆಯನ್ನು ತಿಳಿಸಿದಾಗ– ಮಾವಿನ ಹಣ್ಣನ್ನು ದೇವರು ಕೊಟ್ಟು, "ಮಡದಿ ಮಾಲಕ್ಷ್ಮಿಗೆ ಕೊಡು" ಎಂದು ಹೇಳಿದನು. ಒಂದು ಅವಳು ಅದನ್ನು ತಿನ್ನಬೇಕೆಂದು ಕೊಡುವಾಗ ಹೇಳಿದುದು, ಅವಳು ಅದನ್ನು ಕಚ್ಚಿಯೋ, ಕೊಯ್ದೋ ತಿಂದುದು ಇದ್ದ ಸಾಲುಗಳನ್ನು ಹೇಳಲಿಲ್ಲ.

ಮುಂದೆ ಗರ್ಭಿಣಿಯಾಗಿ ಒಂದೊಂದು ತಿಂಗಳಲ್ಲೂ ಒಂಬತ್ತು ತಿಂಗಳಲ್ಲಿ ಹಡೆದುದು ಮಾತ್ರ, ಅವಳಿಗುಂಟಾದ ಬಯಕೆಗಳನ್ನು ಸ್ವಲ್ಪ ವಿವರವಾಗಿ ತಿಳಿಸಿದ್ದು, ನಮ್ಮ ಹೆಂಗಳೆಯರು ಪೂರೈಸಿದರೆಂಬುದು ಇಲ್ಲಿ ಉಕ್ತವಾಗಿಲ್ಲ; ಇಲ್ಲಿ ಸೂಲಗಿತ್ತಿ ಬಂದುದನ್ನು ಹೇಳಲಿಲ್ಲ. ಪುತ್ರ ಜನಿಸಿದ ಮೇಲೆ ಭಟ್ಟರ ಬಳಿಗೆ ಹೋಗಿ ನಾಮಕರಣ ಯಾವುದೆಂದು ಕೇಳಿ ಹುಟ್ಟಿದ ಗಳಿಗೆಯನ್ನು ಕೇಳಿದುದುಂಟು. ಪಂಚಾಂಗ ತೆಗೆದು ನೋಡಿ (ಭಟ್ಟರು ಕೊಟ್ಟ ಹೆಸರು) 'ಹನ್ನೆರಡು ವರ್ಷ ವಯಸ್ಸಿಗೆ ಕಾಳಿಂಗರಾಯ ಹುಲಿಯ ರೂಹ (ಚಿತ್ರ) ನೋಡಿ ಮಡಿಯುತ್ತಾನೆ' ಎಂದು ಹೇಳಿದ್ದನ್ನು ಕೇಳಿ ಬಂದನು ರಾಜ.

ಹನ್ನೆರಡು ವರ್ಷ ಪ್ರಾಯದಲ್ಲಿ ಅಂಬು-ಬಿಲ್ಲು ಬೇಕೆಂದು ತಾಯಿಗೆ ಹೇಳಿ ಪಡೆದು ಹಕ್ಕಿ ಬೇಟೆಗೆ ಹೋದನು ಕಾಳಿಂಗ. ಹುತ್ತಿನ ಕೆಳಗೆ ಹುಲಿ ರೂಪನ್ನು (ಬರೇ ಚಿತ್ರ ಎಂದು ಇಲ್ಲಿ ತಿಳಿಯಬಾರದು) ನೋಡಿಯೇ ಮಡಿದನು. ಬಾಲಕರು ಹೇಳಿದ ಮಾತು ಕೇಳಿದ ತಾಯಿ-ತಂದೆ ದುಃಖಪಟ್ಟರು ಮತ್ತು ದೇವಾಲಯದಲ್ಲಿ ಮಗನ ಶವವನ್ನಿಟ್ಟ ರಾಜ- ಹತ್ತು ಹೇರು ಹೊನ್ನ ಕೊಟ್ಟ, ಬಡವನ ಏಳನೆ ಮಗಳು ಹೊನ್ನಮ್ಮನನ್ನು ಸೊಸೆಯಾಗಿ ತಂದನು. (ಹೊನ್ನನ್ನು ಅಳೆದು ಕೊಟ್ಟು ತಂದವಳು ಹೊನ್ನಮ್ಮ.) ಹೊನ್ನಮ್ಮನನ್ನೇ ಚೆನ್ನಮ್ಮ ಎಂದು ಕರೆದುದುಂಟು. ಗೀತದಲ್ಲಿ ತಂದೆ ಹೊನ್ನಮ್ಮನನ್ನು ಸತ್ತವನಿಗೆ ಮದುವೆ ಮಾಡಿಕೊಡುವ ಕಾರ್ಯಕ್ರಮವನ್ನು ಹೇಳದೆ– 'ಹಾಳುಬಿದ್ದ ದೇವಾಲಯದಲ್ಲಿ ಹೆಣದೊಡನೆ ಅವಳನ್ನು ಕೂಡಿ ಹಾಕಿ ಕತ್ತಲರಾಯನು ಮೀಡ(ಅಗುಳಿ) ಜಡಿದು ಹೋದ' ಎಂದು ತಿಳಿಸಿದ್ದು ನಿರೂಪಣೆಯ ಅವಸರದ ಸರಣಿಯನ್ನೇ ತೋರಿಸುತ್ತದೆ.

ಮೂರು ಎಳ್ಳುಂಡೆಗಳನ್ನು ತಾಯಿ ಕೊಟ್ಟಿದ್ದಳು ಚೆನ್ನಮ್ಮನಿಗೆ, ಅವನ್ನು ಮುರಿದು ಬಹುಶಃ ಹಾರಿಹೋದ ಸಾಲುಗಳಲ್ಲಿ ದೇವರಿಗೆ ಅರ್ಪಿಸಿದ್ದಿರಬೇಕು. ಪಾರ್ವತಿಪರಮೇಶ್ವರರು

ಬಂದರು. ಯಾರೆಂದು ಕೇಳಿದಾಗ, ಅದಕ್ಕೆ ಹೇಳಿದ್ದು 'ಇಲ್ಲಿಲ್ಲ, ಗಂಡನ ಹೆಣದ ಕೈಹಿಡಿದು ಕುಳ್ಳಿರಿಸು' ಎಂದು ಹೇಳಿ ಮಾಯವಾದರು ಅವರು.

ಬೆಳಗಾದ ಮೇಲೆ ಬೆಂಕಿಪೆಟ್ಟಿಗೆ ಸೌದೆ ತಂದನು ಕತ್ತಲರಾಯ, ಇತ್ತ ಇಬ್ಬರೂ ಪಗಡೆಯಾಟ ಆಡುತ್ತ ಕುಳಿತಿದ್ದರು. ಇದು ಕಥೆಯಲ್ಲಿ ಒಳ್ಳೇ ಸಂದು(ಆಶಯ). ಕತ್ತಲರಾಯ ಅವನು ನೋಡಿ ಬಾಗಿಲು ತೆರೆದು ಹಕ್ಕಿ ಬೇಟೆಗೆ ಹೋಗಿದ್ದು, ಇದು ಕಥಾನಕದ ಚಮತ್ಕಾರ ಆಶಯವಾಗಿದೆ. ವರ್ತಮಾನ ತಿಳಿದು ಅತ್ತೆ ಓಡೋಡಿ ಬಂದು ಚೆನ್ನಮ್ಮನನ್ನು ಕರೆತಂದು ಮುತ್ತ ಕಂಡಂತೆ ಸಲುಹಿದಳು.

ಈ ಎಲ್ಲಾ ಗೀತಗಳ ನಿರೂಪಣೆಯಲ್ಲಿ ಎಲ್ಲಿಯೂ ಯಾವುದೇ ಗೋಜಲು ಇಲ್ಲ, ಸಲೀಸಾಗಿ ಹೇಳಲಾಗಿದೆ. ವಿವರ ಇದ್ದರೆ ಒಳ್ಳೆಯದಾಗಿತ್ತು, ಮುಖ್ಯ ಕಥೆಯ ಸಂಕ್ಷಿಪ್ತ ರೂಪವನ್ನಷ್ಟೇ ಹೇಳಿ ಮುಗಿಸಲಾಗಿದೆ ಇಲ್ಲಿ.

"ಸೂರ್ಯಚಕ್ರ" ಕಥನ ಗೀತವು ಒಂದು ಒಳ್ಳೆಯ ಕಥನ ಗೀತವಾಗಿದೆ. ಅಣ್ಣ-ತಮ್ಮ, ತಂಗಿಯರ ಒಬ್ಬರ ಮೇಲೊಬ್ಬರ ಗೌರವ, ಪ್ರೀತಿ ಬಹಳ ಸುಂದರವಾಗಿ ನಿರೂಪಿತವಾಗಿದೆ. ಎಲ್ಲರೂ ತುಂಬಾ ಅನ್ಯೋನ್ಯವಾಗಿದ್ದಾರೆ. ದಂಡಿಗೆ ಹೊರಟಾಗ ಆದ ಅಪಶಕುನಗಳಿಂದ ಹೆದರಿದ ಹೆಂಡತಿ ಬಹಳವಾಗಿ ಗಂಡನನ್ನು ಪ್ರಾರ್ಥಿಸುತ್ತಾಳೆ. ಆದರೂ ಕರ್ತವ್ಯನಿಷ್ಠನಾದ ತಮ್ಮ ಸೂರ್ಯಚಕ್ರ ಅದೊಂದನ್ನೂ ಲೆಕ್ಕಿಸದೆ ದಂಡಿಗೆ ಹೋಗಿ ಕಾದಾಡುತ್ತಾನೆ ಗುಂಡು ತಾಗಿದರೂ ತಿರುಗಿ ಮನೆಗೇ ಬಂದು ಪ್ರಾಣಬಿಡುತ್ತಾನೆ.

# ಅರ್ಜುನ ಜೋಗಿ

ಇಲ್ಲಿ ತಳುನಾರೇ ಇಲ್ಲಿಯ ಬಹುಗಿದಾಳೇ
ಈಳೀ ಬಾಳೀಯ ಎನುದಾರೇ ತಾನ
ಇಲ್ಲೀ ಈಳೀ ಬಾಳೀಯ ಬನುದಾ ಮಾಯ್ಯ್ಯಮ್ಮ
ನೀನು ನೇನುದಿ ಕತಿಯಾ ತೊಡಗಿದನೇ ತಾನ
ಮನಸೀಲಿಂದು ಕತೆಯೊಂದೂ ಬರಬೇಕೇ ತಾನ ‖ 1 ‖
ಮನಸೀಲಿಂದು ಕತೆಯೊಂದು ಬರಬೇಕು ಲಂದೇಳಿ
ಮನಸೀಲಿಂದ ಕತಿಯ ಬರಬೇಕು ತಾನ ‖ 2 ‖
ವಂದೇ ತಾಯಿಗೂ ಯೇಳಾ ಜನ ಮಗದೀರೂ
ಯೇಳ ಜನ ಮಗದಿರಿಗೂ ಯೇಳ ಹಿಂಡುರೇ ತಾನ ‖ 3 ‖
ಯೇಳ ಜನ ಮಗದಿರಿಗೂ ಯೇಳ ಹಿಂಡೂರಾಗಿನ್ನ
ವಂದೆಲ್ಲಾ ವಂದ ದಿನದಲ್ಲೇ ತಾನಾ ‖ 4 ‖
ವಂದಲ್ಲಾ ವಂದ ದಿನದಲ್ಲೇ ಲೇಗಿನ್ನು
ದಂಡೀನ ವಾಲೆ ಬಂದಿತೇ ತಾನ ‖ 5 ‖
ದಂಡೀನ ವಾಲೆ ಬಂದೀತೂ ಲೀಗಿನ್ನು
ಹೆರೆಯವನಾ ಕೈಲೀ ಸಿಕ್ಕೀತೂ ತಾನ ‖ 6 ‖
ಹೆರಿಯವನಾ ಕೈಲೀ ಸಿಕ್ಕೀತೂ ಲೇಗಿನ್ನೆ
ತನ್ನ ತಾಯವ್ವೀ ಕರುದೀದ ತಾನಾ ‖ 7 ‖
“ಹಲಗಂಜಿ ಆಗಲೂ ಅನುಮಾಡೇ ತಾನ
ದಂಡಾಡೂಕಾರೂ ಹೋಗಬೇಕೇ ತಾನ ‖ 8 ‖
ದಂಡಾಡೂಕಾರು ಹೋಗಬೇಕು ನನ್ನಾ ತಾಯೇ
ಯೆಂಟಾ ದಿನದಲ್ಲೀ ಬರುತ್ತೇನೆ ತಾನಾ ‖ 9 ‖
ಯೆಂಟಾ ದಿನುದಲ್ಲಿ ಬರುತ್ತೇನೆ” ಲಂಬೂಕು
ತಾಯವ್ವೀ ಅಡುಗೀ ಮಾಡದಿಯೇ ತಾನಾ ‖ 10 ‖

ದೊಡ್ಡ ಲಟ್ಟಕ್ಕೂ ದೊಡ್ಡ ಯೇಣಿತಾಡೀ
ದೊಡ್ಡಕ್ಕೀ ತೆಗುದು ಯಸರಿಟ್ಟೀ ತಾನಾ ‖ 11 ‖
ಸಣ್ಣ ಲಟ್ಟಕ್ಕೂ ಶಣ್ಣ ಯೇಣೊಂದು ತಾಡೀ
ಶಣ್ಣಕ್ಕೀ ತೆಗುದೂ ಯನಂತು ತಾಯೀ ‖ 12 ‖
‘ಹಲಗಂಜೀ ಹಗಲೂಟಕು ಅನುಮಾಡ್ತೇ’ ತಾನಾ
ನೂರೊಂದು ಬಗ್ಯಾದಾ ಕಜ್ಜಾಯ ತಾನಾ ‖ 13 ‖
ನೂರೊಂದು ಬಗ್ಯಾದಾ ಕಜ್ಜಾಯ ಲೀಗಿನ್ನೂ
ಮಾಡಿದ್ದಳ್ಕೊಂದು ಗಳಗೀಲಿ ತಾನಾ ‖ 14 ‖
ಬಚ್ಚಲಕು ಕಿಚ್ಚಾ ಉರಸಾಳೇ ತಾನಾ
ತನ್ನ ಮಗುದೀರಾ ಕರುದಾಳೇ ತಾನಾ ‖ 15 ‖
ತನ್ನ ಮಗುದೀರಾ ಕರದಾದೇ ತಾಯವ್ವ
ಯೆರ್ಡು ಕೈಲ್ಯೆಯ್ಡಾ ಶಳುನುಂಚ ತಾನಾ ‖ 16 ‖
ಯೆರ್ಡು ಕೈಲ್ಯೆಯ್ಡಾ ಶಳುನುಂಚಲಿಡು ತಡುಕಂಡೀ
ಯೆಣ್ಣೀ ಕಂದಾಲಾ ಹಿಡಕಂಡೇ ತಾನ ‖ 17 ‖
ಯೆಣ್ಣೀ ಕಂದಾಲ ಹಿಡುಕಂಡೀ ತಾಯವ್ವ
ಬಚ್ಚಲಕೂ ಲಾರು ನೆಡುದಳೆಯೇ ತಾನಾ ‖ 18 ‖
ಮೆಯಿಗೆಣ್ಣೀಯಾ ಉಗರಾಡೀ ತಾನಾ
ಮೈಯಿಗೆಣ್ಣೀಯಾ ಉಗರಾಡೀ ಲಾಗಿನ್ನು
ಯೇಳು ಜನ ಮಗದೀರೂ ಮಿಂದರೇನೋ ತಾನಾ ‖ 19 ‖
ಯೇಳು ಜನ ಮಗದೀರೂ ಮಿಂದಿನ್ನು ವಗುದರೇ
ದೇವರ ಶೈವಾಗೀ ನಿಲುವರೇ ತಾನಾ ‖ 20 ‖
ದೇವರು ಶೈವಾಗೀ ನಿತ್ತಾರೇ ಲಾಗಿನ್ನು
ಕಾಯೊಡುದಿ ಕೈಯೊಂದ ಮುಗುದರೆಯೇ ತಾನಾ ‖ 21 ‖
ಕಾಯೊಡುದಿ ಕೈಯೊಂದ ಮುಗುದಾರೆ ಲಾಗಿನ್ನು
ಮಾಳೂಗೀಗಾರೂ ನಡುದಾರೆಯೇ ತಾನಾ ‖ 22 ‖
ಮಾಳೂಗೀ ವಳುಗೇ ನೆಡುದಾರೇ ಮುಗುದೀರ
ಯೇಳು ಮುಗುದಿರಿಗೂ ಯೆಳು ಬಾಳೇ ತಾನಾ ‖ 23 ‖

ಯೇಳು ಮಗದಿರಿಗೂ ಯೇಳ ಬಾಳೆಲಿಟ್ಟಿನ್ನೂ
ಯೇಳು ಮಣಿಯೊಂದು ಲಿಟ್ಟಿದೋ ತಾನಾ ‖ 24 ‖
ಯೇಳೂ ಮಣಿಯೊಂದು ಲಿಟ್ಟಿದೇ ತಾಯವ್ವ
ಮಾಡಿದ ಕಜ್ಜಾಯ್ಯ ಬಡುಸದಿಯೇ ತಾನಾ ‖ 25 ‖
ಮಾಡಿದ ಕಜ್ಜಾಯ್ಯ ತಪ್ಪದೆ ಬಡಸಾಳೇ
ಕಾಸುದಾ ತುಪ್ಪ ಯೆರುದಾಳೆಯೇ ತಾನಾ ‖ 26 ‖
ಕಾಸದಾ ತುಪ್ಪ ಯೆರುದೀ ಹಿಂತಿರುಗೋ ತಾನಾ
ಉಂಡೇ ಕೈಬಾಯಾ ತೊಳುದರೆಯೇ ತಾನಾ
ಉಂಡೀ ಕೈಬಾಯಾ ತೊಳುದರೇ ಮಗದೀರೂ
ತೂಗೂ ಮಂಚದ ಮೇನೇ ಕುಂತಾರೆಯೇ ತಾನಾ ‖ 27 ‖
ತೂಗೂ ಮಂಚದ ಮೇನೇ ಕುಂತಾರೇ ಮಗುದೀರು
ತಾಯೀ ಮಾಳುಗಿಗೂ ನೆಡದಾಳೆ ತಾನಾ
ಅಯೊಳ್ಳಾ ಹಣ್ಣಡುಕೇ ಸೊಲುದಿಟ್ಟಾ ಬೆಳೆಯಾಲೇ
ಹಾಲೀನಲಿ ಬೆಂದ ತೆನಿ ಸುಣ್ಣಾ ತಾನಾ ‖ 28 ‖
ಹಾಲೀನಲಿ ಬೆಂದಾ ತೆನಿ ಸುಣ್ಣಾ ತಡುಕಂಡೀ
ಮಗುನಾ ಯೆದುರಾರೂ ಬರುವಳೇ ತಾನಾ ‖ 29 ‖
ಮಗುನಾ ಯೆದುರಾರೂ ಬಂದಾಳೆ ತಾಯವ್ವ
ಯೆಲಿ ತಿಂದು ರಜುವಾರು ಉಗುಳರೇ ತಾನಾ ‖ 30 ‖
ಯೆಲಿ ತಿಂದು ರಜು ವೊಂದಾ ಉಗುಳಾರೇ ಮಗುವೀರೂ
ತಾಯಿ ಮಾಳುಗಿಗೇ ನೆಡುದಾಳೇ ತಾನಾ
ತಾಯಿ ಮಾಳುಗಿಗೇ ನೆಡುದಾಳೆ ಲಾಗಿನ್ನು ‖ 31 ‖
ಮಗದಿರು ಮಾಳುಗಿಗೂ ನೆಡುದಾರೆಯೆ ತಾನಾ
ಮಗುದಿರು ಮಾಳುಗಿಗೂ ನೆಡುದಿರು ಲಾಗಿನ್ನು
ಪೆಟ್ಟುಗಿ ಬಾಯೇ ಬಿಡುಸಾರೆ ತಾನಾ ‖ 32 ‖
ಪೆಟ್ಟುಗಿ ಬಾಯಾ ಬಿಡುಸಾರೆ ಮಗದೀರು
ತಮ್ಮ ಮುಸ್ತಾಡೀ ತಗುದರೆಯೇ ತಾನ

ತಮ್ಮ ಮುಸ್ತಾಡೀ ತಗುದಾರೇ ಮಗುದೀರೂ
ಯೇಳುಜನ ಮಗುದೀರು ಮುಸ್ತಾಡಿಲಿರುಸರೆಯೇ ತಾನಾ ‖ 33 ‖
ತಮ್ಮ ಮುಸ್ತಾಡಿ ಲಿಟುಕಂಡಿ ಲಾಗಿನ್ನು
ಮಾಳುಗಿಗಿಂದ ಹೆರುಗೇ ಹೈಟರೇ ತಾನಾ ‖ 34 ‖
ಮಾಳುಗಿಗಿಂದ ಹೆರುಗೇ ಹೈಟಾರೇ ಮಗುದೀರೂ
ಕುದುರೆ ಸಾಲೀಗೇ ನಡುದರೆಯೇ ತಾನಾ ‖ 35 ‖
ಕುದುರೆ ಸಾಲೀಗೇ ನೆಡುದರು ತಮದಿರೂ
ಯೇಳೂ ಜನ ಅಣತಮ್ಮದೀರೂ ಯೇಳೂ ಕುದುರೆ ತಾನಾ ‖ 36 ‖
ಯೇಳೂ ಪಟವೊಂದಾ ಹಿಡುದರೆಯೇ ತಾನಾ
ಯೇಳೂ ಪಟವೊಂದಾ ಹಿಡುದಾರಣತಮದೀರೂ ‖ 37 ‖
ಬಂದೀ ಬಾಗ್ಲದಲ್ಲಿ ನಿಲುವಾರೊ ತಾನಾ
ಬಂದೀ ಬಾಗ್ಲಾದಲ್ಲಿ ನೀಲುವಾರಣತಮದೀರು
ಯೇಳಜನಕ್ಕ ತಂಗದೀರೂ ಬರವಾರೋ ತಾನಾ ‖ 38 ‖
ಚಿನ್ನವಾ ಕುಟ್ಟಿ ಚಿನ್ನದಾರುತೀಯೇ ಕಟ್ಟಕಂಡೇ
ಬೆಳ್ಳಿ ಕುಟ್ಟಿ ಬೆಳ್ಳಿಯ ಆರುತೀಯೇ ತಾನಾ ‖ 39 ‖
ಬೆಳ್ಳಿ ಕುಟ್ಟಿ ಬೆಳ್ಳಿಯಾ ಲಾರುತೀ ತಡೂಕಂಡೇ
ಕುದುರೀಗಾರೂತೇ ಬೆಳುಗರೆಯೇ ತಾನಾ ‖ 40 ‖
ಕುದುರಿಗೊಂದು ಚಬುಕೀ ಹೊಡುದರೆಯೇ ತಾನಾ
ಆರು ತಿಂಗಳ ನಡುಹಾದೀ ಅರು ಗಳಿಗಿಲಿ ತೊಳಿಬೇಕು.
ಅರುಣದಲಿ ನಿಲಬೇಕೂ ತಾನಾ ‖ 41 ‖
ಕುದುರಿಗೊಂದು ಚಬುಕು ಹೊಡದರೆಯೇ ತಾನಾ
ಕುದುರಿಗೊಂದು ಚಬುಕಾ ಹೊಡುದಾರಣತಮದೀರು
ಅರುಣೀಲ್ಲೀ ನೆಡಿದರೇ ತಾನಾ ‖ 42 ‖
ಅರುಣೀಲ್ಲೀ ನೆಡುದಾರಣತಮದೀರು
ಆರುಮೂರು ದೀವಾಸಾ ಗಳುದೀವೂ ತಾನಾ ‖ 43 ‖
ಆರಮೂರು ದೀನಾವೂ ಗಳುದೀವು ಲಾಗಿನ್ನು
ವಂದಾ ಜೋಗಿಯಾರೂ ಬಂದಿದುನೇ ತಾನಾ ‖ 44 ‖

ವಂದಾ ಜೋಗಿಯಾರೂ ಬಂದಿದ ಲಾಗಿನ್ನು
ತಪ್ಪಾತಾಳ ಹೊಯ್ದೀ ಕುಳತಿದನೇ ತಾನಾ
ತಪ್ಪಾತಾಳ ಹೊಯ್ದೀ ಕೂತೀದ ಲಾಜೋಗೀ ॥ 45 ॥
ಆರು ಜನಲಕುತಂಗುದೀರೂ ಬಂದಿದುರೇ ತಾನಾ
ದೊಡ್ಡ ಲಚುಗೇಲೀ ದೊಡ್ಡಕ್ಕೀ ಲೊಯ್ಕಂಡೆ ॥ 46 ॥
ದೊಡ್ಡ ತೆಂಗೀನಾ ಪಲುಗಾಯೇ ತಾನಾ ॥ 47 ॥
ದೊಡ್ಡ ತೆಂಗೀನಾ ಪಲುಗಾಯಾ ತಡುಕಂಡೇ
'ಇಕ್ಕೊಳ್ಳೋ ಜೋಗೀ ಪಡಿದಾನಾ' ತಾನಾ ॥ 48 ॥
'ನೀವು ಕೊಟ ಪಡೀ ಮುಟ್ಟು ಜೋಗಿ ತಾನಲ್ಲ
ಸೌಭದ್ರಿ ಕೈ ಪಡಿಯೇ ಬರಬೇಕೂ ತಾನಾ ॥ 49 ॥
ಸೌಭದ್ರಿ ಕೈ ಪಡಿಯೇ ಬರಬೇಕೋ' ಲಂದೇಳೀ
ಯೇನೇಳಿದರೂ ಕೇಳುದಿಲ್ಲಾ ತಾನಾ ॥ 50 ॥
ಯೇನೇಳಿದರೂ ಕೇಳುದಿಲ್ಲಾ ಲಾಜೋಗೀ
ಸೌಭದ್ರಿ ದೂಸ್ತಾ ದರುಸದಿಯೇ ತಾನಾ ॥ 51 ॥
ಸೌಭದ್ರಿ ದೂಸ್ತಾ ದರುಸದೆ ಲತ್ತೀಲಿಂದ
ಸಣ್ಣಾ ಲಚುಗೀಲಿ ಶಣ್ಣಕ್ಕೀ ತೊಯ್ಯಂದಾ
ಸಣ್ಣಾ ತೆಂಗೀನಾ ಪಲುಗಾಯೀ ತಾನಾ ॥ 52 ॥
'ಅಕ್ಕಳ್ಳೋ ಜೋಗೀ ಪಡಿದಾನಾ' ತಾನಾ
'ನೀವೂ ಕೇಟೂಪಡಿ ಮುಟ್ಟೂ ಜೋಗಿಯಲ್ಲಾ
ಸೌಭದ್ರಿ ಕೈಪಡೀ ಬರಬೇಕೋ ತಾನಾ
ಸೌಭದ್ರಿ ಕೈಪಡೀ ಬರಬೇಕೋ'ಲಂದೇಳೀ ॥ 53 ॥
ತಪ್ಪಾತಾಳ ಹೊಯ್ದೀ ಕೂತಿದುನೇ ತಾನಾ
ಯೇಳು ಜನ ಲಕುದೀರೂ ಕೈಕೈಯೇ ಲಿಡು ಕಂಡೀ ॥ 54 ॥
ಒಂದೇ ಬಾಗ್ಲದಲ್ಲಿ ನಿಲುವರೋ ತಾನಾ
ಒಂದೇ ಬಾಗ್ಲದಲ್ಲಿ ನಿಲವರಕ್ಕ ತಂಗೂದಿರೂ ॥ 55 ॥

‘ಇಕ್ಕೊಳ್ಳೊ ಜೋಗೀ ಪಡೆದಾನಾ ತಾನಾ
ಇಕ್ಕೊಳ್ಳೊ ಜೋಗೀ ಪಡೆದಾನಾ’ ಲಂಬುಕೂ ‖ 56 ‖
ಯೋಳೂ ಮಂಡ್ಲನೂ ಬರುದನಿಯೆ ತಾನಾ ‖ 57 ‖
ಯೇಳೂ ಮಂಡ್ಲವಾ ಬರುದೇ ಯೋಳೂ ಗೆರಿಯಾನೇ ಮಾಡೀ
‘ಯೇಳು ಮಂಡ್ಲದೊಳಗೆ ಬರಬೇಕೂ’ ತಾನಾ ‖ 58 ‖
ಹಿಂದೆ ಹಿಡುದುರೇ ‘ಹಿಂದೆ ಬಿಡೇ’ ಮುಂದು ಹಿಡುದುರೇ ‘ಮುಂದೆ ಬಿಡೇ’
ತೋಳೊಂದ ಹಿಡುದಾರೂ ‘ಮೊದ್ಲ ಬಿಡೇ’ ತಾನಾ ‖ 59 ‖
ಹಿಂದೆ ಹಿಡುದಾರ ಹಿಂದೆ ಬಿಟ್ರು, ಮುಂದೆ ಹಿಡುದಾರ ಮುಂದೆ ಬಿಟ್ರು
ತೋಳೊಂದ ಹಿಡುದಾರೂ ಮೊದ್ಲ ಬಿಟ್ಟೊ ತಾನಾ ‖ 60 ‖
ತೋಳೊಂದ ಹಿಡುದಾರಾ ಮೊದ್ಲ ಇದ್ನೇ ಬಿಟ್ಟಿರೂ
ಯೆದ್ದಿಲಿವನಾರು ನಿತ್ತಿದನೇ ತಾನಾ ‖ 61 ‖
ಯೆದ್ದಿಲಿವನಾರು ನಿತ್ತೀದಾ ಲಾ ಜೋಗೀ
‘ಇಕ್ಕಳೋ ಜೋಗಿ ಲೀಗೇ ಪಡೆದಾನಾ’ ತಾನಾ ‖ 62 ‖
‘ಇಕ್ಕಳೋ ಜೋಗಿ ಈಗೇ ಪಡೆದಾನಾ’ ಲಂಬೂಕೂ
ವಂದಳ್ಳು ಮಂತ್ರೀಸಿ ವಗುದನಿಯೇ ತಾನಾ ‖ 63 ‖
ವಂದಹಳ್ಳು ಮಂತ್ರೀಸಿ ವಗುದೀದಾ ಲಾಗಿನ್ನು
ಜಾಲುಗುನ್ನಿಯಾಗೀ ನಿತ್ತೀತೂ ತಾನಾ ‖ 64 ‖
ಜಾಲುಗುನ್ನಿಯಾಗೀ ನಿತ್ತೀತೂ ಲಾಗಿನ್ನು
ಮತ್ತೋಂದು ಹಳ್ಳು ಮಂತ್ರೀಸೀ ವಗುದನೆಯೇ ತಾನಾ ‖ 65 ‖
ಮತ್ತೋಂದು ಹಳ್ಳು ಮಂತ್ರೀಸೀ ವಗುದೇವಾಲಾಗಿನ್ನು
ಜೋಗೀ ಬೆನ್‌ಹತ್ತೀ ನೆಡುದದಿಯೇ ತಾನಾ ‖ 66 ‖
ಜೋಗೀ ಬೆನ್‌ಹತ್ತೀ ನೆಡುದಾದೇ ಸೌಭದ್ರೆ
ಆರು ಜನ ಲಕುದೀರು ಲತ್ತೇಲಂಬವಳೀಗೀ
ಬಿದ್ದಿಬಿದ್ದಿ ಹೋಡೀಲೊಯ್ತಾರೆಯೇ ತಾನಾ ‖ 67 ‖
ಬಿದ್ದಿಬಿದ್ದಿ ಹೋಡೀಲೊಯ್ತಾರೆಯೇ ಲೀಗಿನ್ನು
“ಮಗುದೀರೀಗ ಯಾವಲೂದಾರ್ಣೀ ಕೊಡಬೇಕೂ?” ತಾನ? ‖ 68 ‖

“ಮಗುದೀರೀಗ ಯಾವಲೂದಾರ್ಣೀ ಕೊಡಬೇಕೂ”ಲಂದಿನ್ನು
ಯೆಳು ಜನವಿನ್ನು ತೀಡತಾರೆಯೇ ತಾನಾ ‖ 69 ‖
ಯೇಳ ಜನವೀಗಿನ್ನೂ ತೀಡತಾರೇ ಲಾಗಿನ್ನ
ಆರು ಮೂರು ದಿವ್ಸಾ ಕಳುದೀತೂ ತಾನಾ
ಆರು ಮೂರು ದಿವ್ಸಾ ಕಳುದೀತೂ ಲಾಗಿನ್ನು ‖ 70 ‖
ಹೆರಿಯವಿಗೂ ತಾರೊಕ್ಣೀ ಲಾಗುತದಿಯೇ ತಾನಾ
ಹೆರಿಯವಿಗೂ ತಾರೊಕ್ಣೀ ಲಾಗುತಾದೇ ಲಾಗಿನ್ನು
ಮನಿಯಲ್ಲು ಬಾಳಾ ಕೆತೂನ ನಡುದದಿಯೇ ತಾನಾ ‖ 71 ‖
ಮನಿಯಲ್ಲು ಬಾಳಾ ಕೆತೂನೆ ನಡುದಾದೆಲಂದೇಳೀ
ತನ್ನತಮುದೀರಾ ಯೇಳುಸನಿಯೇ ತಾನಾ ‖ 72 ‖
ತನ್ನತಮುದೀರಾ ಯೆಳುಸಾನೇ ಲಾಗಿನ್ನು
“ಅರುಣೀಗೂ ನಾವೂ ಹೋಗುಕಿಲ್ಲಾ ತಾನಾ ‖ 73 ‖
ಅರುಣೀಗೂ ನಾವೂ ಹೋಗುಕಿಲ್ಲಾ ತಮ್ಮದೀರೇ
ತಮ್ಮನಿಗೂ ತಾವೂ ಹೋಗಬೇಕೂ ತಾನಾ ‖ 74 ‖
ತಮ್ಮನಿಗೂ ತಾವೂ ಹೋಗಬೇಕೂ ತಮುದೀರೇ
ತಮಗೇ ಬಾಳಾ ಸಪುನಾ ಕಂಡೀತೇ ತಾನಾ ‖ 75 ‖
ತಮಗೇ ಬಾಳಾ ಸಪುನಾ ಕಂಡೇನೂ ತಮ್ಮದಿರೆ
ಮನಿಯಲಿ ಯಾವ ಕೆತೂನಾ ನಡಿದಿದಯೋ ತಾನಾ ‖ 76 ‖
ಮನಿಯಲಿ ಯಾವ ಕೆತೂನಾ ನಡಿದಿದಯೋ” ಲಂದೇಳೀ
ಅರುಣಿಗೋದ ಪಟೂವಾ ತೊಳಿಲಲ್ಲಾ ತಾನಾ ‖ 77 ‖
ಅರುಣಿಗೋದ ಪಟೂವಾ ತೊಳಿಲಿಲಾ- ಅಣ್ಣತಮ್ಮದೀರೂ
ಯೇಳಾ ಕುದುರ್ಯಾ ಲತ್ತಿದುರೋ ತಾನಾ ‖ 78 ‖
ಯೇಳು ಕುದುರೀಲತಿಕಂಡಿ ಯೆಳ ಪಟುವಾ ಲಡುಕಂಡಿ
ಕುದುರಿಗೊಂದು ಚಬೂಕಾ ಹೊಡದರೇ ತಾನಾ ‖ 79 ‖
“ಆರು ತಿಂಗ್ಳಿಗೆ ನಡೆವಾದೇ ಆರು ಗಳಿಗೇ ತೊಳಿಬೇಕು
ನನು ಮನಿಗು ನಾವೂ ಹೋಗಬೇಕೂ ತಾನಾ ‖ 80 ‖

ನನು ಮನಿಗು ನಾವೂ ಹೋಗಬೇಕೂ" ಲಂದೇಳೀ
ಕುದುರಿಗೊಂದು ಚಬುಕಾ ಹೊಡದರೆಯೇ ತಾನಾ ‖ 81 ‖
ಕುದುರಿಗೊಂದು ಚಬುಕಾ ಹೊಡದರಣುತಮುದೀರೂ
ಬಂದೀ ಬಾಗುಲಲ್ಲೀ ನಿತ್ತಿದುರೂ ತಾನಾ ‖ 82 ‖
ಬಂದೀ ಬಾಗುಲಲ್ಲೀ ನಿತ್ತಾರಣತಮುದೀರೂ
ಆರು ಜನ ಅಕ್ಕ ತಂಗಿದೀರೂ ತಾಯಿಯೇ ತಾನಾ ‖ 83 ‖
ಆರು ಜನ ಅಕ್ಕ ತಂಗಿದೀರೂ ತಾಯಿಯೇ ಲಂಬೋಳೂ
ಚಂಬೂಗೀ ಉದೂಕಾ ತಡುದರೆಯೇ ತಾನಾ ‖ 84 ‖
ಚಂಬುಗೀ ಉದುಕಾ ತಡುದಾರಕು ತಂಗುದೀರೂ
"ಕಾಲೂ ಶಿರಿ ಮೂಕಾ ತೊಳಾಕಣೀ" ತಾನಾ ‖ 85 ‖
"ಕಾಲೂ ಶಿರಿ ಮೊಕುವಾ ತೊಳೆವಾಕೆ ನನ ತಾಯೇ
ಕಿರಿತಮ್ಮನಿಂಡೂತೀ ಯೆಲ್ ಹೋಯ್ತೇ?" ತಾನಾ ‖ 86 ‖
"ಯೆಲ್ಲಿಗೋದರೂ ಹೇಳುತ್ತೇನೆ ಮುಗೂದೀರಾ
ಕಾಲು ಶಿರಿಮೊಕುವಾ ತೊಳಕಣೀ ತಾನಾ ‖ 87 ‖
ಕಾಲು ಶಿರಿಮೊಕುವಾ ತೊಳಕಣೀ ಮುಗುದೀರಾ
ಅಸುರ ಬಾಯಾರೊಂದಾ ಕುಡುಕಣೀ" ತಾನಾ ‖ 88 ‖
"ಕಾಲು ಶಿರಿಮೊಕಾ ತೊಳುದಿಲ್ಲಾ ಲಾಸರು ಬಾಯಾರೊಂದಾ ಕುಡುದು ಬೇಡಾ
ಯಲ್ಲಿಗೋದಾರೂ ಹೇಳಬೇಕೂ" ತಾನಾ ‖ 89 ‖
"ಯಲ್ಲಿಗೋದಾರೂ ಯೆನೇಲ್ಲೀ ಮಗೂದೀರಾ
ನೀವ್ ಹೋಗಿ ಅರು ಮೂರಾ ದಿನದಲ್ಲಿ ತಾನಾ ‖ 90 ‖
ನೀವ್ ಹೋಗಿ ಅರು ಮೂರಾ ದಿನದಲ್ಲಿ ಮಗುದೀರಾ
ವಂದಾ ಜೋಗ್ಯಾರೂ ಬಂದಿದುನೋ ತಾನಾ ‖ 91 ‖
ತಪ್ಪಾತಾಳಾ ಹೋಯ್ದೀ ಕೂತಿದನೋ ತಾನಾ
ದೊಡ್ಡ ಲಚುಗೇಲಿ ದೋಡ್ಡಕ್ಕಿ ಲೊಯ್ದಂಡೀ ‖ 92 ‖
ದೊಡ್ಡ ತೆಂಗಿನ ಪಲುಗಾಯೀ ತಾನಾ
ದೊಡ್ಡ ತೆಂಗಿನ ಪಲುಗಾಯೀ ತಡುಕಂಡೇ
ಆರುಜನಲಕ ತಂಗದೀರೂ ಬರುವಾರೊ ತಾನಾ ‖ 93 ‖

ಆರುಜನಲಕ ತಂಗದೀರೂ ಹೊರುಬಂದಾರೂ ಮಗುದೀರಾ
ಜೋಗಿಗು ಪಡಿಯೊಂದಾ ಕೊಟ್ಟಿದುರೋ ತಾನಾ ॥ 94 ॥
ಅವ್ರ ಕೊಡು ಪಡೀ ಮುಟ್ಟುಲಿಲ್ಲ ಕಿಟ್ಟಲಿಲ್ಲಾ
'ಸೌಬದ್ರಿ ಕೊಟ್ಟು ಪಡೀ ಬರಬೇಕೋ' ಲಂದಹೇಳೀ
ತಪ್ಪಾತಾಳ ಹೊಯ್ದೀ ಕೂತೀದಾ ತಾನಾ ॥ 95 ॥
ತಪ್ಪಾತಾಳ ಹೊಯ್ದೀ ಕೂತೀದಾ ಮಗದಿರಾ
ಸೌಬದ್ರೀ... ದುಸ್ತೊಂದಾ ದರುಸಿದಯೇ ತಾನಾ ॥ 96 ॥
ಸೌಬದ್ರೀ... ದುಸ್ತೊಂದಾ ದರುಸಿದೇ ಮಗುದೀರಾ
ನಾನೂ ಕೊಟ್ಟ ಪಡೀನೂ ಮುಟ್ಟಲಿಲ್ಲಾ ತಾನಾ ॥ 97 ॥
ತಪ್ಪಾತಾಳ ಹೊಯ್ದೀ ಕೂತಿದನೋ ಮಗದೀರಾ
ಯೇಳು ಜನ ಅಕ್ಕ ತಂಗದಿರೂ ಬಂದೀರೋ ತಾನಾ ॥ 98 ॥
ಯೇಳು ಜನ ಅಕ್ಕ ತಂಗದಿರೂ ಬಂದೀರೊ ಮಗುದೀರಾ
ಬಂದೀ ಬಾಗಿಲಲ್ಲೀ ನಿತ್ತಿದರೋ ತಾನಾ ॥ 99 ॥
ಬಂದೀ ಬಾಗಿಲಲ್ಲೀ ನಿತ್ತಿದರೋ ಮಗುದೀರಾ
ಜೋಗಿಗು ಪಡಿಯೊಂದಾ ಕೊಟ್ಟಿದರೋ ತಾನಾ ॥ 100 ॥
ಜೋಗಿಗು ಪಡಿಯೊಂದಾ ಕೊಟ್ಟಿದರೂ ಮಗದೀರಾ
"ಜಾಲುಗುನ್ನಿ ಮಾಡ್ಕಂಡೀ ಕರ್ಕಂಡೀ ಹೋಗಾನೆ ॥ 101 ॥
ಜಾಲುಗುನ್ನಿ ಮಾಡಕೊಂಡೀ ಕರಕೊಂಡೂ ಹೋಗೀದಾ"
"ಹೋದಾ ದಾರಿಯೊಂದಾ ನಮುಗೇಳೇ ತಾನಾ ॥ 102 ॥
ಹೋದಾ ದಾರಿ ನಮಗೇಳೂ" ಲಂದೆ ಹೇಳೀ
ಕುದ್ರಿ ಮೇಲು ಸಂಗ್ತೀ ಕೇಳಿದರೇ ತಾನಾ ॥ 103 ॥
ಕುದ್ರಿ ಮೇಲು ಸಂಗ್ತಿ ಕೇಳಿದರೂ ಲಾಗಿನ್ನು
ಆಗುಡ್ಡಿಲತ್ತಾರೇ ಮಾಗುಡ್ಡಿಲೀಳುದಾರೇ
ಮರಗುಡ್ಡೀ ಮರಕಲಕೂ ನೆಡುದರೆಯೇ ॥ 104 ॥
ಮರಗುಡ್ಡೀ ಮರಕಲಕೂ ನೆಡುದರೆಯೇ ತಾನಾ
ಹಿಂದು ಮುಂಡಟ್ಟು ಮುರಕಂಡೇ ತಾನಾ ॥ 105 ॥

ಹಿಂದು ಮುಂಡಟ್ಟೊ ಮೂರು ಕಂಡಣ್ಣ ತಮ್ಮುದೀರು
ಮರುಗುಡ್ಡೆ ಮರಕ್ಲಕ್ಕೂ ನಡುದರೇ ತಾನಾ || 106 ||
ಆಗುಡ್ಡಿ ಮರಕ್ಲಕ್ಕೂ ನೆಡುದರೆ ಲಣ್ಣತಮುದೀರೂ
ಅಲ್ಲೊಂದು ದೊಡ್ಡ ಹಾಸರಗಲ್ಲಿತ್ತೂ ತಾನಾ || 107 ||
ದೊಡ್ಡ ಹಾಸಿರಗಲ್ಲನ ಮೇಲೆ ಕೂತೇ (ಕಂಡೀ)
ಜೋಗೀ ತಲಿಯೊಂದಾ ನೋಡುತಾನೇ ತಾನಾ || 108 ||
ಜೋಗೀ ತಲಿಯೊಂದಾ ನೋಡುತ್ತಿತ್ತೂ ಸೌಬದ್ರೀ
ಹಿಂದೆ ತಿರುಗಾರೂ ನೋಡೀತೂ ತಾನಾ || 109 ||
ಹಿಂದೆ ತಿರುಗಾರೂ ನೋಡೀತೂ ಲಾಗಿನ್ನು
ಯೇಳು ಜನಲಣ್ಣತಮ್ಮಂದಿರೂ ನೋಡಿತ್ತೂ ತಾನಾ || 110 ||
ಯೇಳು ಜನಲಣತಮುದೀರೂ ನೋಡಿತ್ತೂ ಸೌಬದ್ರೀ
ಜೋಗೀ ಕೂಡಾರೂ ಹೇಳಿತೂ ತಾನಾ || 111 ||
ಜೋಗೀ ಕೂಡಾರೂ ಹೇಳಿತೂ ಲಾಗಿನ್ನೂ
“ಯೇಳು ಪಟು ಹಿಡುಕಂಡೀ ಯೇಳು ಕುದ್ರೀ ಹತ್ತಕಂಡೀ
ಯೇಳು ಜನಲಣತಮ್ಮದಿರೂ ಬಂದಾರೂ ತಾನಾ || 112 ||
ಯೇಳು ಜನಲಣತಮ್ಮದಿರೂ ಜೋಗೀ ಈಗೇ
ನಿನ್ನಾ ಈಗಾರೂ ಇಡುದಿಲವೋ ತಾನಾ || 113 ||
ನಿನ್ನಾ ಈಗಾರೂ ಇಡುದಿಲ್ಲಾ” ಲಂಬೂಕೂ
ದಡಬಡನೆದ್ದೀನಿತ್ತೀದಾ ತಾನಾ || 114 ||
ದಡಬಡನೆದ್ದೀನಿತ್ತೀದಾ ಲಾ ಜೋಗೀ
ವಂದೇ ಹಳ್ಳ ಮಂತ್ರಿಸೀ ವಗುದೀದಾ ತಾನಾ || 115 ||
ವಂದೇ ಹಳ್ಳ ಮಂತ್ರಿಸೀ ವಗುದೀದಾ ಲಾಜೋಗೀ
ಹಾಸುರಗಲ್ಲಾಗೀ ಬೆಳುದೀರೇ ತಾನಾ || 116 ||
ಹಾಸುರಗಲ್ಲಾಗೀ ಬೆಳದೀರಣ ತಮುದೀರೂ
ಯೇಳು ಕುದುರಿನೂ ಯೇಳು ಪಟಾವನೂ
ಯೆಟ್ಟು ಜನವಾರೂ ಹಾಸ್ರುಗಲ್ಲೂ ತಾನಾ || 117 ||

ಯೆಟ್ಟು ಜನವಾರೂ ಹಾಸ್ರಗಲ್ಲಾಗೀ ಬೆಳುದೀರೂ
ಜೋಗೀ ಅದ್ರಾ ಕರುಕಂಡೀ ತನ್ನ ಊರಿಗೆ ನೆಡುದಾನೇ
ತನ್ನ ಊರಿಗೇ ನಡದೀದ ಲಾಗಿನ್ನೂ
ಚಂದದಿಂದವರೂ ಇರುವರೇ ತಾನಾ ॥ 118 ॥
ಚಂದದಿಂದವರೂ ಇರುವರೂ ಲಾಗಿನ್ನೂ
ಹೆರಿಯವ ದಂಡಿಗೇ ಹೋಗುವಂಗೇ ಲಾಗಿನ್ನು
ಹೆರಿಯವ ನಿಂಡೂತೀ ಲಂಬುವಳೂ ತಾನಾ ॥ 119 ॥
ಹೆರಿಯವ ನಿಂಡೂತೀ ಲಂಬುವಳೂ ಲಾಗಿನ್ನೂ
ಮೂರೂ ತಿಂಗಳುದ ಗರಬೀಣೀ ತಾನಾ ॥ 120 ॥
ದಂಡಿಗೋಗುವಾಗೇ ಮೂರು ತಿಂಗ್ಳು ಗರೂಬೀಣೀ
ಆರುಮೂರು ತಿಂಗಳು ಗಳೂದಿತೂ ತಾನಾ ॥ 121 ॥
ಆರುಮೂರು ತಿಂಗಳು ಗಳೂದಿತೂ ಲಾಗಿನ್ನು
ಜನುಸಾದೇ ಗಂಡೂ ಕೋಮಾರಾನಾ ತಾನಾ ॥ 122 ॥
ಜನುಸಾಳೇ ಗಂಡು ಕೋಮರಾಗೇ ಲಾಗಿನ್ನು
ತಿಂಗಳ ಬಾಲಿನೂ ನೋಡಿದುರೇ ತಾನಾ ॥ 123 ॥
ತಿಂಗಳ ಬಾಲಿನೂ ನೋಡಿದುರೇ ಲಾ ಹುಡುಗ
ಆರೂ ತಿಂಗಳು ಹುಡ್ಗನಲ್ಲೇ ತಾನಾ ॥ 124 ॥
ಆರೂ ತಿಂಗಳುನಾಂಗೇ ಕಾಣುತಾನೇ ಲಾಗಿನ್ನೂ
ಹಚ್ಚೀತೇ ಲಾವಾ ಕಾಣುತಾನೇ ತಾನಾ ॥ 125 ॥
ಹಚ್ಚೀತೇ ಲಾವಾ ಕಾಣುತಾನೇ ಲಾಗಿನ್ನೂ
ಆರು ತಿಂಗಳ ಹುಡುಗನ ನೋಡಿದರೇ ತಾನಾ ॥ 126 ॥
ಆರು ತಿಂಗಳ ಹುಡುಗನ ನೋಡಿದರೇ ಲಾಗಿನ್ನೂ
ಹನ್ನೆರಡುವರುಶಿನಾ ಹುಡುಗನೇ ತಾನಾ ॥ 127 ॥
ಹನ್ನೆರಡು ವರುಶೀನಾ ಹುಡಗನಾ ಕಂಡಂತೇ
ಹೆಚ್ಚಿತೇ ಲಾವಾ ಬಂದಿದನೇ ತಾನಾ ॥ 128 ॥

ಹೆಚ್ಚಿತೇ ಲಾವಾ ಬಂದೀದಾವೀಗಿನ್ನು
ತಾಯಿ ಕೂಡಾವಾ ಹೇಳುತಾನೇ ತಾನಾ ‖ 129 ‖
ತಾಯಿ ಕೂಡೂವಾ ಹೇಳುತಾನೇ ಯೇನಂದೀ?
"ಯೆಲ್ಲಾ ಮಕ್ಕಳು ಇಸಗೊಲ್ಕೇ ಹೋಗುತಾರೇ ‖ 130 ‖
ಅವ್ರ ಸಂತಿಗೆ ನಾನೂ ಹೋಗುತ್ತೇನೇ ತಾನಾ
ಪಾಟೇ ಪುಸ್ತಕಾ ತರ್ಸಿ ಕೊಡೇ" ತಾನಾ ‖ 131 ‖
"ಹಾಲರೂ ಮುರಿಲಿಲ್ಲಾ ಮಗುನೇ ನೆತ್ತಿ ಸುಳಿ ಬಲಿಲಿಲ್ಲಾ ‖ 132 ‖
ಅಂಗೈಯನೂ ಜಂಗೂ ಬಲಿಲಿಲ್ವೊ ತಾನಾ
ಅಂಗೈಯಿನೂ ಜಂಗೂ ಬಲಿಲಿಲ್ಲಾ ಮಗನೇ ಕೇಳೋ
ಮತ್ತೊಂದೂ ವರುಷೆ ಗಳಿಯಲೋ ತಾನಾ ‖ 133 ‖
ಮತ್ತೊಂದ ವರುಶೂ ಕಳಿಯಲಿ ಮಗನೇ ಕೇಳೋ
ಇಸಕೂಲಿಗು ನೀನೂ ಹೋಗಲಿಕ್ಕೂ" ತಾನಾ ‖ 134 ‖
ಅಟ್ಟೊಂದಾ ಮಾತಾ ಕೇಳೀದಾಲಾ ಹುಡುಗ
ಬಿದ್ದಾ ಮಾರುಗುನಾ ಹಿಡುದಾನೇ ತಾನಾ ‖ 135 ‖
ಬಿದ್ದಾ ಮಾರುಗುನಾ ಹಿಡುದಾನಾ ಹುಡುಗಾ
ಚಂಡಾಡೂಕಾರೂ ಹೋಗುತಾನೇ ತಾನಾ ‖ 136 ‖
"ಯೆಲ್ಲಾ ಮಕ್ಕಳು ಚಂಡಾಡೂಕೆ ಹೋಗುತ್ತಾರೆ
ನಾನು ಅವ್ರ ಸಂಗಾತೀಗೇ ಹೋಗುತ್ತೇನೆ ತಾನಾ ‖ 137 ‖
ತಾನೂ ಅವ್ರ ಸಂಗಾತೀಗೇ ಹೋಗುತ್ತೇನೆ" ಲಂದೇಳೀ
ಯೇನನ್ ಹೇಳಿದ್ರೂ ಕೇಳೋದಿಲ್ಲಾ ತಾನಾ ‖ 138 ‖
ಯೇನನ್ ಹೇಳಿದ್ರೂ ಕೇಳೋದಿಲ್ಲಾ ತಾಯಿನೂ
ಅವ್ರಾ ಸಂಗತಿಗೂ ನೆಡುದನೆಯೇ ಲಾ ಹುಡುಗಾ
ಆಡಾಡೀದಾಟಾ ಅವನಿಗೇ ತಾನಾ ‖ 139 ‖
ಆಡಾಡೀದಾಟಾ ಅವನೇ ಗೆಲ್ಲೂವಾಗೇ
"ರಂಡಿ ಪೋರಂದೇ"ಳೀ ಬಯ್ತಾರೇ ತಾನಾ ‖ 140 ‖

"ರಂಡೀ ಪೋರಂ"ದೆ ಹೇಳೀ ಬಯ್ತಾರೇ ಅವ್ನೀಗೂ
ಅವ್ನಿಗೂ ಬಾಳ ಸಿಟ್ಟು ಬರ್ತದೇ ತಾನಾ ‖ 141 ‖
ಅವ್ನಿಗೂ ಬಾಳಾ ಸಿಟ್ಟೂ ಬರ್ತದೆ ಲಾಗಿನ್ನೂ
ಮನೆಯಲ್ಲಿ ಬಂದು ಹೇಳ್ವ ಅಂದ್ರೂ ಹಂಬಲಿಲ್ಲಾ ತಾನಾ ‖ 142 ‖
ಮನೆಯಲ್ಲಿ ಬಂದು ಹೇಳೂರೂ ಹಂಬಲ ಇಲ್ಲಾಲೇ
ಮರುದಿನ ಚೆಂಡಾಡಕೂ ನಡಿದನೆಯೇ ತಾನಾ ‖ 143 ‖
ಮರುದಿನ ಚೆಂಡಾಡಕೂ ನಡುದಾನೇ ಲಾಗಿನ್ನೂ
ಹೊಡಹೊಡಿದ ಚಂಡೂ ಗೆಲುತಾನೇ ತಾನಾ ‖ 144 ‖
ಹೊಡಹೊಡಿದ ಚಂಡಾ ಗೆಲುತಾನೇ ಲಾ ಹುಡುಗಾ
ಮತ್ತೆ ಲಾಂಗ್ ಹೇಳೇ ಬಯ್ತಾರೇ ತಾನಾ ‖ 145 ‖
"ಅಪ್ಪಿಲ್ಲದುಟ್ಟಿದಾ ರಂಡೇ ಪೋರಾನಲ್ಲೋ
ನಮಗೊಂದವಾ ಲಾಟಾ ಕೊಡುದಿಲ್ಲಾ ತಾನಾ ‖ 146 ‖
ನಮಗೊಂದವಾ ಲಾಟಾ ಕೊಡು"ಲಂದೇಳಿ
ಹಾಂಗೇ ಹೇಳಾರೂ ಬಯ್ವರೂ ಲವ್ನೀಗೇ ತಾನಾ ‖ 147 ‖
ಬಾಳ ಸಿಟ್ಟಾರೂ ಬಂದಿತೂ ತಾನಾ
ಮನ್ಯಲ್ ಹೋಗಿ ಹೇಳೂಕೂ ನಂಬಲು ಲಿಲ್ಲಂದೇ ‖ 148 ‖
ಪಂಜೀಶರುಗಿಲೀ ವಂದೂಗೆಂಟೂ ತಾನಾ
ಪಂಜೀ ಶರುಗೀಲವಂದು ಗೆಂಟಾಲೊಡಕಂಡೇ ‖ 149 ‖
ತನ್ನು ಮನಿಗೇ ಬಂದಿದನೇ ತಾನಾ
ತನ್ನ ಮನಿಗಾರೂ ಬಂದಿದಾ ಲಾಗಿನ್ನೂ ‖ 150 ‖
ತಾಯಿ ಲಾಲಾರೂ ಕೊಟ್ಟರೂ ಲಾಗಿನ್ನೂ
ಬಚ್ಚಲರುಮನುಗೇ ನೆಡದದಿಯೇ ತಾನಾ ‖ 151 ‖
ಬಚ್ಚಲರುಮನುಗೇ ನೆಡದಾದೇ ಲಾಗಿನ್ನೂ
ಮೀಸಿ ಅವನಾರೂ ಬಿಟ್ಟಿದೇ ತಾನಾ ‖ 152 ‖
ಮೀಸಿ ಅವನಾರೂ ಬಿಟ್ಟಿತೇ ಲಾಗಿನ್ನೂ
ಅವ್ನ ಪಂಜ್ಯಾರೂ ತೊಳದದಿಯೇ ತಾನಾ
ಅವ್ನ ಪಂಜ್ಯಾರೂ ತೊಳೆವಂದೇ ಲಾಗಿನ್ನೂ ‖ 153 ‖

‘ಇದುವೆಂತಾ ಗೆಂಟೋ ಮಗು’ ನಂತೂ ತಾನಾ
‘ಇದುವೆಂತಾ ಗೆಂಟೋ ಮಗ’ನಂಬುತಾ ಲಾಗಿನ್ನೂ
ಅವಲಾಗಾರೂ ಹೇಳುತಾನೇ ತಾನಾ ॥ 154 ॥
“ಚಂಡಾಡೂಲೂ ಹೋಗುತ್ತೀದ್ದೇ ನನ್ನಾ ತಾಯೀ
ಹೂಡೂಡಿದ ಚೆಂಡಾ ಗೆಲುತೀದೇ ತಾನಾ ॥ 155 ॥
ಹೂಡೂಡಿದ ಚೆಂಡಾ ಗೆಲುತೀದೇ ತಾನಾ
ಹೂಡೂಡಿದ ಚೆಂಡಾ ಗೆಲುತೀದೇ ನನ್ನ ತಾಯೇ ॥ 156 ॥
ರಂಡೇ ಪೋರಂದೇ ಬಯ್ತಾರೆಯೇ ತಾನಾ
ರಂಡೇ ಪೋರಂದೇ ಬಯ್ತಿರೋ ನನ್ನ ತಾಯೀ ॥ 157 ॥
ನಿನಕೂಡ ಹೇಳ್ಬೇಕಂದ್ರು ಮರತೀತೂ ತಾನಾ
ನಿನಕೂಡ ಹೇಳ್ಬೇಕಂದ್ರು ಮರತೀತೂ ಲಂದೇಳೀ ॥ 158 ॥
ಪಂಜೇಶೆರುಗೀಲಿ ವಂದೂ ಗಂಟೂ ತಾನಾ
ಪಂಜೀ ಶೆರುಗೀಲೀ ವಂದು ಗೆಂಟಾಲೊಡುಕಂಡೀ ॥ 159 ॥
ಹಂಬಲಿರುವುದಿಲ್ಲ ಅಂದೇ ಬಂದಿದನೇ ತಾನಾ
ಹಂಬಲಿರುವುದಿಲ್ಲ ಅಂದೇ ಬಂದಿದೇ ನನ್ನ ತಾಯೇ ॥ 160 ॥
ನಮಗೆ ಅಪ್ಪವ್ನ್ಯೇ ಇಲುವೇನೇ ತಾನಾ?
ನಮಗೆ ಅಪ್ಪವ್ನ್ಯೇ ಇಲ್ಲಂದೀ ನನ್ನ ತಾಯೇ ॥ 161 ॥
ನನ್ನ ಕೂಡಾರೂ ಹೇಳಬೇಕೇ” ತಾನಾ ॥ 162 ॥
“ನಿನಗೆ ಅಪ್ಪವ್ನೇ ಆರು ಮಂದಿ ಚಿಕ್ಕಪ್ಪದೀರವ್ರೇ
ಯೇಳೂ ಮಂದ್ಯಾರೂ ಅವ್ರ್ಯಲೋ ತಾನಾ ॥ 163 ॥
ಯೇಳೂ ಮಂದ್ಯಾರೂ ಅವ್ರ್ಯಲ್ಲೊ ಮಗನೇ ಕೇಳೋ
ಚಿಕ್ಕೀ ಕರುವಾಕೂ ಹೋಗಿದುರೋ ತಾನಾ ॥ 164 ॥
ಚಿಕ್ಕೀ ಕರುವಾಕೂ ಹೋಗಿ ಮಗನೇ ಕೇಳೋ
ಕರುವಾಕೆ ಹೋದೋರೂ ಬರಲಿಲ್ಲವೋ ತಾನಾ ॥ 165 ॥
ಕರುವಕೆ ಹೋದಾರೂ ಬರುಲಿಲ್ಲ” ಲಂದೇಳಿ
ಮೊದಲಾದ ಸಂಗೂತೀ ಹೇಳುತಾದೇ ತಾನಾ ॥ 166 ॥

ಮೊದಲಾದ ಸಂಗ್ತೀ ಹೇಳುವಾದೇ ಲಾಗಿನ್ನು
ತಾಯಿ ಕೂಡುವಾ ಹೇಳುತಾನೇ ತಾನಾ ‖ 167 ‖
ತಾಯಿ ಕೂಡುವಾ ಹೇಳುತಾನೇ ಯೇನಂದೀ?
"ನನಗೆ ರೊಟ್ಯೊಂದು ಬುತ್ತಿನೂ ಕಟ್ಟಿಕೊಡು ‖ 168 ‖
ಅಪ್ಪಚಿಕ್ಕಪ್ಪದೀರಾ ಕರುಕಂಡೀ ತಾನಾ
ಅಪ್ಪಚಿಕ್ಕಪ್ಪದೀರಾ ಕರುಕಂಡೀ ಬರುತ್ತೇನೇ ‖ 169 ‖
ನನಗೊಂದಪ್ಪಣಿಯಾ ಕೊಡಬೇಕೇ" ತಾನಾ
"ಹಾಲರು ಮುರಿಲಿಲ್ಲಾ ಮಗನೇ ನೆತ್ತಿಸುಳೀ ಬಲಿಲಿಲ್ಲಾ ‖ 170 ‖
ಯಾವುರೀಗವ್ರೂ ನಡುದರೆಯೋ ತಾನಾ
ಯಾವುರೀಗವ್ರೂ ನಡುದರೆಯೋ ಮಗುವೇ ಕೇಳು
ಯೆಲ್ಲಂದೇ ನೀನೂ ಹೋಗುವಿಯೋ ತಾನಾ ‖ 171 ‖
ಯೆಲ್ಲಂದೇ ನೀನೂ ಹೋಗುವಿಯೋ? ಮಗುವೇ ಕೇಳು
ಕರುವಕ್ಕೋದೋರೂ ಬರಲಿಲ್ಲವೋ ತಾನಾ ‖ 172 ‖
ಕರುವಕ್ಕೋದೋರೂ ಬರಲಿಲ್ಲ ಮಗನೇ ಕೇಳು
ನಿನ್ನ ಕರವಾಕ್ಯಾರೂ ಹೋಗುತರೆಯೋ? ತಾನಾ ‖ 173 ‖
ನಿನ್ನ ಕರುಕ್ಯಾರು ಹೋಗುತರೇ ಮಗುವೇ ಕೇಳು
ಜ್ಯೋತೀ ಕಸುವೋರೂ ಮೊದಲಿಲ್ಲವೋ ತಾನಾ ‖ 174 ‖
ಜ್ಯೋತೀ ಕಸುವೋರು ಮೊದ್ಲಿಲ್ಲ ಮಗುನೆ ಕೇಳು
ಹೋದರೂಲವ್ರೂ ಬರುವಾರೋ" ತಾನಾ ‖ 175 ‖
ಯೇನೆನೇಳೀದ್ರೂ ಕೇಳೂಲಿಲ್ಲಾ ಲಾ ಹುಡುಗಾ
ಮುಚ್ಚು ಮಾಡಾಕಂಡೇ ವರುಗೀದಾ ತಾನಾ ‖ 176 ‖
ಮುಚ್ಚು ಮಾಡಾಕಂಡೀ ವರುಗೀದಾ ಲಾಗಿನ್ನು
ಊಟಕ್ಕೇಳಿಸಿರೂ ಯೆಳೂದಿಲ್ಲಾ ತಾನಾ ‖ 177 ‖
ಊಟಕ್ಕೇಳಿಸಿರೂ ಯೆಳೂದಿಲ್ಲಾ ಲಾಗಿನ್ನು
"ಹೋಗುದಾರೂ ನೀನೂ ಹೊಗುಲಕ್ಕೋ ತಾನಾ ‖ 178 ‖

ಹೋಗುದಾರೂ ನೀನೂ ಹೊಗುಲಕ್ಕೋ ಮಗನೆ ಕೇಳೋ
ಯೆದ್ದೀ ಊಟಾರೂ ಮಾಡುಕಳ್ಳೋ ತಾನಾ ‖ 179 ‖
ಯೆದ್ದೀ ಊಟ ಮಾಡುಕಳ್ಳೊ" ಲಂಬೂಕೂ
ಯೆದ್ದೀ ದೇವ್ರ ಪೂಜಿಯಾ ಮಾಡಿದನೋ ತಾನಾ ‖ 180 ‖
ಯೆದ್ದೀ ದೇವ್ರ ಪೂಜೀ ಮಾಡೀದಾಲಾಗಿನ್ನು
ಉಂಡೆ ಕೈಬಾಯಾ ತೊಳದಿವನೇ ತಾನಾ ‖ 181 ‖
ಉಂಡೇ ಕೈಬಾಯಾ ತೊಳುದೀದಾ ಲಾಗಿನೂ
ರೊಟ್ಟಿ ಬುತ್ತ್ಯೊಂದಾ ಕಟುಕೊಟ್ಟು ತಾನಾ ‖ 182 ‖
ರೊಟ್ಟಿ ಬುತ್ತ್ಯೊಂದಾ ಕಟ್ಟಿಂದೂ ಕೊಟ್ಟಿತ್ತು
ಅದ್ರ ತಕ್ಕಂಡೇ ಹೈಟನೆಯೇ ತಾನಾ ‖ 183 ‖
ಅದ್ರ ತಕ್ಕಂಡೇ ಹೈಟೇದಾ ಲಾ ಹುಡುಗಾ
ಬಿದ್ದ ಮಾರೂಗಾ ಹಿಡದೀದಾ ತಾನಾ ‖ 184 ‖
ಬಿದ್ದಾ ಮಾರೂಗಾ ಹಿಡುದೀದಾ ಲಾಗಿನ್ನು
ಜೋಗೀಲೂರೀಗೆ ನೆಡದನೆಯೆ ತಾನಾ ‖ 185 ‖
ಜೋಗೀಲೂರೀಗೆ ನೆಡದಾನೆ ಲಾಗಿನ್ನು
ಅಲ್ಲೊಂದಜ್ಜವೀ ಮನಿಯಿತ್ತು ತಾನಾ ‖ 186 ‖
ಅಲ್ಲೊಂದಜ್ಜವೀ ಮನಿಯಿತ್ತು ಲಾಗಿನ್ನು
ಅಜ್ಜವೀ ಮನೀಗೂ ನೆಡುದಾನೇ ತಾನಾ ‖ 187 ‖
ಅಜ್ಜವೀ ಮನೀಗೂ ನೆಡುದಾನೇ ಲಾಗಿನ್ನು
"ನನಗೊಂದು ತಾವಾ ಕೊಡಬೇಕೇ ತಾನಾ ‖ 188 ‖
"ನನಗೊಂದು ತಾವಾ ಕೊಡಬೇಕೂ" ಲಂಬೂಕೂ
ಅಜ್ಜೀವ್ವೀಲಾಗೇ ಹೇಳುತಾದೇ ತಾನಾ ‖ 189 ‖
ಅಜ್ಜೀವ್ವೀಲಾಗೇ ಹೇಳುತಾದೇ ಲಾಗಿನ್ನು
"ಯಾವೂರಂದ ನೀನೂ ಬಂದ್ಯಲೋ? ತಾನಾ ‖ 190 ‖
ಯಾವೂರಂದೀದ್ದೀ ಬಂದಿದ್ದಿ? ಮಗುನೇ ಕೇಳು
ದೇವುತಾಪಿಂಡುನಾಂಗೇ ಕಾಣತ್ಯಲ್ಲೋ ತಾನಾ ‖ 191 ‖

ಹಾಳುಬಿದ್ದಾ ಊರೂ ಇದ್ದವಲ್ಲೋ ತಾನಾ
ಹಾಳುಬಿದ್ದಾ ಊರೂ ಇದುವಲ್ಲೊ ಮಗುನೇ ಕೇಳು ‖ 192 ‖
ನಮ್ಮೂರಲ್ವೊಂದೂ ಜೋಗಿಯವ್ನೇ ತಾನಾ
ನಮ್ಮೂರಗ್ವೊಂದೂ ಜೋಗಿಯವ್ನೇ ಮಗುವೇ ಕೇಳು ‖ 193 ‖
ಯೆಲ್ಲೀದ್ದೋ ವಂದೂ ಹೆಣ್ಣು ತಂದನೆಯೋ ತಾನಾ
ಯಾವೂರಂದು ವಂದು ಹೆಣ್ಣು ತಂದಿದ ಮಗುನೇ ಕೇಳೂ ‖ 194 ‖
ಅದಕೊಂದ್ ಹೂಂಗ್ನದಂಡೀ ಕೊಡುತನ್ಯೋ ತಾನಾ
ಅದಕೊಂದ್ ಹೂಂಗ್ನದಂಡೀ ಕೊಟುಕಂಡೇ ಮಗುವೇ ಕೇಳೊ ‖ 195 ‖
ವಂದು ಶಿದ್ದೇ ಅಕ್ಕೀ ತಂದುಕಂಡೇ ತಾನಾ
ವಂದು ಶಿದ್ದೇ ಅಕ್ಕೀ ಮಗುನೇ ಕೇಳೆಲಾ ‖ 196 ‖
ನನ್ನಾ ಸಂಸಾರಾ ಕಳಿತದೆಯೊ ತಾನಾ
“ನನ್ನಾ ಸಂಸಾರಾ ಕಳಿತಾದೇ” ಲಂದೇಳಿ ‖ 197 ‖
ಅಟ್ಟಸಂಗ್ಯೊಂದಾ ಹೇಳತದೆಯೇ ತಾನಾ ‖ 198 ‖
ಅಟ್ಟಸಂಗ್ಯೊಂದಾ ಕೇಳೀದಾ ಲಾ ಹುಡುಗಾ
ರೊಟ್ಟೀ ಮತ್ತೊಂದಾ ಬಿಚ್ಚಿದನೇ ತಾನಾ ‖ 199 ‖
ರೊಟ್ಟೀ ಮತ್ತೊಂದಾ ಬಿಚ್ಚೀನೆ ಲಾಗಿನ್ನೂ
ಆದರಂದ್‌ವಂದು ಚೂರಾ ತಿಂದೀದಾ ತಾನಾ ‖ 200 ‖
ಆದರಂದ್‌ವಂದು ಚೂರಾ ತಿಂದೀದಾ ಲಾಗಿನ್ನೂ
ಅಜ್ಜವ್ವೀಗಾರೂ ಕೊಟ್ಟಿದನೇ ತಾನಾ ‖ 201 ‖
ಅಜ್ಜವ್ವೀಗಾರೂ ರೊಟ್ಟಿ ಕೊಟ್ಟೀದ ಲಾಗಿನ್ನು
“ಹೊಟ್ಟೇ ತುಂಬ ನೀನೂ ತಿಂದುಕಣೇ ತಾನಾ ‖ 202 ‖
ಹೊಟ್ಟೇ ತುಂಬಾರೂ ತಿಂದಕಣೇ ಲಜ್ಜವ್ವಾ
ನಾನೂ ನೀನಾರೂ ಮನಗೂವಾ ತಾನಾ ‖ 203 ‖
ನಾನೂ ನೀನಾರೂ ಮನಗೂವಾ ಲಜ್ಜವ್ವಾ
ಬೆಳಗಾಗೇಲೆದ್ದೀ ನಿನ್ನವಾ ಕೆಲಸಾ ಮಾಡೂ ‖ 204 ‖

ನಾನೂಗೂ ಕೊಯ್ದೀ ಕಟತೀನೇ" ತಾನಾ
"ನೀನೂ ಕಟ್ಟೀದ್ರೂ ಚೆಂದವಾಲಾಗವೂ ॥ 205 ॥
ನಾಗ್ಲೂವಲಾರೂ ಕಟತೇನೇ" ತಾನಾ
"ಚೆಂದಾಲಾಗದೀರೇ ಇಲ್ಲವೆ ಲಜ್ಜವ್ವಾ ॥ 206 ॥
ನಾನೂವಲಾರೂ ಕಟತೇನೇ ತಾನಾ ॥ 207 ॥
ನಾನೂವಲಾರೂ ಕಟತೇನೇ" ಲಂದೇಳೀ
ಹೂಂಗಾ ಕೊಯ್ದಾರೂ ಕಟತಾನೆ ತಾನಾ ॥ 208 ॥
ಹೂಂಗಾ ಕೊಯ್ದಿ ಕಟ್ಟೀದಾ ಲಾಗಿನ್ನು
ಅಜ್ಜವ್ವಿಲದನಾರೂ ತಕ್ಕಂಡೇ ನಡೆದಲೇ ತಾನಾ ॥ 209 ॥
ಹೂಂಗ್ನದಂಡ್ಯೊಂದು ಕೊಟ್ಟೀತೂ ತಾನಾ
ಹೂಂಗ್ನದಂಡ್ಯೊಂದು ಹಿಡದೀತೂ ತಾನಾ ॥ 210 ॥
"ಇಂದೀ ಕಟ್ಟೀದ ಹೂಂಗ್ನ ದಂಡೇ ಚಂದವೇ ತಾನಾ
ಇಂದೀ ಕಟ್ಟೀದ್ದೂ ಚಂದವೇ ಲಜ್ಜವ್ವಾ ॥ 211 ॥
ಇಂದೀನ ಹೂಂಗ್ನ ದಂಡೇ ಚಂದವೇ ತಾನಾ
ನಿಮ್ಮನೀಗ್ಯಾರೂ ಬಂದರ್ಯೆ?" ತಾನಾ ॥ 212 ॥
"ನನ್ನ ಮೊಮ್ಮಗಾ ಬಂದೀದಾ ಲಾಗಿನ್ನು
ಅವನೆ ಕೊಯ್ದಾರೂ ಕಟ್ಟೀದಾ ತಾನಾ ॥ 213 ॥
ಅವನೆ ಕೊಯ್ದಾರೂ ಕಟ್ಟೀದಾ" ಲಂದೇಳೀ
ಅಡುಗೇ ಸಾಮಾನಾ ಕೊಟ್ಟೀತೇ ತಾನಾ ॥ 214 ॥
ಅದ್ರ ತಂದಾರೂ ಅಡುಗೇಯ ಮಾಡುಂಡೀ
ಮರುದಿನೇ ಹೂಂಗಾ ಕೊಯ್ದದಾಲಾಗಿನ್ನು ॥ 215 ॥
ಮರುದಿನೇ ಲುಂಗಾ ಕೊಯ್ದಿದಾಲಾಗಿನ್ನು
ಆದಾ ಸಂಗ್ತೀಯಟ್ಟೂ ಬರದೀದಾ ತಾನಾ ॥ 216 ॥
ಆದಾ ಸಂಗ್ತ್ಯಾರು ಬರದೀದ ಲಾಗಿನ್ನು
ಹೂಂಗಿನ ದಂಡೀಯೊಳುಗೆ ಹಾಕಿದನೇ ತಾನಾ ॥ 217 ॥

ಹೂಂಗಿನ ದಂಡೀಯೊಳುಗೆ ಹಾಕಿದ ಲಾಗಿನ್ನು
ಅಜ್ಜವೀ ಕೂಡ ಹೇಳುತಾನೆ ತಾನಾ || 218 ||
"ಅಜ್ಜವೀ ಹೂಂಗ್ನ ದಂಡೇಯ ಕೊಟ್ಟಿನ್ನು ಸುಮ್ಮೆಬರುಬೇಡಾ
ಕುಡುಗೀ ಅದ್ರೆ ಕೂಡೇ ಮುಡಿಹೇಳೇ ತಾನಾ || 219 ||
ಕುಡುಗೀ ಅದ್ರೆ ಕೂಡೇ ಮುಡಿಹೇಳೇ ಅಜ್ಜವೀ"
ಹೂಂಗ್ನ ದಂಡ್ಯೊಂದೂ ಕೊಟ್ಟೇತೂ ಲಾಗಿನ್ನು || 220 ||
"ನನ್ನ ಮಾಮ್ಮಗ ನಿನ ಕೂಡೆ ಕುಡ್ಗೆ ಮುಡೀ ಲಂದಾನೆ
ಹುಳವೇ ಹುಪ್ಪುಡಿ ಇರುತಾದೇ" ತಾನಾ || 221 ||
ಹೂಂಗ್ನ ದಂಡ್ಯೊಂದೂ ಕೊಟ್ಟೇತೂ ಲಾಗಿನ್ನು
"ನನ್ನ ಮೊಮ್ಮಗ ನಿನ ಕೂಡೇ ಕುಡ್ಗ್ ಮುಡೀಲೆಂದಾ ತಾನಾ || 222 ||
"ಹುಳವೇ ಹಪ್ಪುಡೀ ಇರತಾದೇ" ತಾನಾ
ಹೂಂಗ್ನ ದಂಡ್ಯೊಂದೂ ಕುಡಗೇತೂ ತಾನಾ || 223 ||
ಹೂಂಗ್ನ ದಂಡ್ಯೊಂದೂ ಕುಡುಗೇತೂ ಲಾಗಿನ್ನು
ಬರುದಾ ಚೀಟೆಯಾ ಲೆಕ್ಕಿತೇ ತಾನಾ || 224 ||
ಬರುದಾ ಚೀಟ್ಯೊಂದಾ ಹೆಕ್ಕಿನ್ನೂ ವೋದಾದೇ
ಮುತ್ತಿನ ಕಣ್ಣೀರಾ ಬಿಡುತಾದೇ ತಾನಾ || 225 ||
ಮುತ್ತಿನ ಕಣ್ಣೀರೇ ಬಿಡುತಾದೇ ಲಾಗಿನ್ನು
'ನಾ ಬರೂವರಿಗೇ ಮೂರು ತಿಂಗ್ಳುಗರೂಬೀಣಿ || 226 ||
ನನು ಮಗನಲ್ಲದೆ ಪರುರಲ್ಲಾ ತಾನಾ
ನನು ಮಗನಲ್ಲದೆ ಪರುರಲ್ಲಾ' ಲಂದೇಳಿ || 227 ||
ಹೊರುವಟ್ಟಾಲದುಕೇ ಕೊಟ್ಟದಿಯೋ ತಾನಾ
ಹೊರುವಟ್ಟಾಲದುಕೇ ಕೊಟ್ಟದೇ ಲಾಗಿನ್ನು || 228 ||
"ಲಡುಗಿ ಮಾಡುಕಂಡೇ ಊಞ ನೀನು ತಾನಾ
ಲಡುಗಿ ಮಾಡುಕಂಡೇ ಊಞ ನೀನು" ಅಂಬೂಕೂ || 229 ||
ಅಜ್ಜವಿ ಹೊತ್ಕಂಡೆ ಬಂದೇ ತಾನಾ
ಅಜ್ಜವಿ ಹೊತ್ಕಂಡೆ ಬಂದೆ ಸೂಲೀಗಿನೂ || 230 ||

ಅಡುಗಿ ಮಾಡುಕಂಡೇ ಉಂಡಿದುರೇ ತಾನಾ
ಅಡುಗಿ ಮಾಡುಕಂಡೇ ಉಂಡೀರೊ ಲಾಗಿನ್ನು ॥ 231 ॥
ಮರುದಿನ ಹೂಂಗಾರೂ ಕೊಯ್ದನೆಯ ತಾನಾ
ಮರುದಿನ ಹೂಂಗಾರೂ ಕೊಯ್ದನೆ ಲಾಗಿನ್ನು ॥ 232 ॥
"ಹೂಂಗ್ನ ದಂಡಿಯೊಂದೂ ಕೊಟ್ಟಿನ್ನು ಸುಮ್ಮ ಬರೂಬೇಡಾ
ನಾನೊಂದು ಮಾತೇ ಹೇಳುತ್ತೇನೆ ತಾನಾ ॥ 233 ॥
ನಾನೊಂದು ಮಾತೇ ಹೇಳುತ್ತೇನೆ ಅಜ್ಜವ್ವಾ
ಜೋಗೀ ಉಂಡುತಿಂದೇ ಊರವಲಿನ ಹೋಗವಾರೂ
ಅದ್ರ ಕೂಡೆ ನಾನೂ ಬರುಹೇಳು ತಾನಾ ॥ 234 ॥
ಹೊಂಗ್ನದ ದಂಡ್ಯೊಂದಾ ಕೊಟ್ಟಿನ್ನು ಬರುವಾಗೂ
"ನನ್ನ ಮಗಾನಿನುಕ್ಕೆಲೀ ಬರುವಾಕೆ ತಾನಾ ॥ 235 ॥
ನನ್ನ ಮಗಾನಿನುಕ್ಕೆಲೀ ಬರುವಾಕೆ ಹೇಳಾನೇ"
ಜೋಗೀ ಉಂಡು ತಿಂದೀ ಊರುಮೆನೆ ಹೋಗೂಕೂ ॥ 236 ॥
ಮಗನಾ ಬುಡುವಾಗೇ ಬರುತಾದೆ ತಾನಾ
ಚಿಕ್ಕಿ ಬರುಬರುವಾ ಆಟದೂರೇ ನೋಡಾನೇ ॥ 237 ॥
ಮುಚ್ಚಿ ಮುಡಾಕೀ ವರುಗಾನೇ ತಾನಾ
ಮುಚ್ಚೀ ಮೂಡಾಕಂಡೇ ವರುಗಾನೇ ಲೀಗಿನ್ನೂ ॥ 238 ॥
ತಲ್ಯ ಬುಡುದಾಲೇ ಕೂತೇನ್ನೂ ತಾನಾ
ತಲ್ಯ ಬುಡುದಾಲೇ ಕೂತೇನ್ನೂ ಲಾಗಿನ್ನು ॥ 239 ॥
ಮೋರೇ ಶರೂಗಾ ತಗುದಾದೇ ತಾನಾ
ಮೋರೇ ಶರುಗಾ ತಗುದಾದೇ ಲಾಗಿನ್ನೂ ॥ 240 ॥
ಚಿಕ್ಕಿ ಕಂಡ ಮಗುನೇ ತೀಡುತಾನೇ ತಾನಾ
ಮಗ್ನ ಕಂಡೇ ಚಿಕ್ಕೀ ತೀಡುತಾದೇ ತಾನಾ
ಮಗ್ನ ಕಂಡೇ ಚಿಕ್ಕೀ ತೀಡುತಾದೇ ಲಾಗಿನ್ನು ॥ 241 ॥
ಯೆದ್ದಿ ಅವನಾರೂ ಕೂತಿದನೇ ತಾನಾ
ಯೆದ್ದಿ ಅವನಾರೂ ಕೂತೀದಾ ಲಾಗಿನ್ನೂ ॥ 242 ॥

“ನಾನೊಂದು ಮಾತಾ ಹೇಳುತೀದೇ ತಾನಾ
ನಾನೊಂದು ಮಾತಾ ಹೇಳತೇನೇ ಚಿಕ್ಕಿ ಕೇಳೇ ॥ 243 ॥
ನಾನೇಳುದಂತೇ ಕೇಳುಬೇಕೇ ತಾನಾ
ನಾನೇಳುದಂತೇ ಕೇಳಬೇಕೂ ಚಿಕ್ಕೀ ಕೇಳೇ ॥ 244 ॥
ಹೊಡೆದರೆ ವಂದು ಪೆಟ್ಟಾ ತಿನಬೇಕೇ ತಾನಾ
ಹೊಡೆದರೆ ವಂದು ಪೆಟ್ಟಾ ತಿನಿಬೇಕು ಚಿಕ್ಕೀ ಕೇಳೇ ॥ 245 ॥
ನಾನೇಳೂದಾವ್ರೇ ಕೇಳಬೇಕೂ ತಾನಾ
‘ನೀನು ಉಂಡು ತಿಂದೇ ಊರ ಮೇನೆ ಹೋಗುತೇ ॥ 246 ॥
ನಿನಗೇನಾರೂ ಆದ್ರೇ ಹೆಂಗೆ ತಿಳಿಬೇಕು? ತಾನಾ
ನಿನಗೇನಾರೂ ಆದ್ರೆ ನಂಗ್ಯಾಂಗ್ ತಿಳಿಬೇಕು?’ ॥ 247 ॥
ಅಂದೇಳೀ ನೀನೂ ಹೇಳುಬೇಕೂ” ತಾನಾ
ಅಟ್ಟೊಂದು ಮಾತೂ ಕೇಳಿತೂ ಲಾಗಿನ್ನೂ ॥ 248 ॥
ಹಿಂದೆ ತಿರಗಾರೂ ನಡೆದದೆಯೇ ತಾನಾ
ಹಿಂದೆ ತಿರಗಾರೂ ನಡೆದೀದೇ ಲಾಗಿನ್ನೂ ॥ 249 ॥
ಊರ ಮೆನೆ ಹೋದ ಜೋಗಿ ಬಂದಿದಾ ತಾನಾ
ಊರ ಮೆನೆ ಹೋದ ಜೋಗಿ ಬಂದಿದಾ ಲಾಗಿನ್ನೂ ॥ 250 ॥
ಉಂಡ ತಿಂದಾರೂ ಮನಗಿದರೂ ತಾನಾ
ಉಂಡ ತಿಂದಾರೂ ಮನಗೀರೂ ಲಾಗಿನ್ನು ॥ 251 ॥
ಆಗೊಂದ ಮಾತಾ ಹೇಳುತೇನೇ ತಾನಾ
“ಆ ಊರಾಗೀದ್ದೀ ಈವೂರಾಗೆ ತಂದೀದೇ ॥ 252 ॥
ಹೋದಲ್ಲಿ ಯೇನಾದ್ರೂ ಆಗಿದರೇ ತಾನಾ
ಬಂದಲ್ಲಿ ಯೇನಾರೂ ಆಗಿದರೇ ॥ 253 ॥
ನನಗ್ಯೇಗೇ ಇಲ್ಲೀ ತಿಳಿಬೇಕು?” ತಾನಾ
“ಇಟುದೀನೆ ಆದರೂ ಯಾವಾ ಸುದ್ದಿ ಇಲ್ಲವೇ ॥ 254 ॥
ನಿನಗ್ಯಾರೂ ಹಂಚೂಗೀ ಹೇಳಿದರೂ” ತಾನಾ
“ನನಗ್ಯಾರೂ ಹೇಳವರಿಲ್ಲ ನನಗ್ಯಾರೂ ಕೇಳ್ವರಿಲ್ಲ ॥ 255 ॥

ನನ್ನಂದುರ್ಯಾರೂಇಲ್ಲಿಲ್ಲಾ ತಾನಾ
ನನ್ನಂದುರ್ಯಾರೂಇಲ್ಲಿಲ್ಲಾ ಲೀಗಿನ್ನೂ ॥ 256 ॥
ನನಗೇ ಕೂತಲ್ಲೇ ಹಂಬಲಾ" ತಾನಾ
ನನಗೇ ಕೂತಲ್ಲೇ ಹಂಬಲಾಲಂಬೂಕೂ ॥ 257 ॥
ವಂದಾ ಪೆಟ್ಟಾರೂ ಹೊಡದಿದನೇ ತಾನಾ
ವಂದಾ ಪೆಟ್ಟಾರೂ ಹೊಡದೀದಾ ಲಾಗಿನ್ನೂ ॥ 258 ॥
ತೀಡೀತೇಲದೂ ಮನುಗಿತೂ ತಾನಾ
ತೀಡೀತೇಲದೂ ಮನಗಿತೂ ಲಾಗಿನ್ನು ॥ 259 ॥
ಅವನಿಗೂ ಬಾಳಾ ಪಾಪಾ ಕಂಡಿತೂ ತಾನಾ
ಅವನಿಗೂ ಬಾಳಾ ಪಾಪಾ ಕಂಡೀತೂ ಲಾಗಿನ್ನು ॥ 260 ॥
ಇದ್ದಾ ಸಂಗ್ತೆಯೊಂದಾ ಹೇಳುತಾನೇ ತಾನಾ
ಇದ್ದಾ ಸಂಗ್ತೆಯೊಂದಾ ಹೇಳುತಾನೇ ಲಾಗಿನ್ನೂ ॥ 261 ॥
"ನನ ಕೊಲ್ಲುರ್ಯಾರೂ ಹುಟಲಿಲವೇ ತಾನಾ
ಹೋದಲ್ಲಿ ಬಂದಲ್ಲೀ ನನುಗ್ಯೇನೂ ಆಗೊದಿಲ್ಲ ॥ 262 ॥
ನನ್ನ ಕೊಲ್ಲಕ್ಯಾರೂ ಹುಟುಲಿಲವೇ ತಾನಾ
ನನ್ನ ಕೊಲ್ಲುರ್ಯಾರೂ ಹುಟಲಿಲ್ಲ" ಲಂದೇಳೀ ॥ 263 ॥
ಸುಮ್ಮನೆ ಲವೇರೂ ಮನುಗಿದರೇ ತಾನಾ
ಸುಮ್ಮನೆ ಲವೇರೂ ಮನುಗೀರು ಲಾಗಿನ್ನೂ ॥ 264 ॥
ಜೋಗೀ ಉಂಡು ತಿಂದೂ ಮರುದಿನಾ ತಾನಾ
ಊರ ಮೇನೆ ಲವನೂ ನಡದಿದನೆಯೇ ತಾನಾ ॥ 265 ॥
ಊರು ಮೇನೆ ಲವಾ ನೆಡುವಾಕೂ ಲಾಗಿನ್ನೂ
ಮಗುನಾ ಬುಡದಲ್ಲೀ ನಡುದಾದೇಯೇ ತಾನಾ ॥ 266 ॥
"ನಾ ಹೇಳಿದ ಮಾತಾ ಕೇಳಿದಯೇ?" ತಾನಾ
"ನೀ ಹೇಳಿದು ಮಾತಾ ಕೇಳಿದೆ ನಾನು ಮಗುವೇ ॥ 267 ॥
'ನನ ಕೊಲುಕ್ಯಾರು ಹುಟುಲಿಲ್ಲೇ ತಾನಾ
ಹಂಚುಗಿ ಯಾರು ಹೇಳುಕೊಟ್ರು?' ತಾನಾ ಅಂದ್ ಹೇಳೀ ॥ 268 ॥

ವಂದೂ ಪೇಟ್ವಾರೂ ಹೊಡುದೀದಾ" ತಾನಾ
"ಹೊಡೆದ್ರು ಹೊಡಕಣ್ಣಿ ಬಯ್ದರೂ ಬಯ್ಸಕ ನೀನು ॥ 269 ॥
ಮತ್ತೊಂದು ಮಾತು ಕೇಳಬೇಕೂ ತಾನಾ
ಮತ್ತೊಂದು ಮಾತು ಕೇಳಬೇಕು ಚಿಕ್ಕೀ ನೀನು ॥ 270 ॥
'ನೀನೂ ಉಂಡು ತಿಂದೀ ಊರ ಮೇನೆ ಹೋಗುತೇ
ಯೆಲ್ಲಾರೂ ಬಿದ್ರೆ ನನಗೆಂಗೆ ತಿಳಿಬೇಕೂ?' ತಾನಾ ॥ 271 ॥
ಯೆಲ್ಲಾರೂ ಬಿದ್ರೆ ನನಗೆಂಗೆ ತಿಳಿಬೇಕೂ ಲಂದೇಳೀ
ಯೆಲ್ಲಾರೂ ಬೀದ್ದೀ ಕೈಕಾಲು ನೋವಾದ್ರೆ ॥ 272 ॥
ನನಗ್ಯಾರೂ ಇಲ್ಲಿ ಹೇಳುವರೂ?" ತಾನಾ
"ಇಟದೀನೆ ಅವಾರೂ ಯಾವ ಸುದ್ದಿ ಇಲ್ಲಾಗಿತ್ತು ॥ 273 ॥
ನಿನುಗ್ಯಾರೂ ಹಂಚುಗೀ ಹೇಳು ಕೊಟ್ಟ? ತಾನಾ
ನಿನುಗ್ಯಾರೂ ಹೇಳುಕೂಟ್ರು" ಅಂದ್ ಹೇಳೀ ॥ 274 ॥
ಯಯ್ದ ಪೆಟ್ವಾರೂ ಕೊಟ್ಟಿದುನೇ ತಾನಾ
ಯಯ್ದ ಪೆಟ್ವಾರೂ ಕೊಡುಕೂ ಲಾಗಿನೂ ॥ 275 ॥
ತೀಡೇತೆ ಲದೂ, ಮನುಗೀತೇ ತಾನಾ
ತೀಡೇತೇ ಲದೂ ಮನಗೂಕು ಲಾಗಿನ್ನೂ ॥ 276 ॥
ಅವ್ನಿಗು ಬಾಳು ಪಾಪ ಕಂಡಿತೇ ತಾನಾ
ಅವ್ನಿಗು ಬಾಳು ಪಾಪ ಕಂಡಿತೂ ಲಾಗಿನ್ನು ॥ 277 ॥
ಇದ್ದ ಸಂಗ್ತೆಯಟ್ಟು ಹೇಳುತನೆಯೇ ತಾನಾ
"ಹೋದಲಿ ಬಂದಲ್ಲಿ ನಮಗೇನೂ ಆಗೂದಿಲ್ಲ ॥ 278 ॥
ಯೇಳು ಸಂದ್ರದಾಚೇ ಕೀಳು ಸಂದ್ರದ ತಡಿಮೇಲೆ
ಅಲ್ಲೊಂದು ನವಲೂ ಅದಿಯಲೇ ತಾನಾ ॥ 279 ॥
ಅಲ ಹೋಗೂಕ್ಯಾರೂ ಹುಟುಲಿಲವೇ ತಾನಾ
ಹುಟದೋರು ಯಾರು ಇಲ್ಲ ಬೆಳದೋರು ಯಾರು ಇಲ್ಲ ॥ 280 ॥
ಮುಂದಾರೂ ಯಾರೂ ಹುಟುದಿಲ್ಲವೇ ತಾನಾ
ಮುಂದಾರೂ ಯಾರೂ ಹುಟುದಿಲ್ಲಾ ಲಾಗಿನ್ನೂ ॥ 281 ॥

ಆ ನವಲಾ ನಾರೂ ಹಿಡಿದಿದರೇ ತಾನಾ
ಆ ನವ್ಲಾ ನಾರೂ ಹಿಡದಿದರೇ ಲಾಗಿನ್ನೂ ‖ 282 ‖
ಅದ್ರ ಕಾಲ ಮುರದ್ರೇ ನನ ಕಾಲು ಮುರಿತದೇ
ಅದ್ರ ರಟ್ಟೆ ಮುರಿದರೇ ನನ ರಟ್ಟೇ ಮುರಿತದೇ ‖ 283 ‖
ಅದ್ರ ಕುತ್ಗೆ ಮುರಿದ್ರೆ ನನ್ಗ ಪರಣ ಹೋಯಿತು"
ಇದ್ದ ಸಂಗ್ತಟ್ಟೂ ಹೇಳಿದನೇ ಲಾಗಿನ್ನು ‖ 284 ‖
ಮರುದಿನ ಮಗ್ನ ಕೂಡೇ ಹೇಳುತದೇ ತಾನಾ
"ಯೇಳ ಸಂದ್ರ ದಾಚೇ ಕೀಳ ಸಂದ್ರ ತಡಿಮೇನೇ ‖ 285 ‖
ಪಂಜರದಲೆ ವಂದೆ ನವಲೂ ಅದ್ಯಂತೆ ತಾನಾ
ಅದ್ರ ಕಾಲು ಮುರದ್ರೇ ನನ ಕಾಲು ಮುರಿತದೇ
ಅದ್ರ ರಟ್ಟೆ ಮುರೆದ್ರೇ ನನ ರಟ್ಟೇ ಮುರಿತದೇ ‖ 286 ‖
ಅದ್ರ ಕುತ್ಗಿ ಮುರಿದರೆ ನನ ಪರಾಣ ಹೋಯಿತು"
ಅಟ್ಟೊಂದ ಮಾತಾ ಕೇಳನೆಯೇ ಲಾಗಿನ್ನು ‖ 287 ‖
"ಹಳ್ಳನ ಬುಯ್ಡ್ ಯೊಂದ ಗೊತ್ತಿದೆಯೇ ತಾನಾ
ಹಳ್ಳನ ಬುಯ್ಡುಯೊಂದಾ ಗೊತ್ತಿದ್ರೇ ಚಿಕ್ಯವ್ವಾ ‖ 288 ‖
ಮೂರ ಹಳ್ಳೊಂದಾ ತಂದ ಕೊಡು" ತಾನಾ
ಮೂರ ಹಳ್ಳೊಂದಾ ತಂದಿನ್ನೂ ಕೊಟ್ಟಿತೂ ‖ 289 ‖
ಪಂಜೀಸರುಗೀಲೀ ಕಟ್ಟಿದನೇ ತಾನಾ
ಪಂಜೀಸರುಗೀಲೀ ಕಟ್ಟಿದನೇ ಲಾ ಹುಡುಗಾ ‖ 290 ‖
ಸಮುದ್ರ ತಡಿಗೋಗೀ ನಿತ್ತಿದನೇ ತಾನಾ
ಸಮುದ್ರ ತಡಿಗೋಗೀ ನಿತ್ತಿದ್ನ ಲಾಗಿನ್ನು ‖ 291 ‖
ವಂದೆ ಹಳ್ಳ ಮಂತ್ರೀಸೀ ವಗುದೀದಾ ತಾನಾ
"ಆಚೆ ಸಂದ್ರಾಚೆಲೀ ಇಚೇ ಸಂದ್ರೀಚೇಲೀ ‖ 292 ‖
ನಡಗೆ ಹೆದ್ದಾರೀ ಬೀಳಬೇಕೂ ತಾನಾ
ನಡಗೆ ಹೆದ್ದಾರೀ ಬೀಳಬೇಕೂ" ಲಂದೇಳಿ ‖ 293 ‖

ಹಳ್ಳನ ಮಂತ್ರೀಸೀ ವಗದೀದಾ ಲಾಗಿನ್ನು
ನವ್ಲನ ಜುಡುದಾಗೇ ನಡದೀದಾ ತಾನಾ ॥ 294 ॥
ನವ್ಲನ ಜುಡುದಾಗೇ ಹೋಗಿನ್ನೂ ಲಾಗಿನ್ನು
ನವ್ಲಗು ಕೈಯೊಂದಾ ಹಚ್ಚಿದಾ ತಾನಾ ॥ 295 ॥
ನವ್ಲಗು ಕೈಯೊಂದಾ ಹಚ್ಚಿದಾ ಲಾಗಿನ್ನೂ
ಅವ್ನ ಹೊಡವಾಕೇ ಬರ್ತದೆ ತಾನಾ ॥ 296 ॥
ಅವ್ನ ಹೊಡವಾಕೇ ಬರುವಕೂ ಲಾಗಿನ್ನು ॥ 297 ॥
ಮತ್ತೊಂದು ಹಳ್ಳ ಮಂತ್ರಿಸೀ ವಗದೀದಾ ತಾನಾ
ಮುದ್ಯಾಗೀ ಲಿಂದೂ ಕುಂತಿತೂ ತಾನಾ ॥ 298 ॥
ಮುದ್ಯಾಗೀ ಲಿಂದೂ ಕುಂತಿತೂ ಲಾಗಿನ್ನು
ಅದ್ರ ಪಂಚೇಲಿ ಕಟ್ಟಿದುನೆ ತಾನಾ ॥ 299 ॥
ಅದ್ರ ಪಂಚೇಲಿ ಕಟ್ಕಂಡೀ ಲಾಗಿನ್ನು
ಸಂದ್ರಾ ಕಿಲದೀಚೇ ಬಂದಿದನೇ ತಾನಾ ॥ 300 ॥
ಸಂದ್ರಾ ಕಿಲದೀಚೇ ಬಂದೀಗ ಲಾಗಿನ್ನು
ಮತ್ತೊಂದು ಹಳ್ಳ ಮಂತ್ರೀಸಿ ವಗದೀದಾ ತಾನಾ ॥ 301 ॥
ಆಚೆ ಸಂದ್ರ ಆಚಾಗ್ಲೀ ಇಚೆ ಸಂದ್ರ ಈಚಾಗ್ಲೀ
ನಡಗಿನ ಸಂದರ ನೆಡಗಾಲಿ ತಾನಾ ॥ 302 ॥
ನಡಗಿನ ಸಂದರದಲ್ ನೆಡದು ಬಂದಾನು ಲಾಗಿನ್ನು
ಹಿಂಡಿನ ಮರಿಯಾಗೇ ಕುತಕಂಡಾ ತಾನಾ ॥ 303 ॥
ಜೋಗಿ ಬರು ಬರುವಾ ಕಂಡೀದಾ ಲಾಗಿನ್ನು
ಜೋಗಿ ಬರು ಬರುವಾ ಅಟದೂರೆ ಕಂಡು ಕಂಡೀ ॥ 304 ॥
ಅದ್ರ ಕಾಲೊಂದಾ ಮುರದಿದನೇ ತಾನಾ
ನವ್ಲನ ಕಾಲೊಂದಾ ಮುರದೀದಾ ಲಾಗಿನ್ನು ॥ 305 ॥
ಅವ್ನ ಕಾಲಾರೂ ಮುರದೀತೆ ತಾನಾ
ಅವ್ನ ಕಾಲಾರೂ ಮುರದೀತೆ ಲಾಗಿನ್ನು ॥ 306 ॥

ರುಂಡ ನವ್ಲಾನಾ ಕೊಯ್ದದನೇ ತಾನಾ
ರುಂಡ ನಾಗಾವ ಕೊಯ್ದದನೇ ಲಾಗಿನ್ನು ‖ 307 ‖
“ರಂಡಿಕಲ್ಲುದೆಂಬ್ಲ ತಗಿತಪ್ಪಾ ನನ್ನೀಗ ತಾನಾ
ಸಂಗ್ತಯೊಂದಾ ಹೇಳಿ ಬಿಟ್ತೇ ತಾನಾ ‖ 308 ‖
ಸಂಗ್ತಯೊಂದಾ ಹೇಳಿ ಬಿಟ್ತೇ” ಲಂದೇಳಿ
ಹಾರುತ್ತೇ ಬರವನೇ ತಾನಾ ‖ 309 ‖
ಹಾರುತ್ತೇ ಬರವಾಗೆ ಲಾಗಿನ್ನು
ರಟ್ಟೆಯಲೊಂದಾ ಮುರದಾನೆ ತಾನಾ ‖ 310 ‖
ರಟ್ಟೆಯನಾರು ಮುರದೀದಾ ಲಾಗಿನ್ನು
ಕುತ್ತುಗಿನಾರೂ ಮುರದೀನಾ ತಾನಾ ‖ 311 ‖
ಕುತ್ತುಗಿನಾರೂ ಮುರದೊಂದ್ದು ಹಿಂಡಲ್ ವಗುದಿ
ಜೋಗೀಯ ಮನಿಗೇ ಬಂದಿದ ತಾನಾ ‖ 312 ‖
ಜೋಗೀಯ ಮನಿಗೇ ಬಂದಿದಾನೇ ಲಾಗಿನ್ನು
ಅಜ್ಜವಿಲಾರೂ ಕರದೀ ತಾನಾ ‖ 313 ‖
“ಅಜ್ಜವಿಲಾರೂ ಕರದಿನ್ನು ಚಿಕ್ಕವ್ವ
ಅವ್ನ ಬದ್ಕ ಬಾಳಾ ಅದಕ ಕೊಡು ತಾನಾ ‖ 314 ‖
ಅವ್ನ ಬದ್ಕ ಬಾಳಾ ಅದುಕಿನ್ನು ಕೊಡು ಚಿಕ್ಕವ್ವ
ಅದು ಇರ್ವಲ್ಲೆ ತನಕೂ ತಿಂದಕಳ್ಳಿ ತಾನಾ ‖ 315 ‖
ಹಳ್ಳನ್ ಬುಯ್ದೊಂದಾ ತಕ್ಕಣಿ ತಾನಾ ಚಿಕ್ಕವ್ವಾ
ನಮ್ಮನಿಗೂ ನಾವು ಹೊಗುವಾನೆ ತಾನಾ ‖ 316 ‖
ನಮ್ಮನಿಗೂ ನಾವು ಹೊಗುವಾನೆ” ಅಂದ ಹೇಳಿ
ಚಿಕ್ಕಿ ಕರಕಂಡೇ ಬರುತಾನೇ ತಾನಾ ‖ 317 ‖
ಚಿಕ್ಕಿ ಕರಕಂಡೇ ಬಂದೀರೂ ಲಾಗಿನ್ನು
ಹಾಸರಗಲ್ನಲ್ಲಿ ನಿತ್ತೀದ ತಾನಾ ‖ 318 ‖
ಹಾಸರಗಲ್ನಲ್ಲಿ ನಿತ್ತೀದ ಲಾಗಿನ್ನು
ವಂದೆ ಹಳ್ಳ ಮಂತ್ರೂಸಿ ವಗುದೀರು ತಾನಾ ‖ 319 ‖

ಯೇಳು ಜನಣು ತಮದಿರು ಯೇಳು ಪಟ ಹಿಡುಕಂಡೀ
ಯೇಳು ಜನವಾರೂ ಯೆದ್ದಿದರೂ ತಾನಾ ‖ 320 ‖
ಯೇಳೂ ಪಟವೊಂದಾ ಹಿಡುಕಂಡಿ ಲಾಗಿನ್ನು
ಅವನಾ ಕೊಲ್ಲೂಕೇ ಹೋಗುವರೇ ತಾನಾ ‖ 321 ‖
ಅವನಾ ಕೊಲ್ಲೂಕೇ ಹೋಗುವಾಗೆ ಲಾಗಿನ್ನೂ
ಬರುದ ಚೇಟ್ಯೊಂದಾ ವಗುದನೆಯೆ ತಾನಾ ‖ 322 ‖
ಬರುದ ಚೇಟ್ಯೊಂದಾ ವಗುದೀದಾ ಲಾಗಿನ್ನೂ
“ತಡೆ ತಡೆ ತಮೂದೀರೇ ವೊದುಕಂತೇ ತಾನಾ ‖ 323 ‖
ತಡೆ ತಡೆ ತಮೂದೀರೇ ವೊದುಕಂತೇ” ಲಂದೇಳಿ
ಅಕ್ಸರವೂಂದಾ ವೋದಿದನೇ ತಾನಾ ‖ 324 ‖
ಮುತ್ತಿನ ಕಣ್ಣೀರಾ ಶಡಿತಾನೇ ತಾನಾ
“ದಂಡೀಗೋಗುವಾಂಗೇ ಮುರೂ ತಿಂಗ್ಳಾ ಗರುಬಿಣಿ ‖ 325 ‖
ಮಗ ಹುಟ್ಟಿ ಕಾರುಬಾರಾ ನೆಡಸೀದಾ ತಾನಾ
ಮಗ ಹುಟ್ಟಿ ಕಾರುಬಾರಾ ನೆಡಸೀದಾ ತಮ್ಮದೀರ ‖ 326 ‖
ಯೆಂಟ್ ಜನಮ ಜೀವ ಪಡದಿದ” ತಾನಾ
ಆಲಕ್ಕೆ ಅವನಾ ಕುದ್ರಿಮೇನೆ ಕುಳ್ಸಕಂಡೀ
ಬಂದೀ ಬಾಗ್ಲದಾಗೇ ನಿಲವರು ತಾನಾ ‖ 327 ‖

- **ಕೆಲವು ಪದಗಳ ವಿವರಣೆ**

ಈಳ = ವೀಳ್ಯ
ರಭು = ಎಂಜಲು
ಹಾಲರು = ಹಾಲು ಹಲ್ಲು
ಸೂಲಿ = ಚೂಳಿ
ಜುಡು = ಗುಂಪು
ಉಗರಾದಿ = ಹಚ್ಚಿದಳು
ಕತೂನ = ಕೆಟ್ಟ ಸಂಗತಿ
ಲಾಂಗ್ = ಹಾಗೇ
ಸಂದ್ರ = ಸಮುದ್ರ

▪ ಹೇಳಿದವರು : **ದೇವಿ ಕೋಂ ಗಣಪಯ್ಯ ನಾಯ್ಕ,** ಗೇರಸೊಪ್ಪೆ, ದಿನಾಂಕ 19-04-1978.

# ಮಗಳು ನಾನೇ ಮಗನುವಾ ನಾನೇ

ಅಪ್ಪನೂ ಕುರುಡಾ ಅವ್ವೀನೂ ಕುರುಡೇ
ಗೋಂಡೀ ನೆಟ್ಟವ್ರೇ ಗೊಂಡೀಗ ನೀರ ಯೆರುದವ್ರೇ
ತಂಗೀ ಕೊಟ್ಟವ್ರೇ ತಂಗಳರಾಜ್ಯ ‖ 1 ‖
'ಕೇಳಲ್ಲೋ ಕೇಳೋ ನನ್ನಲು ಮಗುನೇ
ತಂಗೀ ನಾರೂ ಕರುಕಂಡೀ ಬಾರೋ'
ಲಟ್ಟೋಂದು ಮಾತಾ ಕೇಳಿದ ಮಗುನೇ ‖ 2 ‖
ಮಾಳುಗೀ ವಳುಗೇ ನಡುದಿದ ಮಗುನೇ
ಸೇರಿನ ನ್ಯಾವಳವಾ ಸೊಂಟಿಗೆ ದರುಸೀದಾ
ಸೇರಿನಾ ವಂಟೀ ಕೆಮಿಯಲಿ ದರುಸೀದಾ ‖ 3 ‖
ತಾನಿಡೂ ವಸ್ತ್ರಾ ಮೈಯಲಿ ದರುಸೀದಾ
"ಕೇಳಲ್ಲೇ ಕೇಳೇ ನನ್ನಾಲು ತಾಯೇ,
ತಂಗೀಯ ಮನಿಗೇ ಹೋಗೀಲೂ ಬತ್ತೇ ‖ 4 ‖
ಯೆಂಟೂ ದಿನದಲ್ಲೀ ಬರುತ್ತೇನೆ ತಾಯೇ"
ತಾಯೀಗೇನಾದ್ರೇ ಹೇಳೀದ ಮಗುನೇ
ತಿಂಗಳ ರಾಜ್ಯಾಕೂ ಹೋಗೀದಾ ಮಗುನೇ ‖ 5 ‖
ತಂಗೀಯ ಮನಿಗೇ ಹೋಗಿ ಮುಟ್ಟೀದಾ
ತಂಗೀನಾದಾರೂ ಲಣ್ಣನ ನೋಡೀತೂ
ಕುಳ್ಳಂದೀ ವಂದಾ ಹಶ್ಯ ಹಾಕುಲಿಲ್ಲಾ ‖ 6 ‖
ವಂದೂ ಚಂಬುದಿಕಾ ತಂದಿ ಕೊಡಲಿಲ್ಲಾ
ತಂಗೀ ಗಂಡಾಗೇ ದೂರಿನಾ ಕರಿಯಾ
ಹೋಗೀಲೂ ನಿಲುಕೇ ಕುಂತೀದ ಲಣ್ಣಾ ‖ 7 ‖
"ಕೇಳಲ್ಲೇ ಕೇಳೇ ನನ್ನಾಲು ತಂಗೀ,
ನಿನ್ನಲೂ ಗಂಡಾ ಯೆಲ್ಲೀಗ ಹೋಗನೆಯೇ?"
"ತನು ಗಂಡನ ಸುದ್ದೀ ನಿನಗಾರೂ ಲ್ಯಾಕೋ?" ‖ 8 ‖

"ಕೇಳಲ್ಲೇ ಕೇಳೇ ನನ್ನಲೂ ತಂಗೀ,
ಲಪ್ಪನೂ ಕುರುಡಾ ಲವ್ವೀನೂ ಕುರುಡೀ
ಗೊಂಡೀ ನೆಟ್ಟವ್ರೆ ಗೊಂಡೀಗ್ ನೀರ್ ಯೆರುದವ್ರೇ ‖ 9 ‖
ಆದಾದಾ ಹೂಂಗ್ಯಲ್ಲಾ ಪರುರು ಮುಡುದ ಹೋತ್ರೂ
ನಿನ್ನಾ ಕರುವಲ್ಲೀ ಬಂದೀದೇ ತಂಗೀ
ತಾಯೀ ತಂದೀನೂ ನಿನ ಜಾನದಲವ್ರೇ" ‖ 10 ‖
ಅಟ್ಟೊಂದು ಮಾತಾ ಹೇಳಿದಾ ಲಣ್ಣಾ
ತಂಗೀಽನಾದಾರೂ ಮಾತಾನಾಡುಲಿಲ್ಲಾ
ಅಡಗೀನಾದಾರೇ ಮಾಡೀತು ತಂಗೀ ‖ 11 ‖
ಕೋಜ್ಜಕ್ಕೀಲನ್ನಾ ಮಾಡದೇ ತಂಗೀ
ಚಪ್ಪೇ ಮುರ್ಗನುಳೀ ಸಾರಾ ಮಾಡದೇ
"ಕೇಳಲ್ಲೋ ಕೇಳೋ ಯೇ ಮನಸಾ ನೀನೂ ‖ 12 ‖
ಊಟಕಾದರೂ ಬರಲೂ ಬೇಕೋ"
ಹಳ್ಳಕಾದರೂ ಲೋಗೀದ ಲಣ್ಣಾ
ಕೈಕಾಲಾ ಮೊಕುವಾ ತೊಳುದೀದ ಲಣ್ಣಾ ‖ 13 ‖
ಊಟಾಕಿನ್ನಾರೊ ಬಂದೀ ಕುಂತೀದಾ
ತಂಗೀ ಲಾದಾರೊ ಯೆನು ಮಾಡೂತದೋ?
ಮಾಳುಗಿ ಮೆನೆ ಕತ್ತೀ ಮಸಿಯೂತಾದೇ ‖ 14 ‖
ಊಟಕೆ ಕುಂತಣ್ಣೀ ಸಬುದಾ ಕೇಳೀತೊ
"ಕೇಳಲ್ಲೇ ಕೇಳೇ ನನ್ನಾಲೂ ತಂಗೀ
ನನ್ನಲೂ ಬಾವಾ, ಯೆಲ್ಲೀ ಹೋಗನೆಯೇ? ‖ 15 ‖
ಲಪ್ಪನೂ ಕುರುಡಾ, ಲವ್ವೀನೂ ಕುರುಡೀ
ತಾಯೀ ತಂದೀಗೂ ನಾನು ವಬ್ಬನೆ ಮಗುನೇ
ಅವರೀಗೇ ಲಿನ್ನೇ ಲೇಗಾರೂ ಗತಿಯೇ" ‖ 16 ‖

ಅಟ್ಟೊಂದು ಮಾತಾ ಹೇಳಲೂ ತನಕೇ
ಮಾಳುಗಿ ಕೆಳುಗೀ ಇಳುದೀ ಬಂದೀತೂ
ಕೈಯಲ್ಲಿ ಕತ್ತೀ ಹಿಡುದೀ ಬಂದಾದೇ ‖ 17 ‖
ಅಣ್ಣನಾದಾರೂ ನೋಡೀಕಂಡೀದಾ
"ಕೇಳಲ್ಲೇ ಕೇಳೇ ನನ್ನಲೂ ತಂಗೀ
ನನ್ನ ಜೀವಾವಾ ಕೊಂದಲೂ ಬೇಡಾ" ‖ 18 ‖
ಅಂದೀಲೂ ಅಣ್ಣಾ ಹೇಳೀದಾನೇ
ಹೇಳೇಳೂ ತನುಕೇ ಕುತುಗೀ ಕಡುದೀತೂ
ಕೆಮಿಯಾನಾ ವಂಟೇ ಕಳುಚೀತೂ ಹೆಣ್ಣೂ ‖ 19 ‖
ಸೊಂಟನ ನ್ಯಾವಳವಾ ತೆಗುದೀತೂ ಹೆಣ್ಣೂ
ಅವ್ನಾ ದುಸ್ತಾವಾ ತೆಗುವಾಲು ತನಕೇ
ಗಂಡಾನಾದರೂ ಬಂದೀದಲೀಗೇ ‖ 20 ‖
ಅವ್ನನಾದಾರೂ ಹೊತ್ತೀ ಕಂಡೀತೂ
ಮಾಳುಗೀ ಮೇನೇ ಲಾಕೇ ಬಂದೀತೂ
ಗಂಡಾನುಪಂಚರು ಕೇಲೋಗೀತೂ ಲೆಣ್ಣೂ ‖ 21 ‖
"ಆಗೀತೂ ಲಡುಗೀ ಕಾದಿತು ಬಿಸಿನೀರೂ
ಜಳುಕಕಾದಾರೂ ಹೋಗೀ ಬಾ" ಅಂತು
ಜಳುಕಕಾದಾರೂ ಹೋಗಿದಲಿನ್ನೇ ‖ 22 ‖
ವಂದು ತಾಸಿನ ಜಳುಕಾ ಲರ್ಧತಾಸಿನಲ್ಲಿ ಮಾಡಿದಾ
ಊಟಾಕಾದಾರೂ ಬಂದೀ ಕುಂತೀದಾ
ವಂದೂ ತುತ್ತನ್ನಾ ನೆಗುವಲು ತನಕೇ ‖ 23 ‖
ಅಲ್ಲೀಯ ನೆತ್ರಾ ಕಣ್ಣಗೆ ಬಿದ್ದೀತೂ
"ಕೇಳಲ್ಲೇ ಕೇಳೇ ನನ್ನಲೂ ಮಡದೀ
ಊಟಕೆ ಕುಂತಲ್ಲೀ ಯೆಂತಾ ನೆತ್ತಿರವೇ ? ‖ 24 ‖

ನಾನೂ ವಂದಾಲೂ ಬೆಕ್ಕೂ ಸಾಕೀದೇ
ಸರುಪನ ಮರಿ ತಂದೀ ಮುರುದೀ ತಿಂದೀತೂ
“ನೆತ್ತರಲಿನ್ನೇ ಬಿದ್ದಿದೆ” ಲಂದೀತೂ ‖ 25 ‖
ಲಟ್ಟೇ ಮಾತೀಗೇ ಕೈಕುಡುಗ್ ಯೆದ್ದೀದಾ
“ಕೇಳಲ್ಲೇ ಕೇಳಿ ನಮ್ಮಲೂ ಸ್ವಾಮಿ
ಊಟನಾದರೂ ಮಾಡೀಕಂಡ್ ಹೋಗೀ” ‖ 26 ‖
“ಆಬೆಕ್ಕೂಲಿನ್ನೆ ನಮುಗಾಲು ಬೇಡಾ
ಬೆಕ್ಕಲಿಡುದಿನ್ನೇ ಬಿಟ್ಟೇ ಬರುತ್ತೇನೆ”
ಕೈ ಬಾಯಾ ತೊಳುದೀ ವಳುಗೇ ಬಂದೀದಾ ‖ 27 ‖
ದೀಪ ಹಚಿಕಂಡೀ ವಳುಗೆಲ್ಲ ಹುಡುಕೀದಾ
ದೀಪ ಹಚಿಕಂಡ ವಳುಗೇ ಹುಡ್ಕುತಾನಾ
ಚಿನ್ನದುಂಗೀಲಾ ಶಿಕ್ಕೀತೂ ಲವಗೇ ‖ 28 ‖
“ಕೇಳಲ್ಲೇ ಕೇಳೇ ನನ್ನಲೂ ಮಡದೀ
ಚಿನ್ನದುಂಗೀಲಾ ಎಲ್ಲಿದ್ದೀ ಬಂತೇ?”
“ನೀರೀಗಂದೇಳೀ ಲೋಗಿದೆ ಸ್ವಾಮೀ ‖ 29 ‖
ವಂದೂ ಲುಂಗೀಲಾ ಸಿಕ್ಕೀತೂ ನನುಗೇ
ನಿಮಗಾಗುದಂದೀ ತಂದೀ ಲಿಟ್ಟೀದೇ”
ಲಟ್ಟೊಂದೂ ಮಾತಾ ಕೇಳೀದಾ ನೋಡೂ ‖ 30 ‖
ಮಾಳುಗೀ ಇನ್ನೇ ಹತ್ತೀದಾ ಲವನೂ
ಮಾಳೂಗೀಯೆಲ್ಲಾ ಹುಡುಕೂವತನಕೇ
ಮೂಲಿಲಾಕಿನ್ನೇ ಮುಚ್ಚೀಲಿಟ್ಟದೇ ‖ 31 ‖
ಸವ್ವನಾದಾರೂ ನೋಡೀದಾ ಲವನೂ
ಬೂಮಿಗೆ ಮುರುಚಾಗೀ ಬಿದ್ದೀದಾ ನೋಡೂ
ವಂದೂ ತಾಸಾದ್ರೂ ಯೆಚ್ಚರಾಗುಲಿಲ್ಲಾ ‖ 32 ‖
ಮಾಳೂಗಿ ಗಿನ್ನೇ ಹೋಗೀತೂ ಹೆಣ್ಣಾ
ಗಂಡ ವಂದ್ ಬದಿಲಿ ಬಿದ್ದಾನೇ ನೋಡೂ
ಗಂಡನ ಇನ್ನೇ ಯೇಳಿಸೀ ಕುಳ್ಳಿತೂ ‖ 33 ‖

“ಕೇಳಲ್ಲೀ ಕೇಳೀ ಯೇನನ್ನಾ ಸ್ವಾಮೀ,
ಶೇರೂ ಶೇರೀನಾ ನ್ಯೇವಾಳ ಉಂಟೂ
ನಿಮಗಾದ್ರೂ ಲಾದ್ರೇ ಲಾಗೂದೂ ಸ್ವಾಮೀ ‖ 34 ‖
ಬೇಕಾದಾ ವಸ್ತಾ ಉಂಟೂ ಸ್ವಾಮೀ”
ಅಂದಿ ಇನ್ನಾದ್ರೂ ಹೇಳಿತು ಹೆಣ್ಣೂ
“ಕೇಳಲ್ಲೀ ಕೇಳೇ ಏ ಹೆಣ್ಣೇ, ನೀನೂ ‖ 35 ‖
ವಡವೀ ಆಸ್ತೀಗೆ ನನು ಬಾವನ ಜೀಮಾ
ಯಾವಾಗೆ ನೀನೂ ಮೋಸಾ ಮಾಡಿದಿಯೇ?
ತಾಯೀ ತಂದೀನೂ ಲಿಬ್ಬರು ಕುರುಡಾರೂ ‖ 36 ‖
ಅವರಗೇ ಇನ್ನೇ ಯೇನಲು ಗತಿಯೇ?”
ಅಂದೀ ನಾದಾರೇ ಹೇಳೀದ ನೋಡು
ಬಾವಾನಾದರೂ ಹೊತ್ತೀಕಂಡೀದಾ ‖ 37 ‖
ಮಾಳೂಗೀ ಕೆಳುಗೇ ಲಿಳುದೇ ಬಂದೀದಾ
ಮಾಳೂಗೀ ಕೆಳುಗೇ ಮನುಗ್ಸಿದಾ ನೋಡೂ
“ಹರ ಹರ” ನಂದಾ “ಶಿವ ಶಿವ” ನಂದಾ ‖ 38 ‖
“ನನ್ನಾಲೂ ಬಾವಾ ಯಾವಗೆ ಶಿಕ್ಕೂನೋ”
ಮುತ್ತಿನ ಕಣ್ಣೀರಾ ಶಡುದೀದಾ ನೋಡೂ
ಹಿಂಡೂತೀ ಇನ್ನೇ ಕರುದೀದಾ ನೋಡೂ ‖ 39 ‖
“ಕೇಳಲ್ಲೇ ಕೇಳೇ ಯೇ ಹೆಣ್ಣೇ, ನೀನೂ
ನನ್ನಾ ಬಾವಾನಾ ಜೀವಾ ತೆಗುದೀದೇ
ನೀನೂ ಲಾದರೇ ಇರುವಾದು ಯಾಕೇ?” ‖ 40 ‖
ಲಂದೀ ಹೇಳೀದಾ ಕುತುಗೀ ಕಡುದೀದಾ
ಯೆಯ್ದೂ ಸವಗೋಳಾ ವಂದೇ ಕಡೆಗಾಕ್ದಾ
ಮಾಳೂಗೀ ಕದೂವಾ ಜಡುದೀದಾ ನೋಡೂ ‖ 41 ‖
ಮನಿಗಾದ್ರೂ ಬೆಂಕೀ ಹಚ್ಚೇ ಬಿಟ್ಟೀದಾ
ಯೆಯ್ದೂ ಜನ ಸುಟ್ಟೇ ಬೂದೀಲಾಗೀರೂ
ನೆಂಟರ ಮನಿಗೇ ಬಂದವ್ನೇ ಲೀಗೇ? ‖ 42 ‖

ನೆಂಟರ ಮನಿಗಿನ್ನೇ ಬರುವಾಲೂ ತನಕೇ
ತಾಯೀ ತಂದೀನೂ ಗೋಳ ಗುದ್ತಿ ಬಿದ್ದಾರೇ
ಊಟಾನೂ ಲೆಲ್ಲಾ ಸಾಸಾನೂ ಲೆಲ್ಲಾ ‖ 43 ‖
"ನನ್ನಲು ಮಗುನೇ ಯೆಂಟು ದಿನುದಲೂ ಬರುತೀದಾ
ಯೆಂಟು ದೀನದಲ್ಲೆಲ್ಲಾ ತಿಂಗಳು ಲಾಗೀತೂ
ನನ್ನಲೂ ಮಗುನೇ ಯೆಲ್ಲೀಗ ಹೋಗನೆಯೊ? ‖ 44 ‖
ನಮುಗ್ಯೇನಾ ಗತಿಯೋ?" ಲಂದೀ ಹೇಳುತುರೂ
ಲಟು ಮಾತ ಹೇಳೂವತನುಕೇಲಿನ್ನೇ
ಅಳಿಯನಾದಾರೆ ಬಂದೀ  ಮುಟ್ಟವ್ನೇ ‖ 45 ‖
"ಕೇಳಲ್ಲೇ ಕೇಳೇ ಯೇತಾಯೀ ತಂದೇ,
ನಿನ್ನಲೂ ಮಗುನೇ ಬಂದೀ ಮುಟ್ಟೀದೇ
ನೀವಾದರಿನ್ನೇ ತೀಡಲೂ ಬೇಡೀ" ‖ 46 ‖
"ಕೇಳಲ್ಲೋ ಕೇಳೋ ನನ್ನಲೂ ಮಗುನೇ,
ತಂಗೀನಾದಾರೂ ಬರುವುದಿಲ್ಲಂತೂ?"
"ಇನ್ನೆಂಟು ದಿನುದಲ್ಲೀ ಬರೂವದು ತಾಯೇ" ‖ 47 ‖
ಲಂದೀನಾದಾರೇ ಹೇಳೀದ ಅಳಿಯಾ
ಅವ್ನಲೂ ತಂದೇ ಪರಿಕ್ಸಿ ಮಾಡೀದಾ
"ಯಾರಪ್ಪಾ ನೀನೂ ಯಲ್ಲಾಯ್ತೋ ನಿನುಗೇ? ‖ 48 ‖
ನನ್ನಲೂ ಮಗುನೇ ನೀಯೇನಲ್ಲಾ
ನನ್ನಲೂ ಮಗುನು ತಿಂಗಳ ರಾಜಿಕೋಗಿದಾ
ಯೆಂಟೂ ದಿನುದಲ್ಲೀ ಬರುತೇ ಲಂದೀದಾ ‖ 49 ‖
ತೀಗಳಾದರೂ ಬರಲು ಇಲ್ಲಾ
ನನ್ನಾಲು ಮಗುನಾ ಕಂಡೀದೀಯೇನೋ?"
"ನಿನ್ನ ಮಗನೂ ನಾನೂ, ಮಗೂಳು ನಾನೂ ‖ 50 ‖
ನಿಮ್ಮಾ ಬುಡದಲ್ಲೀ ಉಳಿಯುತ್ತೇ ಮಾವಾ,"
ನಂದೀ ನಾದಾರೇ ಹೇಳೀದಾ ಲಳಿಯಾ
ಯೇನೆನ ಮಾಡಿದರೂ ಕೇಳೂವದೆಲ್ಲಾ ‖ 51 ‖

"ಕೇಳಲ್ಲೊ ಕೇಳೋ ಯೇನನ್ನ ಮಾವಾ
ನಿನ್ನಲೂ ಮಗುನೇ ಕರುವ ಲೋಗೀದಾ
ನಾನೂ ನಾದಾರೇ ಮನಿಲೆಲ್ಲಾದ ಹೊತ್ತೂ ‖ 52 ‖
ನಿನ್ನ ಮಗುಳಿನ್ನೇ ಮೋಸಾ ಮಾಡದಿಯೋ
ಆಬರುಣ್ಣಾಸ್ತೀಗೇ ಮೋಸಾ ಮಾಡೀತೂ
ನಾನಾದರಿನ್ನೇ ಮನಿಗೇ ಬಂದೀದೇ ‖ 53 ‖
ನನ್ನಾ ಬಾವಾನಾ ಮೋಸಾ ಮಾಡಾದೇ
'ನೀ ಇದ್ದೀ ಯೇನೂ ಫಲವೇ?' ಅಂದೇ
ಅದ್ರಾ ಕುತುಗೀಯಾ ಕಡುದೀದೇ ನಾನೂ ‖ 54 ‖
ಸುಟ್ಟೀ ಬೂದೀಯಾ ಮಾಡೀ ಬಂದನೆಯೇ
ನನುಗೇಲಾದಾರೇ ತಾಯೀ ತಂದೆಲ್ಲಾ
ತಾಯೀನೂ ನೀವೇ ತಂದೀನೂ ನೀವೇ ‖ 55 ‖
ನಿಮುಗೇ ಲಾದಾರೂ ಮಕ್ಕಳೂ ಯಿಲ್ಲಾ
ಮಗಳೂವಾ ನಾನೇ, ಮಗನೇಯಾ ನಾನೇ
ನಿಮ್ಮಾ ಜೀವಾವಾ ನಾಸಲಗೂವೇ" ‖ 56 ‖
ಲಂದೇಳೀ ಅಳಿಯಾ ಹೇಳೀದಾನೇ
ನೆಂಟರ ಮನಿಲೀ ಉಳಿದೂಃಕಂಡಾ ‖ 57 ‖

- **ಕೆಲವು ಪದಗಳ ವಿವರಣೆ**

ಪರುರು = ಬೇರೆಯವರು
ನೆತ್ರ = ರಕ್ತ
ಪಂಚರು = ಪಂಜಿಯಾದರು
ಲಾಕೆ = ಹಾಕಿ
ಸವ್ವ = ಶವ
ಜೀಮಾ = ಜೀವ

▪ ಹೇಳಿದವರು- **ಸೌ| ಮಾಸ್ತಿ ರಾಮನಾಯ್ಕ,** ವಸ್ತಿ: ಹೆಗಡೆ ಊರು.

# ಘಾತಕ ಅಣ್ಣ

(ಪ್ರತಿ ಸಾಲಿನ ಕೊನೆಗೆ 'ತಾನಿತಾನಿ ತಾನಿರೋ' ಎನ್ನಬೇಕು)

ಕೇಳಲೆ ಕೇಳಲ್ಲೆ ನಮ್ಮಲು ತಾಯೇ, ತಾನಿತಾನಿ ತಾನಿರೋ
ನಮ್ಮನಿಲಿಂದೀ ಮದೊಡ್ಡ ಹಬ್ಬಾ
ತಂಗಿ ಕರ್ವಲ್ಲೀ ನಾ ಹೋಗಬೇಕೂ"
ಅಟ್ಟೊಂದ ಮಾತಾ ಹೇಳಾವ್ನೆ ಅಣ್ಣಾ ‖ 1 ‖
ಕೊದರೀ ಸಾಲೀಗೇ ನೆಡದಾನೆ ಲೀಗೇ
ಆಯಾಕ್ವೊಂದ ಕೊದರೀ ಹೆಕ್ಕಾನೆ ಅಣ್ಣಾ
ಹಿಂತಿರುಗಿ ಮನೆಗೇ ಬಂದಾನೆ ಅಣ್ಣಾ
ಬೇಕಾದ ವಸ್ತ್ರಾ ದರ್ಸಾನೆ ತಾನೂ ‖ 2 ‖
ಕೊದರೀ ಸಾಲೀಗೇ ನೆಡದಾನೆ ಅಣ್ಣಾ
ಹತ್ತವರಸೀನಾ ಬುದ್ವಂತ ಯೆತ್ತೂ
ಯೆತ್ತಿನ ಮೇನಿನ್ನೇ ಕೂತಾನೆ ಅಣ್ಣಾ
ತಂಗೀ ಮನಿಗಾಗೀ ನೆಡದಾನೆ ಯೇಗೇ ‖ 3 ‖
ಅಟದೊರೆ ಬರುವಾಗೆ ಇಟದೊರೇ ಕಂಡಳು
"ಯೇನ್ ಬಂದೆ ಅಣ್ಣಾ, ಯೆಂತ್ ಬಂದೆ ಅಣ್ಣಾ,
ಯೆತ್ನಿಂದ್ ಕಿಂದ್ ಕೆಳಗೆ ಇಳಿಬೇಕೋ ಅಣ್ಣಾ"
ಯೆತ್ನಿಂದ್ ಕಿಂದ್ ಕೆಳಗೆ ಇಳ್ದಾನೆ ಅಣ್ಣಾ ‖ 4 ‖
ಕೊಂಬಾನ ಗಿಂಡ್ಯಲ್ಲೀ ನೀರಾನೆ ಕೊಟ್ಟೀತೂ
ಕೈಕಾಲ ಮೊಕವಾ ತೊಳ್ದಾನೆ ಅಣ್ಣಾ
ಪಟ್ಟೀ ಮಂಚ್ದ ಮೇನೇ ಕೂತಾನೆ ಅಣ್ಣಾ
"ಯೇನ್ ಬಂದೇ ಅಣ್ಣಾ, ಯೆಂತ್ ಬಂದೆ ಅಣ್ಣಾ? ‖ 5 ‖
ಬಂದಾ ಸಂಗುತಿಯಾ ವದ್ಗ ಹೇಳೂ ನೀನೂ"
"ಕೇಳಲ್ ಕೇಳಲ್ಲೇ ನಮ್ಮಲು ತಂಗೀ,

ನಮ್ಮನೀಲಿಂದೂ ಮಾದೊಡ್ಡ ಹಬ್ಬಾ
ಕರ್ವಕಾದಾರೇ ಬಂದಾನೆ ನಾನೂ ॥ 6 ॥
ನಿನ್ನಾ ಕರ್ವಲ್ಲೀ ಬಂದಾನೆ ನಾನೂ
ಕೇಳಾಲೆ ಕೇಳೇ ನನ್ನಲು ತಂಗೀ,
ಬಾವಾನಾದರೇ ಯೆಲ್ಲೀಗೆ ಹೋಗಾನೇ?"
"ಕೇಳಲ್ ಕೇಳಲ್ಲೋ ನಮ್ಮಲು ಅಣ್ಣಾ, ॥ 7 ॥
ಮೂಡನ ಬಯ್ಲೀಗೇ ಹೂಡೂಕ್ ಹೋಗಯೋ್ರ್"
"ಕೇಳಲ್ ಕೇಳಲ್ಲೇ ನಮ್ಮಲು ತಂಗೀ,
ಬಾವಾನಾದರೇ ಯೆಟ್ ಹೊತ್ಗ್ ಬರುವಾ?"
"ಕೇಳಲ್ ಕೇಳಲ್ಲೋ ನಮ್ಮಲು ಅಣ್ಣಾ ॥ 8 ॥
ವೂಟಾಕಾದಾರೇ ಬರ್ತಾರೆ ಅವರೂ"
ಅಟ್ಟಂದ ಹೊತ್ತೀಗೇ ಬರ್ತಾನೆ ಬಾವಾ
"ಕೇಳಲ್ ಕೇಳಲ್ಲೋ ನಮ್ಮಲು ಬಾವಾ
ನಮ್ಮನೆ ಇಂದೀ ಮಾದೊಡ್ಡ ಹಬ್ಬಾ ॥ 9 ॥
ನಿಮ್ಮ ಕರ್ವಲ್ಲೀ ಬಂದಾನೆ ಬಾವಾ"
"ಕೇಳಲ್ ಕೇಳಲ್ಲೋ ನಿಮ್ಮಲು ಬಾವಾ,
ನನ್ಗೇ ಆದಾರೇ ಬರವದು ಇಲ್ಲಾ
ತಂಗೀನಾದರೇ ಕರ್ಕಂಡಿ ಹೋಗೂ" ॥ 10 ॥
ಅಟ್ಟೊಂದ ಮಾತಾ ಕೇಳಾರೆ ಅವರೂ
"ವೋಟಾಕಾದರೇ ಬರಬೇಕು ಅಣ್ಣಾ"
ವೋಟಾನಾದಾರೇ ನುಂಡಾರೆ ಯೇಗೇ
ಪಟ್ಟೀ ಮಂಚ್ದ ಮೇನೇ ಕೂತಾರೆ ಅವರೂ ॥ 11 ॥
ಅಯೂಕ್ ವಂದು ಕವಳಾ ಮೆಲಿದಾರೆ ನೋಡೂ
ಬಾವಾನ ಕೋಡೇ ಯೇನಾ ಹೇಳ್ತಾನೇ?
"ಕೇಳಲ್ ಕೇಳಲ್ಲೋ ನಮ್ಮಲು ಬಾವಾ
ತಂಗೀ ನಾದಾರೆ ಕರ್ಕಂಡಿ ಹೋಗೂ ॥ 12 ॥

ನಾಕೈದ್ ದಿವಸಾಕೇ ಕರ್ಸಬೇಕು ಬಾವಾ"
ಅಟ್ಟೊಂದ ಮಾಲಾ ಕೇಳಾದೆ ತಂಗೀ
ಬಾಚೀ ಸಿರಿ ಮೂಡಿಯಾ ಬಿಗಿದಾದೆ ಯೇಗೇ
ಮೆಟ್ಟೀ ದಂಡೀಯಾ ಮುಡ್ಡಾದೆ ತಂಗೀ ‖ 13 ‖
ಬೇಕಾದ ಪಟ್ಟೀ ದರ್ಶಾದೆ ತಂಗೀ
ಬೇಕಾದ ಚೆನ್ನಾ ಹಾಕಾದೆ ತಂಗೀ
"ಕೇಳಲ್ ಕೇಳಲ್ಲೊ ನಮ್ಮಲು ಅಣ್ಣಾ
ನನಗೆ ಆದಾರೇ ತಯ್ಯಾರ ಆಯ್ತೊ" ‖ 14 ‖
ಅಟ್ಟೊಂದ ಮಾತಾ ಹೇಳಾರೆ ಯೇಗೇ
ಹತ್ತವರಸಿನಾ ಬುದ್ವಂತಾ ಯೆತ್ತೊ
ಯೆತ್ತೀನ ಮೇನಿನ್ನೇ ಕೂತಾನೆ ಅಣ್ಣಾ
ತಂಗೀ ನಾದಾರೇ ಮುಂದೇ ಕುಳ್ಸಾನೇ ‖ 15 ‖
ಬಿದ್ದಾ ಮಾರಿಗವಾ ಹಿಡ್ದಾರೆ ಲೇಗೇ
ಮುಂದಾಕೆ ದಾರೀ ಹಿಡ್ದಾರೆ ಯೇಗೇ
"ಕೇಳಲ್ ಕೇಳಲ್ಲೋ ನಮ್ಮ ಅಣ್ಣಾ
ಮನಿಗೋಗೂ ದಾರೀ ಬಿಟ್ಟ್ಯಲ್ಲೋ ಅಣ್ಣಾ ‖ 16‖
ಅಡ್ಡೀ ಮುಂದಾಗೀ ಹೊಡ್ದೆಯಲೊ ಅಣ್ಣಾ"
"ಕೇಳೆಲ್ ಕೇಳಲ್ಲೇ ನಮ್ಮಲು ತಂಗೀ
ಹೀಗೇ ಹೋದಾರೇ ಸುತ್ತೊ ಆಯೀತೇ
ಹೀಗೇ ಹೋದಾರೇ ನೆಟ್ಟಾಗೆ ಆಯೀತೇ" ‖ 17 ‖
ಅಂದೇಳಿ ಅಣ್ಣಾ ಹೇಳ್ತಾನೆ ಲೇಗೇ
"ಕೇಳಲ್ ಕೇಳಲ್ಲೋ ನಮ್ಮಲು ಅಣ್ಣಾ
ಹತ್ತ ವರುಸಿನಾ ಬುದವಂತ ಯೆತ್ತೊ
ಕಲ್ಲಾಗ ಮುಳ್ಳಾಗೇ ಶಿಗದೀನ್ನೆ ಬಂತೂ ‖ 18 ‖
ಗೋರಂಬು ಅಡವಿಗೆ ಬಂದ್ಯಲ್ಲೋ ಅಣ್ಣಾ"
"ಕೇಳಲ್ ಕೇಳಲ್ಲೇ ನಮ್ಮಲು ತಂಗೀ,

ಅಡವೀ ಆದಾರೇ ಸಿಕ್ತಾದೆ ಬೈಲೂ"
ಅಂದ್ ಹೇಳಿ ಅಣ್ಣಾ ಮುಂದಾಕ್ ಹೊಡೆದಾ ‖ 19 ‖
ಅಟ್ಟೊಂದ ಮಾತಾ ಹೇಳ್ತಾನೆ ಅಣ್ಣಾ
ಯೆತ್ನಕಿಂದ ಕಳುಗೇ ಇಳ್ದಾನೆ ಅಣ್ಣಾ
ಸುತ್ತೀದ ಪಂಜೀ ಬಿಸ್ಸಾನೆ ಅಣ್ಣಾ
ಕಣ್ಣಾನೆ ಕಟದಾ ಕಯ್ಯ್ಯಾನೆ ಬಿಗದಾ ‖ 20 ‖
ಕಂಕ್ಳದನ ಚೂರೀ ತೆಗದಾನೆ ಚೂರೀಯಾಕೂಕೆ
ಅಡ್ಡಿಯನ ಕಲ್ಲಾ ಮರಚಾನೆ ಅಣ್ಣಾ
ಕಲ್ಲಾನೆ ಹುಳವೇ ಮುಟ್ಟೀ ತಣ್ಣಾಗೇ
"ಕೇಳಲ್ ಕೇಳಲ್ಲೇ ನಮ್ಮಲು ತಂಗೀ ‖ 21 ‖
ಕಲ್ಲಾನ ಹುಳವೆ ಮುಟ್ಟೀ ತಣ್ಣಾಗೇ
ಹುಳ ಮುಟ್ಟಿದ ಮದ್ದ ಹಳಬೇಕೆ ತಂಗೀ "
"ಕೇಳಲ್ ಕೇಳಲ್ಲೋ ನಮ್ಮಲು ಅಣ್ಣಾ
ಕಣ್ಣಾನೆ ಬಿಡಸೂ ಕಯ್ಯ್ಯಾನೆ ಬಿಡಸೂ" ‖ 22 ‖
ಕಣ್ಣಾನೆ ಬಿಡ್ಸಲೆಲ್ಲ ಕಯ್ಯ್ಯಾನೆ ಬಿಡ್ಸಲೆಲ್ಲ
ಹುಳ ಮುಟ್ಟಿದ ಮದ್ದಾ ಹೇಳಲೆಲ್ಲ ತಂಗೀ
ಅಣ್ಣಾನ ಜೀವಾ ಹಾಗೇ ಹೋಗೀತೂ
ಹತ್ತ ವರಸಿನಾ ಬುದ್ವಂತ ಯೆತ್ತೂ ‖ 23 ‖
'ಹರ ಹರ' ಅಂತೂ 'ಶಿವ ಶಿವ' ಅಂತೂ
ಕಲ್ಲಾಗೆ ಮುಳ್ಳಾಗೇ ಶಿಗದೀನ್ನೀ ಬಂತೂ
ಮನಿಗೋಗು ದಾರೀ ಹಿಡ್ದಾದೆ ಯೆತ್ತೂ
ನೆಡೆದೀ ನೆಡದಿನ್ನೇ ಸಾಕಾಯ್ತೂ ಯೆತ್ತೂ ‖ 24 ‖
ತನ್ನ ಮನಿಗಿನ್ನೆ ಕರ್ಕಂಡಿ ಬಂತೂ
ಅಟದೊರೆ ಬರುವಾಗೇ ಇಟದೋರೆ ಕಂಡ್ತೂ
"ಕೇಳಲ್ ಕೇಳಲ್ಲೇ ನನ್ನಾಲು ಮಗುವೇ
ವಬ್ಬಾಳಾದಾರೇ ಬಂದ್ಯಲ್ಲೇ ಮಗುಳೇ ‖ 25 ‖

ಕರ್ವಾಕೆ ಹೋದಣ್ಣಾ ಯಾಕೇ ಬರಲೆಲ್ಲಾ?"
"ಕೇಳಲ್ ಕೇಳಲ್ಲೇ ನನ್ನಾಲು ತಾಯೇ,
ಅಣ್ಣಾನ ಸುದ್ದೀ ಹೇಳ್ತೇನೆ ತಾಯೇ
ಕಣ್ಣಾನೆ ಬಿಡಸೂ ಕಯ್ಯಾನೆ ಬಿಡಸೂ" ‖ 26 ‖
ಕಣ್ಣಾನೆ ಬಿಡಸ್ತೂ, ಕಯ್ಯಾನೆ ಬಿಡಸ್ತೂ
"ಕೇಳಲ್ ಕೇಳಲ್ಲೇ ನನ್ನಾಲು ತಾಯೇ,
ಅಡ್ವಿ ಮುಂದಾಗೇ ಹೊಡ್ದಾನೆ ನಿನಮಗಾ
ಹತ್ತ ವರಶಿನಾ ಬುದವಂತ ಯೆತ್ತೂ ‖ 27 ‖
ಕಲ್ಲಾಗೆ ಮುಳ್ಳಾಗೇ ಶಿಗದಿನ್ನೆ ಹೋಯ್ತೋ
ಮನಿಗೋಗು ದಾರೀ ಬಿಟ್ಟಲ್ಲೋ ಅಣ್ಣಾ
'ಹೀಗೇ ಹೋದಾರೇ ನೆಡ್ದಾಗೆ ಆಯ್ತೂ'
ಅಂದೇಳಿ ತಾಯೇ ಹೇಳ್ದಾನೆ ನಿನ ಮಗ ‖ 28 ‖
ಯೆತ್ನಕಿಂದ ಕೆಳಗೇ ಇಳ್ದಾನೆ ತಾಯೇ
ಸುತ್ತೀದ ಪಂಜೀ ಬಿಡ್ಸಾನೆ ತಾಯೇ
ಕಣ್ಣನೆ ಕಟಿದಾ ಕಯ್ಯಾನೆ ಬಿಗದಾ
ಕಂಳ್ಳದನ ಚೂರೀ ತೆಗ್ದಾನೆ ಅಣ್ಣಾ ‖ 29 ‖
ಅಡ್ವೀಯಾನ ಕಲ್ಲಾ ಮರ್ಚಾನೆ ಅಣ್ಣಾ
ಕಲ್ಲಾನ ಹುಳವೇ ಮುಟ್ಟೇತಣ್ಣಾಗೇ
'ಹುಳಮುಟ್ಟಿದ ಮದ್ದಾ ಹೇಳಬೇಕು' ಲಂದಾ
'ಕಣ್ಣಾನೆ ಬಿಡಸೂ, ಕಯ್ಯಾನೆ ಬಿಡಸೂ ‖ 30 ‖
ಹುಳಮುಟ್ಟಿದ ಮದ್ದಾ ಹೇಳ್ತೇನೆ' ಅಂದೇ
ಕಣ್ಣಾನೆ ಬಿಡ್ಸಲೆಲ್ಲ ಕಯ್ಯಾನು ಬಿಡ್ಸಲೆಲ್ಲ
ಹುಳ ಮುಟ್ಟಿದ ಮದ್ದಾ ಹೆಳ್ಳೆಲ್ಲ ತಾಯೇ
ಅಣ್ಣಾನ ಜೀವಾ ಅಲ್ಲೇ ಹೋಯಿತೂ ‖ 31 ‖
ಹತ್ತ ವರುಶೀನಾ ಬುದ್ವಂತ ಯೆತ್ತೂ
ಮನಿಗೇ ನಾದಾರೇ ಕರಕಂಡಿ ಬಂತೂ"

ಅಟ್ಟೊಂದ ಮಾತಾ ಕೇಳಾದೆ ತಾಯೀ
"ಯೆಲ್ಲೀನನ ಮಗನಾ ನೋಡಬೇಕಂದ್" ಹೇಳೀ ‖ 32 ‖
ತಾಯೀ ಹೊಡಕೇಯಾ ನೋಡ್ವಾಂಗೇ ಯೆಲ್ಲ
ತಾಯೀ ಹೊಡಕೇಯಾ ನೋಡೂ ಹೊತ್ತೀಗೇ
ಹತ್ತೂ ವರಶೀನಾ ಬುದ್ವಂತ ಯೆತ್ತೂ
ಅಡವೀಗಾದಾರೇ ವೋಡಾದೆ ಯೇಗೇ ‖ 33 ‖
ಮಗನ ಜೀವವಾ ಪಡಿದಾದೆ ಯೆತ್ತೂ
ಯೆತ್ತೀನ ಮೇಲಿನ್ನೇ ಕೂತಾನೇ ಯೇಗೇ
ಮನಿಗೇ ನಾದಾರೇ ಬಂದಾನೆ ಮಗನೇ
ಮನಿಗೇ ನಾದಾರೇ ಬಂದಾನೆ ಯೇಗೇ ‖ 34 ‖
"ಕೇಳಲ್ ಕೇಳಲ್ಲೇ ತಾಯಮ್ಮ ನೀನೂ
ನಿನ್ನಾಲು ಮಗನೇ ಬಂದಾನೆ ಯೇಗೆ "
ಅಟ್ಟೊಂದ ಮಾತಾ ಕೇಳಾದೆ ತಾಯೀ
ಕೂಂಬನ ಗಿಂಡ್ಯಲ್ಲೀ ನೀರಾನೆ ಕೊಟ್ಟಿತೂ ‖ 35 ‖
"ಕೈಕಾಲ ಮೋರೀ ತೊಳ್ದಾರು ಬಾರೋ"
ಕೈಕಾಲ ಮೊಕವಾ ತೊಳ್ದಾನೆ ಮಗನೇ
ಶಣ್ಣಾ ಮೊಕದಿಂದಾ ವಳಗೇನು ಬಂದಾ
"ಕೇಳಲ್ ಕೇಳಲ್ಲೋ ನನ್ನಾಲು ಮಗನೇ ‖ 36 ‖
ತಂಗೀ ಕರ್ವಲ್ಲಿ ಹೋಗೀದೆ ಮಗನೇ
ವಬ್ಬನಾದಾರೇ ಬಂದ್ಯಲ್ಲೋ ಮಗನೇ
ತಂಗೀ ನಾದಾರೇ ಕರ್ಕಂಡಿ ಬರಲಿಲ್ಲ
ತಂಗೀಯ ಸುದ್ದೀ ಯೇನಾಯ್ತೋ ಮಗನೇ? ‖ 37 ‖
ಕೇಳಲ್ ಕೇಳಲ್ಲೋ ನನ್ನಾಲು ಮಗನೇ,
ವಂದಾಲು ಮಗನೇ ವಂದಾಲು ಮಗಳೂ
ಇಂತಂಬು ಮೋಸಾ ಯಾಕಂತು ಮಾಡದೇ?
ತಂಗೀ ಮೋರೀಯಾ ಹ್ಯಂಗೇ ನೋಡಿದೇ? ‖ 38 ‖

ಬಾವನ್ ಕೈಲಿ ಯೇನಾ ನುಡಿಬೇಕು ನಾವು?"
ಅಟ್ಟೊಂದ ಮಾತಾ ಹೇಳದೆ ತಾಯೀ
'ನಿನ್ನಾ ಸಂಗಾದೇ ಕಳಗೂದೆ ಯಲ್ಲಾ'
ಅಳಿಯ ಗಾದಾರೇ ಕರ್‌ಯಾನ ಕೊಟ್‌ತೂ ‖ 39 ‖
ಅಳ್ಯಾನಾದಾರೇ ಬಂದಾನೆ ಲೇಗೇ
"ಕೇಳಲ್ ಕೇಳಲ್ಲೇ ನಮ್ಮಲು ಅತ್ತೇ
ನಾಕೂ ದಿವ್ಸಾಕೇ ಕಳ್ಸಬೇಕು ಅಂದೇ
ನಾಕೂ ದಿವ್ಸಾಕೇ ಕಳ್ಸಲೆಲ್ಲ ಅತ್ತೇ ‖ 40 ‖
ಬಾವಾನಾದಾರೇ ಯಲ್ಲೀಗೆ ಹೋದಾ?"
"ಕೇಳಲ್ ಕೇಳಲ್ಲೋ ನಮ್ಮಲು ಅಳಿಯಾ,
ಬಾವಾನಾದಾರೇ ಯೆತ್ಲಾಗೆ ಹೋದನೋ
ನಿನ್ನಾಲು ಹೆಂಡತೀ ಕರ್ಕಂಡಿ ಹೋಗೂ" ‖ 41 ‖
ಅಟ್ಟೊಂದ ಮಾತಾ ಕೇಳಾನೆ ಅಳಿಯಾ
"ವೋಟಾ ಕಾದಾರೇ ನಾನಿಲ್ಲೂದೆಲ್ಲಾ"
ಅಟ್ಟೊಂದ ಮಾತಾ ಕೇಳಾದೆ ಮಗಳೂ
"ಕೇಳಲ್ ಕೇಳಲ್ಲೇ ನನ್ನಾಲು ತಾಯೇ, ‖ 42 ‖
ಇಂದೀಗೆ ರುಣವೇ ತೀರೀತು ನನಗೇ ತಾಯೇ
ನಾಹೋಗೆ ನನ್ನಾ ಅರಮನೆಗೆ ತಾಯೇ
ಇನ್ನೇನಿನ್ ಮಗನಾ ಕಳ್ಸಾಲು ಬೇಡಾ ‖ 43 ‖
ಮಗನಾ ಕೋಡಿನ್ನೇ ಸುಕದಲ್ಲಿ ಉಳಿಯೇ"
ಅಟ್ಟೊಂದ ಮಾತಾ ಹೇಳಾದೆ ಮಗಳೂ
ಗಂಡಾನ ಬಿನ್ನಾ ಹಿಡದಾದೆ ಅವಳೂ
"ಕೇಳಲ್ ಕೇಳಲ್ಲೇ ನನ್ನಾಲು ಮಡದೀ ‖ 44 ‖
ನಿಮ್ಮಣನ ಸುದ್ದೀ ಯೇನಾಯ್ತೇ ಮಡದೀ?
ನಾಕೂದಿವಸಾಕೇ ಬರ್ವಳು ನೀನೂ

ಯೆಂಟೂ ದಿವ್ಸಾವೇ ಕಳ್ದೀತು ನಿನಗೇ
ಅಪ್ಪನ ಮನಿ ಆಸೀ ಬಿಡಬೇಕೂ ನೀನೂ" ‖ 45 ‖
"ಕೇಳಿರಿ ಕೇಳಿರೀ ಯಲ ಸ್ವಾಮೀ ನೀವೂ
ಅಣ್ಣಾ ಗಾದಾರೇ ಸೀಕೂ ಆಯೀತೂ
ಅದರಿಂದ ನನಗೇ ತಡವಾಗಿ ಹೋಯ್ತು
ತಮ್ಮ ಮನಸೀಗೇ ಬೇಸಕಿ ಬೇಡಾ" ‖ 46 ‖

- **ಕೆಲವು ಪದಗಳ ವಿವರಣೆ**

ಕಲ್ಲಾನ ಹುಳು = ಕಲ್ಲಲ್ಲಿದ್ದ ಹಾವು, ಸರ್ಪ      ಬೇಸಕಿ = ಬೇಜಾರು

▪ ಹೇಳಿದವರು: **ದಿ. ಗೌರಿ ಶಿವಪ್ಪನಾಯ್ಕ,** ಹೆಗಡೆ ಊರು.

⌘

# ನನಗೇ ಕುದ್ರಿಗೇ ವಂದೇ ಸೊಡ್ಲೇ

(ಪ್ರತಿ ಸಾಲಿನ ಕೊನೆಗೆ 'ತಂದೇ ನಾನಾ' ಎನ್ನಬೇಕು)

ಹಾಲಪಟ್ಟಣದಾ ಹಾಲಪ್ಪ ದೊರೆಯೋ ‖ ತಂದೇ ನಾನಾ ‖
ಹಾಲಪ್ಪ ದೊರಿಗೇ ಮೂರು ಜನ ಹುಡುಗ್ರು
ಹಾಲಪ್ಪ ದೊರಿಗೇ ಮುಪ್ಪಿನ ಕಾಲ ‖ 1 ‖
ಹುಡುಗರಿದ್ದೀ ಬುದ್ದೀ ಯಲ್ಲ
ವಳ್ಳೆ ಉಗ್ಗುರಾಣೀ ಕರಿಸನೆ ನೋಡೂ
"ಕೇಳಲೆ ಕೇಳೋ ಉಗ್ಗೂರಾಣೀ ‖ 2 ‖
ನನಗೇನಾದ್ರೇ ಮುಪ್ಪಿನ ಕಾಲ
ನನಗೇನಾದ್ರೇ ಮೂರು ಜನ ಹುಡುಗರು
ಇದ್ದಿಲ್ಲಾ ಬುದ್ದೀ ಯೆಲ್ಲಾ ‖ 3 ‖

ಸಾನಬವ್ರಾ ಕರೆಸಲೇ ಬೇಕು
ವಳ್ಳ ಇದ್ದೀ ಬುದ್ದೀ ಕಲಿಸಲೆ ಬೇಕು"
ಅಟ್ಬೊಂದು ಮಾತಾ ಕೇಳಿದ ಉಗ್ರಾಣಿ ‖ 4 ‖
ವಳ್ಳ ಸಾನಬವ್ರಾ ಮನೀಗೋದ
"ಕೇಳಲಿ ಕೇಳೀ ಸಾನಬವ್ರೇ
ಹಾಲಪ ದೊರಿಯಾ ಕರಿಯಾ ನಿಮಗೇ" ‖ 5 ‖
ಅಟ್ಬಂದು ಮಾತಾ ಕೇಳಿರು ಸಾನಬವ್ರು
ಮಾಳುಗಿ ವಳುಗೇ ನಡ್ದರು ನೋಡೂ
"ಕೇಳಲ್ ಕೇಳೇ ನನ್ನಾ ಮಡದೀ ‖ 6 ‖
ನನಗೇನಾದ್ರೇ ದೊರಿನ ಕರಿಯೇ
ಗಾಡದಿಂದೇ ಲಡೂಗಿಯ ಮಾಡು"
ಅಟ್ಬೊಂದು ಮಾತಾ ಕೇಳಿತು ಮಡದೀ ‖ 7 ‖
ಗಾಡಾದಿಂದೇ ಲಡಗೀ ಮಾಡ್ತೂ
"ಕೇಳಲೆ ಕೇಳೀ ನನ್ನಾ ಸ್ವಾಮೀ,
ಅಡ್ಗೀನಾದ್ರೇ ಲಾದಿತು ನೋಡೀ ‖ 8 ‖
ಉಟಾಕಾದ್ರೇ ಬರಲುಬಹುದು"
ಅಟ್ಬೊಂದು ಮಾತಾ ಕೇಳಿರು ಸಾನಬವ್ರು
ಊಟಾಕಾದ್ರೇ ನೆಡ್ದರು ನೋಡು ‖ 9 ‖
ಊಟಾ ಉಪಚರ ಮಾಡವ್ರೇ
"ಕೇಳಲೆ ಕೇಳೇ ನನ್ನಾ ಮಡುದೀ
ನಾನೂ ಬರುಕೇ ಮೂರು ತಿಂಗ್ಳೆ ತಡವೇ" ‖ 10 ‖
ಅಟ್ಬು ಮಾತಿನ್ನೇ ಹೇಳದ್ರೇ
ದಬತರ ಪೆಟಗೀ ಹೋತ್ತವ್ರೇ
ಸಾನಬವ್ರೂ ಮುಂದಾಗೀ ‖ 11 ‖
ಉಗುರಾಣಿ ಹಿಂದಾಗೀ
ಹಾಲಪ್ಪ ದೊರಿಯಾ ಮನೆಗೇ ಬಂದ್ರು
"ಕೇಳಲೆ ಕೇಳೀ ಹಾಲಪ್ಪ ದೊರಿಯೇ ‖ 12 ‖

ನಮ್ಮಾ ಕರದಾ ಕಾರಣವೇನು?"
"ಕೇಳಿ ಕೇಳೀ ಸಾನಬವ್ರೇ
ನನಗೇನಾದ್ರೇ ಮುಪ್ಪಿನ ಕಾಲಾ ‖ 13 ‖
ನನಗೇನಾದ್ರೇ ಮೂರು ಜನ ಹುಡುಗರು
ಇದ್ದೀ ಯಿಲ್ಲಾ, ಬುದ್ದೀ ಯೆಲ್ಲಾ
ಬರವೂ ಇಲ್ಲ, ಸರವೂ ಇಲ್ಲಾ ‖ 14 ‖
ಬರವೂ ಸರವೂ ಕಲಿಸಲು ಬೇಕು
ಇದ್ದೀ ಬುದ್ದೀ ಕಲಿಸಲು ಬೇಕು"
ಲಟ್ಟ ಮಾತಿನ್ನೆ ಕೇಳಿರು ಸಾನಬವ್ರು ‖ 15 ‖
ಇದ್ದೀ ಬುದ್ದೀ ಕಲಿಸವ್ರೇ
ಬರವೂ ಸರವೂ ಕಲಿಸವ್ರೇ
"ಕೇಳಲಿ ಕೇಳೀ ಹಾಲಪ್ಪ ದೊರಿಯೇ, ‖ 16 ‖
ಲಿದ್ದೀ ಬುದ್ದೀ ಕಲಿಸವ್ನೇ
ಬರವೂ ಸರವೂ ಕಲಿಸವ್ನೇ
ಮತ್ತೇನಿನ್ನೊ ಮಾಡಲಿ ಬೇಕು?" ‖ 17 ‖
"ಕೇಳಲೆ ಕೇಳೀ ಸಾನಬವ್ರೇ
ಅಡವೀಗಾದ್ರೇ ಹೋಗಲಿ ಬೇಕೂ
ಗರಡೀ ಕಂಬಾ ಕಡಿಸಲು ಬೇಕೂ ‖ 18 ‖
ಗರಡೀ ಸಾದಕ ಕಲಿಸಲಿ ಬೇಕೂ
ತಲಿಯೇಲಾದ್ರೂ ಕೇಳುಗೇ ಮಾಡೀ
ಕಾಲೇನಾದ್ರೇ ಮೇಲೇ ಮಾಡೀ ‖ 19 ‖
ಗರಡೀ ಕಂಬಾ ಹತ್ತಲೆ ಬೇಕೂ
ಗರಡೀ ಸಾದಕ ಕಲಿಸಲೆ ಬೇಕೂ"
ಅಂದಿಲಿನ್ನೇ ಹೇಳವ್ರೇ; ‖ 20 ‖
ಅಟ್ಟೊಂದು ಮಾತಾ ಕೇಳವ್ರೇ
ಆಳ ಮಕ್ಕಾ ಕರೀಸವ್ರೇ
ಆಳ ಮಕ್ಕು ಮುಂದಾಗೀ ‖ 21 ‖

ಸಾನಬವ್ರೂ ಲಿಂದಾಗೀ
ಲಡವೀಗಾದ್ರೆ ಹೋಗರೆ ನೋಡೂ
ಗರಡೀ ಕಂಬಾ ಕಡೀಸವ್ರೇ ॥ 22 ॥
ನಾಲ್ಕೂ ಜನ ಹೊತ್ತವ್ರೆ
ಹಾಲಪ್ಪ ದೊರಿಯಾ ಮನಿಗೇ ಬಂದ್ರು
ಗರಡೀ ಕಂಬಾ ಬ್ಲುಗೂದವ್ರೇ ॥ 23 ॥
ಹಾಲಪ್ಪ ದೊರಿಯಾ ಹುಡುಗರಿಗೂ
ಗರಡೀ ಸಾದಕ ಕಲಿಸೂರೂ
ತಲಿಯೇನಾದ್ರೂ ಕೆಳಗೇ ಮಾಡೀ ॥ 24 ॥
ಕಾಲೇನಾದ್ರೇ ಮೇಲೆ ಮಾಡದ್ರೂ
ಗರಡೀ ಕಂಬಾ ಹತ್ತವ್ರೇ
ಮೂರೂ ಜನಾ ಹುಡುಗರೂ ॥ 25 ॥
ಗರಡೀ ಸಾದಕ ಕಲಿತವ್ರೇ
"ಕೇಳಲೆ ಕೇಳೀ ಹಾಲಪ್ಪ ದೊರಿಯೇ
ಗರಡೀ ಸಾದಕ ಕಲಿಸೀದೇ ॥ 26 ॥
ಇನ್ನಾದರ್ಯೇನೂ ಮಾಡಾಬೇಕೂ?
ದಂಡಿನ ಸಾದಕ ಕಲಿಸಲು ಬೇಕೂ"
ದಂಡಿನ ಸಾದಕ ಕಲಿಸೀರೂ ॥ 27 ॥
"ನಿತ್ತಿ ಬಂದಾ ದಂಡಿನ್ನೇ
ನಿತ್ತಲ್ಲೇ ಕಡೀ ಬೇಕೊ
ಮುಗುಲರಾ ದಂಡಿನ್ನೇ ॥ 28 ॥
ಮುಡುಗಿನ್ನ ಕಡಿಬೇಕೋ
ತುರುಕೂರಾ ದಂಡಿನ್ನೇ
ತುದಿಗಾಲಲಿ ಕಡೀಬೇಕೋ ॥ 29 ॥
ಹಾರಾವರಾ ದಂಡಿನ್ನೆ
ಹಾರಾಡೀ ಕಡೀಬೇಕೋ"
ಲಂದಿನ್ನೆ ಹೇಳೀರು ॥ 30 ॥

“ಕೇಳೀ ಕೇಳಿ ಹಾಲಪ್ಪ ದೊರಿಯೇ
ದಂಡಿನ ಸಾದಕ ಕಲಿಸವ್ನೇ”
ಲಂದಿನ್ನೇ ಹೇಳಿರು ‖ 31 ‖
ಹಾಲಪ್ಪ ದೊರಿಯೂ ಮನಿಗೇ ಹೋದ್ರೂ
ಹಾಲಪ್ಪ ದೊರಿಯೂ ಯೇನಾ ಮಾಡಾರೇ?
ಅವ್ರ್‌ಗೀನ್ನೇ ಬೇಕಷ್ಟು ಕೊಟ್ಟ ‖ 32 ‖
ಸಂಬಳಾದ್ರೂ ಕೊಟ್ಟಿದ್ದ
ಸಾನಬವ್ರು ಮನೀಗೋದ್ರು
ಹಾಲಪ್ಪ ದೊರಿಯಾ ಹುಡುಗರಿಗೇ ‖ 33 ‖
ಊಟಕಾದ್ರೂ ಕುಂತಿರೂ
ಅರ್ದ ಊಟಾ ಮಾಡವ್ರೇ
ದಂಡೀನ ಕರೆ ಬಂತೂ ‖ 34 ‖
“ಕೇಳಲ್ ಕೇಳೋ ನನ್ನ ತಂದೇ
ನಮ್ಗೇ ಆದ್ರೂ ದಂಡಿನ ಕರೆಯಾ”
ಲಂದಿನ್ನೆ ಹೇಳವ್ರೇ ‖ 35 ‖
ಕೈಬಾಯ್ ತೊಳುದೀ ಕುಂತವ್ರೇ
ಹಾಲಪ್ಪ ದೊರಿಯಾ ಯೇನ ಮಾಡ್ದಾ?
ಮಾಳೂಗಿ ವಳೂಗೋದ ‖ 36 ‖
ನೆಲಮಾಳುಗಿ ಕದಾ ತೆಗದಾ
ಮೂರೂ ಪಟವಾ ಲೆಕ್ಕಿದಾ
“ಕೇಳಲೆ ಕೇಳೀ ಹೂಡೂಗರಿಯಾ ‖ 37 ‖
ಪಟವಾನಾರೂ ಹಿಡಿ”ರಂದಾ
ಮೂರೂ ಜನಹುಡೂಗರಿಗೂ
ಮೂರು ಪಟವಾ ಕೊಟ್ಟೀದಾ ‖ 38 ‖
“ಕೇಳಲ್ ಕೇಳೋ ನನ್ನಾ ತಂದೇ,
ಹೋಗಿ ಬಾರಂದೀ ವೀಳ್ಯಕೊಡೋ”
“ಹೋಗಿ ಬಾರಂ”ದೀ ವೀಳ್ಯ ಕೊಟ್ಟಾ ‖ 39 ‖

ಪಟುವನಾದ್ರೇ ತಡುಕಂಡೂ
ವಸ್ತ್ರಗಿಸ್ತ್ರ ದರಿಸಿಕಂಡೂ
ಕುದ್ರೇ ಸಾಲಿಗೆ ನೆಡಿದವ್ರೆ ‖ 40 ‖
ಮೂರು ಜನಿನ್ನೆ ಕುದ್ರೀ ಹೇರದ್ರೂ
ಕಿರಿಯವಿನ್ನೇ ಲೇನ ಮಾಡ್ದಾ?
"ನನ್ನ ಮಂಜನಂಬೂ ಕುದ್ರೀ ಕೇಳೇ ‖ 41 ‖
ಮೂರು ತಿಂಗಳಾದೇ ಮೂರು ದಿವ್ಸಕ್ಕೆ ನೇಡೀ
ಮೂರು ತಿಂಗಳಾದೆ ಮೂರ ದಿವ್ಸಕೆ ನಡಿದಾರೆ
ನನಗೇ ನಿನುಗೇ ವಂದೇ ಸೊಡ್ಲೇ" ‖ 42 ‖
ಲಟ್ಕೊಂದೇ ಹೇಳೀದ
ಕುದ್ರೀನಾರೂ ಹಾರಸಿದ್ರು
ದಂಡೀನ ರಾಜಿಕೋಗಿ ನಿಂತವ್ರೇ ‖ 43 ‖
ಹಾರರ ದಂಡೂ ಹಾರತೆ ಬಂತೂ
ಹಾರರ ದಂಡಾ ಹಾರೇ ಕಡದ್ರೂ
ಮುಗಲರ ದಂಡೂ ಮುಡುಗೇ ಬಂತೂ ‖ 44 ‖
ಮುಗಲರ ದಂಡಾ ಮುಡುಗೇ ಕಡದ್ರೂ
ತುರುಕರ ದಂಡೂ ತುದಿಕಾಲಲಿ ಬಂತೂ
ತುರಕರ ದಂಡಾ ತುದಿಕಾಲಲಿ ಕಡಿದ್ರೂ ‖ 45 ‖
ದಂಡಂಬು ದಂಡಟ್ಟು
ಸವ್ರಾಣೀ ಮಾಡಿರು
ಗಾಳಿ ಹವಕೇ ಹೋಗೇ ನಿಂತ್ರು ‖ 46 ‖
ಕಳ್ಳರು ಕಾಕರು
ಮರುಸಾರಿ ನಿಂದಿರು
ಗುಂಡನಾದ್ರೆ ಹೊಡಿದವ್ರೆ ‖ 47 ‖
ಕಿರಿಯವ್ಗೇ ತಾಗಿತು
'ಹರಹಾರ' ನಂದನೇ
ವಳ್ಳಯೆದ್ಯನಾದ್ರೂ ಬಿಗುದಿದಾ ‖ 48 ‖

“ಕಳ್ಳರ ಪೋಕರ
ಮರುಸಾರಿ ನಿಂತಿರೋ
ನನ್ನಂತೆ ಗಂಡೂಸರಾದ್ರೆ ‖ 49 ‖
ನನ್ನೆದುರಿಗೆ ಬರುತಿದ್ರಿ
ಕಳ್ಳರಾಗಿ ಮರುಸಾರಿ ನಿಂತೀ
ಗುಂಡನಾದ್ರೂ ಹೊಡುದಿರೀ ‖ 50 ‖
ಹೆಣ್ ಹೆಂಗ್ಸಿಕಿಂತೂ ಕಡ್ಯೋ ನೀವು?”
ಲಂದಿಟ್ಟು ಹೇಳಿದ
“ಕೇಳಲೆ ಕೇಳೆ ಮಂಜಾ ಕುದುರೀ ‖ 51 ‖
ಮೂರು ತಿಂಗಳಾದೀ ಮುರು ದಿವ್ಸಕ್ ನೆಡಿಯೇ
ನನಗೇ ನಿನುಗೇ ವಂದೇ ಸೊಡ್ಲೇ”
ಅಂದಿನ್ನೆ ಹೇಳವ್ನೇ ‖ 52 ‖
ಒಂದು ಪತ್ರನಾರೂ ಬರದವ್ನೇ
ಕುದ್ರೀ ಕೊಳ್ಳಿಗೆ ಕಟ್ಟವ್ನೇ
ಅಲ್ಲಣ್ಣದೀರು ಯೇನ ಮಾಡೆತ್ರೋ? ‖ 53 ‖
“ಕೇಳಲೆ ಕೇಳೋ ನನ ತಮ್ಮ,
ನಾವೂ ಮೂರು ಜನಲುಟ್ಟೀಕಂಡೀ
ನಾವಿಬ್ಬರಿನ್ನೇ ಉಳೀಬೇಕೋ?” ‖ 54 ‖
ಜಪ್ಪಕಂತ್ರು ಹೊಯ್ಕಂತ್ರು
“ಕೇಳಲೆ ಕೇಚುಗ ನನ್ನಲಣ್ಣಾ,
ನಾನ ವಬ್ಬವಾರೂ ಸತ್ತರೆ ‖ 55 ‖
ನೀವಿಬ್ಬರಿನ್ನೇ ಲಿದ್ದೀರಿ
ಮನಿಗೆ ನಾದ್ರೂ ಹೋಗುವ ಲಣ್ಣಾ”
ಲಂದಿನ್ನೇ ಹೇಳವ್ರೇ ‖ 56 ‖
ಮನಿಗೇನಾದ್ರೆ ಬಂದವ್ರೆ
ಮೂರು ತಿಂಗಳಾದೀ ಮೂರು ದಿವ್ಸಕೆ ನೆಡಿತೂ
“ಕೇಳಲೆ ಕೇಳೇ ನನ್ನಾ ತಾಯೇ ‖ 57 ‖

ಜೇಜೀಗಾರುತಿ ತಕಾಬಾರೇ”
ತಾಯಿನಾದ್ರೆ ಯೇನ ಮಾಡ್ತೂ
ಆರುತ್ಯಾರೂ ತಂದಿತು ‖ 58 ‖
ಲಾರುತಿಯಾ ಕಂಡಿರು ನೋಡು
ಕೆಳುಗಿನಾದ್ರೆ ಲಿಳುದಿದಾ
ಲೈದಿಯನಾದ್ರೂ ಬಿಚ್ಚಿದಾ ‖ 59 ‖
ಮರದೀ ನಾದ್ರೇ ಬಿದ್ದವ್ನೇ
ಅವ್ನೇನಾದ್ರೇ ಮೊದ್ಲೇ ಬಿದ್ದಾ
ಕುದ್ರೀ ನಾದ್ರೇ ಕಡಿಗೇ ಬಿತ್ತೂ ‖ 60 ‖
ಯೆಯ್ದು ಜನರಾ ಜೀವ ಹೋಯ್ತೂ
ತಾಯೀ ತಂದೇ ಜಪಲಾಕಂತ್ರೂ
ಕುದ್ರೀ ಕುತ್ತಗಿನ ಚೀಟಿ ವೋದ್ರೂ ‖ 61 ‖
“ನನಗೇ ಕುದ್ರಿಗೆ ವಂದೇ ಸೊಡ್ಲೇ
ವಂದೇ ಸೊಡ್ಲಿಲಿ ಸುಡಬೇಕೂ”
ಲಂದೀ ನಾದ್ರೇ ಬರುದವ್ನೇ ‖ 62 ‖
ಅದ್ರಿನ್ನೇ ಲೋದೀ ಕಂಡ್ರು
ವಂದೇ ಸೊಡ್ಲೀ ಮಾಡೇ ಸುಟ್ರು
ಲಿದ್ದಾ ಮಗುದೀರು ಮನಿಲೇ ಉಳದ್ರೂ ‖ 63 ‖

- **ಕೆಲವು ಪದಗಳ ವಿವರಣೆ**

ಇದ್ದಿ = ವಿದ್ಯೆ
ಗಾಡದಿಂದ = ಬೇಗನೆ, ಗಡಬಡೆಯಿಂದ
ಸುವ್ರಾಣಿ = ಸವರಿದರು, ನಾಶಮಾಡಿದರು
ಯೆದ್ಯ = ಲೈದ್ಯ = ಶಲ್ಯ
ಬರವು = ಬರವಣಿಗೆ
ಲ್ಹುಗೂದವ್ರೆ = ಹುಗಿದರು
ಮರುಸಾರಿ = ಮರೆಯಲ್ಲಿ
ಲೋದಿ = ಜದಿ

▪ ಹೇಳಿದವರು: **ಸೌ| ಮಾಸ್ತಿ ರಾಮನಾಯ್ಕ,** ಮೂರೂರು, ವಸ್ತಿ: ಹೆಗಡೆ ಊರು.

# ದುಡುಕಿದ ಕೆಡುಕು
## (ಅತ್ತೆ ನಾಗಮ್ಮ, ಸೊಸೆ ಹೊನ್ನಮ್ಮ)

(ಪ್ರತಿ ಸಾಲಿನ ಕೊನೆಗೆ 'ಲೇಗಿಣಿ ಯೇಗಿಣಿಯೇ' ಎನ್ನಬೇಕು)

ಅತ್ತೆ ನಾಗಮ್ಮ, ಸೊಸೆ ಹೊನ್ನಮ್ಮ ಲೇಗಿಣಿ ಯೇಗಿಣಿಯೇ
ಮಗುಗೆ ಆದಾರೆ ದಂಡಿನ ಕರಿಯ ಲೇಗಿಣಿ ಯೇಗಿಣಿಯೇ ‖ 1 ‖
"ಕೇಳಲೆ ಕೇಳಲ್ಲೇ ನನ್ನಲು ತಾಯೆ ಲೇಗಿಣಿ ಯೇಗಿಣಿಯೇ
ನನ್ಗಲಾದಾರೂ ದಂಡಿನ ಕರಿಯ ಲೇಗಿಣಿ ಯೇಗಿಣಿಯೇ ‖ 2 ‖
ಸೊಸಿಯನಾದಾರೂ ಬೆಂಕಿಗೆ ಕಳ್ಗ ಬೇಡಾ ಲೇಗಿಣಿ ಯೇಗಿಣಿಯೇ
ಸೊಸಿಯ ನಾದಾರೂ ನೀರಿಗೆ ಕಳ್ಗ ಬೇಡಾ" ಲೇಗಿಣಿ ಯೇಗಿಣಿಯೇ ‖ 3 ‖
ಅಟ್ಟಂಬೂ ಮಾತಾ ಹೇಳನೆ ಲರ್ಸೂ ಲೇಗಿಣಿ ಯೇಗಿಣಿಯೇ
ಅವಾರುಲಿನ್ನೇ ದಂಡೀಗೆ ಹೋಗವ್ನೇ ಲೇಗಿಣಿ ಯೇಗಿಣಿಯೇ ‖ 4 ‖
ಬಳುಗಾರಾ ಇನ್ನೇ ಬಳಿಯ ತಂದವ್ನೆ ಲೇಗಿಣಿ ಯೇಗಿಣಿಯೇ
"ಕೇಳಲೆ ಕೇಳಲ್ಲೇ ನನ್ನಲು ಸೊಸಿಯೇ ಲೇಗಿಣಿ ಯೇಗಿಣಿಯೇ ‖ 5 ‖
ಬಳುಗಾರಾ ಬಂದವ್ನೇ ಬಳಿನಾರು ಲಾಕವ್ವ ಲೇಗಿಣಿ ಯೇಗಿಣಿಯೇ
ದಣಿಯ ಇರ್ಸವಲ್ಲಿ ತುಸುನಾರು ಇರಸೂ" ಲೇಗಿಣಿ ಯೇಗಿಣಿಯೇ ‖ 6 ‖
ಬಳಿನಾರೂ ಹಾಕ್ದಮೇನೇ ಸಪ್ನಾರೂ ಬಿದ್ದೀ ಲೇಗಿಣಿ ಯೇಗಿಣಿಯೇ
ದಂಡೀಗೆ ಲೋಗೀ ಬಂದನೇ ಲರಸು ಲೇಗಿಣಿ ಯೇಗಿಣಿಯೇ ‖ 7 ‖
ದಂಡಿಗೋದ ಗಂಡ ಬಂದನೆ ಲಂದೀ ಲೇಗಿಣಿ ಯೇಗಿಣಿಯೇ
ಮಡುದೀಲಾದಾರೂ ಲಾರುತಿ ತಂತೂ ಲೇಗಿಣಿ ಯೇಗಿಣಿಯೇ ‖ 8 ‖
ತಂದ ಲಾರುತಿಯ ಮುಟ್ಟಲುಲಿಲ್ಲ ಲೇಗಿಣಿ ಯೇಗಿಣಿಯೇ
ಹತ್ತೀದ ಜೇಜೀ ಇಳಿದೀದರಸಗೋಳು ಲೇಗಿಣಿ ಯೇಗಿಣಿಯೇ ‖ 9 ‖
ಜಗ್ಲಿ ಮೇನೆ ಹೋಗೀ ಕುಂತಲರ್ಸ ಗೋಳು ಲೇಗಿಣಿ ಯೇಗಿಣಿಯೇ
"ಕೇಳಲ್ ಕೇಳೆಲ್ಲೊ ನನ್ನಲು ಮಗನೇ ಲೇಗಿಣಿ ಯೇಗಿಣಿಯೇ ‖ 10 ‖

ತಂದ ಲಾರುತಿಯ ಮುಟ್ಟಲುಲಿಲ್ಲ ಲೇಗಿಣಿ ಯೇಗಿಣಿಯೇ
ಹೋಗಿ ಇನ್ನಾರೇ ಕುಂತೀ ಬಿಟ್ಟಿದೇ ಲೇಗಿಣಿ ಯೇಗಿಣಿಯೇ ‖ 11 ‖
ಅದ ಕಾರಣವಾ ನಮಗೇಳು ಮಗನೇ" ಲೇಗಿಣಿ ಯೇಗಿಣಿಯೇ
ಲಟ್ಟಂಬೂ ಮಾತಾ ಕೇಳದೆ ತಾಯಿ ಲೇಗಿಣಿ ಯೇಗಿಣಿಯೇ ‖ 12 ‖
ಬಚ್ಚಲಕೆ ಕಿಚ್ಚ ಮಗುದದೆ ನೋಡು ಲೇಗಿಣಿ ಯೇಗಿಣಿಯೇ
ಬಚ್ಚಲಕೆ ಕಿಚ್ಚ ಯರದಳು ನೋಡು ಲೇಗಿಣಿ ಯೇಗಿಣಿಯೇ ‖ 13 ‖
ಗಾಡದಿಂದಡಗೀ ಅನುಮಾಡ್ತು ತಾಯೀ ಲೇಗಿಣಿ ಯೇಗಿಣಿಯೇ
"ಕೇಳಲೆ ಕೇಳಲ್ಲೋ ನನ್ನಲು ಮಗುನೇ ಲೇಗಿಣಿ ಯೇಗಿಣಿಯೇ ‖ 14 ‖
ಕೇಳಲ್ ಕೇಳಲ್ಲೋ ನನ್ನಲು ಮಗುನೇ ಲೇಗಿಣಿ ಯೇಗಿಣಿಯೇ
ಲೂಟಕಾದಾರೂ ಹೋಗುಬಹುದೊ" ಲೇಗಿಣಿ ಯೇಗಿಣಿಯೇ ‖ 15 ‖
ಅಟ್ಟಂಬೂ ಮಾತಾ ಕೇಳವ್ನೇ ಮಗ ಲೇಗಿಣಿ ಯೇಗಿಣಿಯೇ
ವೂಟಕಾರೂವಾ ಯೆದ್ದಿ ಹೋಗವ್ನೇ ಲೇಗಿಣಿ ಯೇಗಿಣಿಯೇ ‖ 16 ‖
ಆರ್ ತುತ್ತುಂಬಲ್ಲೀ ಮೂರ್ ತುತ್ತ ಉಂಡನೇ ಲೇಗಿಣಿ ಯೇಗಿಣಿಯೇ
"ಕೇಳಲೆ ಕೇಳಲ್ಲೇ ನನ್ನಲು ಸೊಸಿಯೇ ಲೇಗಿಣಿ ಯೇಗಿಣಿಯೇ ‖ 17 ‖
ಲೂಟಕಾದಾರೂ ಬರಬಹುದು ಸೊಸಿಯೇ" ಲೇಗಿಣಿ ಯೇಗಿಣಿಯೇ ‖ 18 ‖
"ನಿನ್ ವೋಟ ಆದಾರೇ ನನಗೇನು ಬೇಡ ಲೇಗಿಣಿ ಯೇಗಿಣಿಯೇ
ನಿನ ಬಳಿಯ ಇಟ್ಟದ್ದು ನನಗದೆ ಮೋಸಾ?" ಲೇಗಿಣಿ ಯೇಗಿಣಿಯೇ ‖ 19 ‖
ಪಟ್ಟಿಮಂಚಕೇ ನಡೆದಳು ಮಡದೀ ಲೇಗಿಣಿ ಯೇಗಿಣಿಯೇ
ಮದ್ದುದಾತುರಿಯೇ ಆಗಿತು ನೋಡು ಲೇಗಿಣಿ ಯೇಗಿಣಿಯೇ ‖ 20 ‖
ಒಳಗಿನ್ನ ಹೋಗೀ ಬಿದ್ದೀದಲರಸೂ ಲೇಗಿಣಿ ಯೇಗಿಣಿಯೇ
ಪಟವ ಆದಾರೇ ತಡದನೆ ನೋಡು ಲೇಗಿಣಿ ಯೇಗಿಣಿಯೇ ‖ 21 ‖
ಕೊಚ್ಚಿ ಕೊಚ್ಚನ್ನೇ ಸಂವ್ರಣಿ ಮಾಡೀದ ಲೇಗಿಣಿ ಯೇಗಿಣಿಯೇ
ಕೊಚ್ಚಿ ಕೊಚ್ಚನ್ನೇ ಮುಟ್ಟಿಯ ತುಂಬಿ ಲೇಗಿಣಿ ಯೇಗಿಣಿಯೇ ‖ 22 ‖
ಗದೀದ ಹೆರಗೆ ಬಂದೀದ ಲೇಗಿಣಿ ಯೇಗಿಣಿಯೇ
ಯೆಳ್ಳಿಯ ಮರವಾ ಹತ್ತೀದ ಹೋಗೀ ಲೇಗಿಣಿ ಯೇಗಿಣಿಯೇ ‖ 23 ‖

ಯೆಳ್ಳಿಯ ಮರನಾ ಮೇಲೆ ಕೂತವ್ನೆ ನೋಡು ಲೇಗಿಣಿ ಯೇಗಿಣಿಯೇ
ಹಪ್ಗಿಡ್ನ ಲೇಸ ತಾಳವ್ನೆ ನೋಡು ಲೇಗಿಣಿ ಯೇಗಿಣಿಯೇ ‖ 24 ‖
ಯೆಳ್ಳಿಯ ಮರನಾ ಮೇಲೆ ಹೋಗಿ ಕುಂತವ್ನೇ ಲೇಗಿಣಿ ಯೇಗಿಣಿಯೇ
ಬೆಳ್ಗೆ ಆದಾರೂ ಯೇಳೂಲಿಲ್ಲ ಲೇಗಿಣಿ ಯೇಗಿಣಿಯೇ ‖ 25 ‖
ಆಚೆ ಮನ್ಯವ್ರಾ, ಇಚೇ ಮನ್ಯವ್ರಾ ಲೇಗಿಣಿ ಯೇಗಿಣಿಯೇ
ಆಚೆ ಮನಿ ಅಕ್ಕೂದೀರು ಈಚೆ ಮನಿ ತಂಗುದೀರು ಲೇಗಿಣಿ ಯೇಗಿಣಿಯೇ ‖ 26 ‖
"ಸೊಸಿಯು ಹೊನ್ನಮ್ಮ ಯೆಲ್ಲೀಗ್ ಹೋಗೀತು?" ಲೇಗಿಣಿ ಯೇಗಿಣಿಯೇ
ಅಟ್ಟಂಬೂ ಮಾತಾ ಕೇಳದೆ ನಾಗಮ್ಮ ಲೇಗಿಣಿ ಯೇಗಿಣಿಯೇ ‖ 27 ‖
"ಕೇಳಲ್ ಕೇಳಲ್ಲೇ ಹೊನ್ನಮ್ಮ ಸೊಸಿಯೆ" ಲೇಗಿಣಿ ಯೇಗಿಣಿಯೇ
ಕದಮೀಡ ತೆಗದೀ ವಳುಗೆ ಹೋಗದಿಯೆ ಲೇಗಿಣಿ ಯೇಗಿಣಿಯೇ
'ಹರಹರ' ನಂತು 'ಸಿವಸಿವ' ನಂತು ಲೇಗಿಣಿ ಯೇಗಿಣಿಯೇ ‖ 28 ‖
ಲಟ್ಟಂಬೂ ಮಾತಾ ಕೇಳದೆ ನಾಗಮ್ಮ ಲೇಗಿಣಿ ಯೇಗಿಣಿಯೇ
ತನ್ನ ತೌರೀಗೇ ಹೋಗದೆ ನೋಡು ಲೇಗಿಣಿ ಯೇಗಿಣಿಯೇ ‖ 29 ‖
ಅಟದೂರ ಬರು ಬರವಾ ಇಟ್ಟದೂರೆ ನೋಡವ್ರೇ ಲೇಗಿಣಿ ಯೇಗಿಣಿಯೇ
"ಎನ ಬಂದೇ ಲತ್ತೇ, ಯಂತ ಬಂದೆ ಲತ್ತೇ ಲೇಗಿಣಿ ಯೇಗಿಣಿಯೇ ‖ 30 ‖
ಬಂದ ಕಾರಣವಾ ವದಗ ಹೇಳೆ ಲತ್ತೇ" ಲೇಗಿಣಿ ಯೇಗಿಣಿಯೇ
"ಕೇಳಲೆ ಕೇಳಲ್ಲೊ ನನ್ನ ಅಳಿದೀರ ಲೇಗಿಣಿ ಯೇಗಿಣಿಯೇ ‖ 31 ‖
ನಮ್ಮನಿ ತನ್ನೆ ಬಗಿಲೆ ಬರುಬೇಕು ಲೇಗಿಣಿ ಯೇಗಿಣಿಯೇ
ನಮ್ಮನಿ ತನ್ನೆ ಬರಬೇಕೂ ಲೇಗಿಣಿ ಯೇಗಿಣಿಯೇ ‖ 32 ‖
"ಕೇಳಲ್ ಕೇಳಲ್ಲೊ ನನ್ನಲು ಅಳದೀರ" ಲೇಗಿಣಿ ಯೇಗಿಣಿಯೇ
ಏಳ ಜನ ಅಳಿದೀರು ಏಳ ಕೊದ್ರಿ ಹತ್ತವ್ರೆ ಲೇಗಿಣಿ ಯೇಗಿಣಿಯೇ ‖ 33 ‖
ತಂಗಿಯ ಮನಿಗೂ ಬಂದವ್ರೆ ನೋಡ ಲೇಗಿಣಿ ಯೇಗಿಣಿಯೇ
ಮುತ್ತೀನ ಗಿಂಡೀಲಿ ಹಣಯಲು ಉದುಕ ಲೇಗಿಣಿ ಯೇಗಿಣಿಯೇ ‖ 34‖
ಪಟ್ಟೆ ಮಂಚವ ಕುಡ್ಗ್ ಹಾಸದಿಯೇ ಲೇಗಿಣಿ ಯೇಗಿಣಿಯೇ
"ಕೇಳಲೆ ಕೇಳಲ್ಲೊ ನನ್ನಲು ಅಳದೀರ ಲೇಗಿಣಿ ಯೇಗಿಣಿಯೇ ‖ 35 ‖

ಆಸರ ಕಾದರೇ ಕುಡಿ ಬನ್ನಿ ಈಗೇ" ಲೇಗಿಣಿ ಯೇಗಿಣಿಯೇ
ಗಿಂಡೀಲಿ ನೊರಿ ಹಾಲ ತಂದೀಲಿಟ್ಟನೇ ಲೇಗಿಣಿ ಯೇಗಿಣಿಯೇ ‖ 36 ‖
"ನಿನ್ನಾಸರೆ ಹಾಳಾಲೀ, ಆಸರ್ ತೊಳಿಲೀ ಲೇಗಿಣಿ ಯೇಗಿಣಿಯೇ
ತಂಗೀ ಹೊನ್ನಮ್ಮ ತಂದಿ ತೋರೀಸು" ಲೇಗಿಣಿ ಯೇಗಿಣಿಯೇ ‖ 37 ‖
ಅಂದೇಳಿ ಯೇಳ ಜನ ಅಣದೀರು ಹೇಳವ್ರೇ ಲೇಗಿಣಿ ಯೇಗಿಣಿಯೇ
"ಹೊನ್ನಮ್ಮನ ಸುದ್ದೀ ನಾಯೇನ ಹೇಳಲೀ? ಲೇಗಿಣಿ ಯೇಗಿಣಿಯೇ ‖ 38 ‖
ನಿಮ್ಮಲು ಬಾವ್ಗೇ ದಂಡೀನ ಕರ್ಯಾ ಲೇಗಿಣಿ ಯೇಗಿಣಿಯೇ
ಬಳಗರ ಬೊಬ್ಬಣ್ಣ ಬಳಿಯ ತಂದೀದ ಲೇಗಿಣಿ ಯೇಗಿಣಿಯೇ ‖ 39 ‖
'ಬಳ್ಯನಾದರೂ ಲಿಡವ್ವ'ಲಂದೇ ಲೇಗಿಣಿ ಯೇಗಿಣಿಯೇ
ನನ್ನಲು ಸೊಸ್ಯೂ ಬಳ್ಯಲಿಟ್ಟೀತು ಲೇಗಿಣಿ ಯೇಗಿಣಿಯೇ ‖ 40 ‖
ದಂಡೀಗೊದ ಮಗನೂ ಬಂದೀದ ನೋಡು ಲೇಗಿಣಿ ಯೇಗಿಣಿಯೇ
ಕೊಟ್ಟಲಾರುತಿಯ ಮುಟ್ಟಲು ಇಲ್ಲ ಲೇಗಿಣಿ ಯೇಗಿಣಿಯೇ ‖ 41 ‖
ಹಿಂಡೂತಿ ಕೈಲಿ ಮಾತಾಡೂಲೆಲ್ಲ" ಲೇಗಿಣಿ ಯೇಗಿಣಿಯೇ
ಏಳ ಜನ ಅಣದೀರು ವಳಗೆ ಹೋಗವ್ರೇ ಲೇಗಿಣಿ ಯೇಗಿಣಿಯೇ ‖ 42 ‖
ಏಳ ಜನ ಅಣದೀರು ಏಳ್ ತುಂಡ ತಾವೂ ಲೇಗಿಣಿ ಯೇಗಿಣಿಯೇ
ಅಂಗೈಯ ಮೇನಿನ್ನೆ ಬಸ್ಮ ಮಾಡವ್ರೇ ಲೇಗಿಣಿ ಯೇಗಿಣಿಯೇ ‖ 43 ‖
ಕೆರೀಗಾದಾರೂ ಕೈತೋಳೂಕೆ ಹೋದ್ರೂ ಲೇಗಿಣಿ ಯೇಗಿಣಿಯೇ
ಮಿವ ಕಾದಾರೆ ಹೋಗಿ ನಿತ್ತರೆ ಲೇಗಿಣಿ ಯೇಗಿಣಿಯೇ
ತಾಂಬರ ಹೋಗಾಗೀ ಅಲುದದೆ ನೋಡು ಲೇಗಿಣಿ ಯೇಗಿಣಿಯೇ ‖ 44‖
ಕೈಗೆ ಬತ್ತದೇ ಹಿಂದೇ ಹೋತದೇ ಲೇಗಿಣಿ ಯೇಗಿಣಿಯೇ
"ಕೇಳಲ್ ಕೇಳಲ್ಲೋ ಹೇ ನನ್ನ ತಮ್ಮ, ಲೇಗಿಣಿ ಯೇಗಿಣಿಯೇ ‖ 45 ‖
ಇದುವು ಆದಾರೂ ವಿಚಿತ್ರ ಕೆಲಸ ಲೇಗಿಣಿ ಯೇಗಿಣಿಯೇ
ತಾಂಬರೆಳ್ಳಿ ಹೂಗೂ ಅಲುದೀತು ನೋಡು ಲೇಗಿಣಿ ಯೇಗಿಣಿಯೇ ‖ 46 ‖
ನಮುಗೆ ಕೈಗಾದ್ರೇ ಸಿಕ್ಕಿತು ನೋಡು" ಲೇಗಿಣಿ ಯೇಗಿಣಿಯೇ
ಮನೆಗೆ ಆದವ್ರೆ ಬಂದವ್ರೆ ನೋಡು ಲೇಗಿಣಿ ಯೇಗಿಣಿಯೇ ‖ 47 ‖

ಬಟ್ಟರ ಮನಿಗೇ ನೆಡುದವ್ರೆ ಲೇಗಿಣಿ ಯೇಗಿಣಿಯೇ
ಜೋಯಿಸ್ರ ಇನ್ನೇ ಕೇಳವ್ರೆ ನೋಡು ಲೇಗಿಣಿ ಯೇಗಿಣಿಯೇ ‖ 48 ‖
"ನಮಗೇ ಆದಾರೇ ತಾಂಬರೆಳ್ಳಿ ಹೂಗೂ ಲೇಗಿಣಿ ಯೇಗಿಣಿಯೇ
ಯೆಳ್ಳಿಲೂಗಾಗೀ ಲಲುದೀತು ನೋಡು ಲೇಗಿಣಿ ಯೇಗಿಣಿಯೇ ‖ 49 ‖
ಯೇನೇನ ಮಾಡಿದ್ರೂ ಕೈಗೆ ಸಿಕುದೆಲ್ಲ ಲೇಗಿಣಿ ಯೇಗಿಣಿಯೇ
ಕೇಳಲೆ ಕೇಳಲ್ಲೋ ಲುಕ್ಸಾನೋ ಯೇನು?" ಲೇಗಿಣಿ ಯೇಗಿಣಿಯೇ ‖ 50‖
"ಅತ್ತಿ ಕೂಡ ಹೋಗೀ ಲೇಳಪ್ಪ ನೀನು ಲೇಗಿಣಿ ಯೇಗಿಣಿಯೇ
ನಿನ್ನಲು ಸೊಸಿಯೂ ಸಿಕತಾಳೆ ನಿಮಗೇ" ಲೇಗಿಣಿ ಯೇಗಿಣಿಯೇ ‖ 51 ‖
ಲಂದೇ ಬಟ್ಟರು ನುಡಿದವ್ರೆ ನೋಡು ಲೇಗಿಣಿ ಯೇಗಿಣಿಯೇ
"ನಿನ್ನಲು ಮಗನೂ ಲೆಳ್ಳಿಮರನ ಮೇನವ್ನೆ ಲೇಗಿಣಿ ಯೇಗಿಣಿಯೇ ‖ 52 ‖
ಅವ್ನಲಾದಾರೂ ಕರುಕೊಂಡಿ ಹೋಗು" ಲೇಗಿಣಿ ಯೇಗಿಣಿಯೇ
ಅಟ್ಟಂಬೂ ಮಾತಾ ಕೇಳೀತು ತಾಯೀ ಲೇಗಿಣಿ ಯೇಗಿಣಿಯೇ ‖ 53 ‖
ಯಳ್ಳಿಮರ ನಡುಗೇ ನಡೆದಳು ತಾಯೀ ಲೇಗಿಣಿ ಯೇಗಿಣಿಯೇ
"ಕೇಳಲ್ ಕೇಳಲ್ಲೋ ನನ್ನಲು ಮಗುನೇ ಲೇಗಿಣಿ ಯೇಗಿಣಿಯೇ ‖ 54 ‖
ಆಗುವ ಕೆಲುಸಾಲಾಗಿತು ಮಗುನೇ ಲೇಗಿಣಿ ಯೇಗಿಣಿಯೇ
ಕೆಳಗಾರು ಲಿನ್ನೇ ಇಳಿದಿ ಬಾರಪ್ಪ" ಲೇಗಿಣಿ ಯೇಗಿಣಿಯೇ ‖ 55 ‖
ಏನೇನ್ಹೇಳಿದರೂ ಕೇಳೂದೆಲ್ಲ ಮಗ ಲೇಗಿಣಿ ಯೇಗಿಣಿಯೇ
ಕೆಳಗೇಲಾದರೂ ಇಳುದೆಲ್ಲ ಮಗ ಲೇಗಿಣಿ ಯೇಗಿಣಿಯೇ ‖ 56 ‖
ಅಟ್ಟೊತ್ತುಲಾಯ್ತೂ ಲಿಟ್ಟೊತ್ತಾಯ್ತು ಲೇಗಿಣಿ ಯೇಗಿಣಿಯೇ
ತಾಯಲಿನ್ನಾರು ಮರಗೂತದೆಯೆ ಲೇಗಿಣಿ ಯೇಗಿಣಿಯೇ ‖ 57 ‖
ಆಗೆಲಾದಾರೂ ಕೆಳಗೆಲಿಳುದೀದ ಲೇಗಿಣಿ ಯೇಗಿಣಿಯೇ
ಕೆರಿಗೇ ಲಾದಾರೂ ಬಂದೀದಲೇಗೇ ಲೇಗಿಣಿ ಯೇಗಿಣಿಯೇ ‖ 58 ‖
ಕೈಕಾಲು ಸಿರಿ ಮೊಕವಾ ತೊಳುದನೆ ನೋಡು ಲೇಗಿಣಿ ಯೇಗಿಣಿಯೇ
ತಾಂಬರೆಳ್ಳಿ ಹೂಗೂ ಲೇನ ಮಾಡುದೆ? ಲೇಗಿಣಿ ಯೇಗಿಣಿಯೇ ‖ 59 ‖
ಕೈಯಿ ಕೈಯಿ ಮೇಗೇ ಬರುತದೆ ನೋಡು ಲೇಗಿಣಿ ಯೇಗಿಣಿಯೇ
'ಇವಗೊಲಿನ್ನೆ ನಮಗು ಲೆಂತಕ್ಕೆ?' ಲೇಗಿಣಿ ಯೇಗಿಣಿಯೇ ‖ 60 ‖

ಅಂದೇಳೀ ಲವನೇ ಲೆರುಗು ನೋಡವ್ನೇ ಲೇಗಿಣಿ ಯೇಗಿಣಿಯೇ
ಏನೇನ ಮಾಡಿದ್ರೂ ಕೇಲೂವದೆಲ್ಲ ಲೇಗಿಣಿ ಯೇಗಿಣಿಯೇ ‖ 61 ‖
ಕೈಯಿನ ಮೇನೇ ಬರುತದೆ ಹೂಗೂ ಲೇಗಿಣಿ ಯೇಗಿಣಿಯೇ
ಇನ್ನೆಲಾದಾರೆ ಏನ ಮಾಡಬೇಕು? ಲೇಗಿಣಿ ಯೇಗಿಣಿಯೇ ‖ 62 ‖
ಆ ಹೂಗ ಮುರುದೀ ಅಂಗೀಲಾಕೀದ ಲೇಗಿಣಿ ಯೇಗಿಣಿಯೇ
ಕೈಕಾಲ್ ಸಿರಿಮೊಕವಾ ತೊಳುದೀವ ಲರಸೂ ಲೇಗಿಣಿ ಯೇಗಿಣಿಯೇ ‖ 63 ‖
ಹಿಂತಿರುಗಿ ಮನಿಗೇ ಬಂದೀದ ಲರಸೂ ಲೇಗಿಣಿ ಯೇಗಿಣಿಯೇ
ತನ್ನಲರಮನಿಗೇ ಬಂದೀದ ಲಾಗೇ ಲೇಗಿಣಿ ಯೇಗಿಣಿಯೇ ‖ 64 ‖
ಏಳ ಜನ ಬಾವದೀರು ಬರುವರು ನೋಡು ಲೇಗಿಣಿ ಯೇಗಿಣಿಯೇ
ಆ ಹೂಗ ತೆಗುದೀ ಕೈಯಲ್ಲಾಕವ್ನೇ ಲೇಗಿಣಿ ಯೇಗಿಣಿಯೇ ‖ 65 ‖
ಬಾವದಿರ ಬೊಡುದಲ್ಲಿ ಕುಂತವ್ನೆ ನೋಡು ಲೇಗಿಣಿ ಯೇಗಿಣಿಯೇ
ಹೋಗೀ ಕೈಯ ಲಾಕವ್ನೇ ನೋಡು ಲೇಗಿಣಿ ಯೇಗಿಣಿಯೇ ‖ 66 ‖
ಹನ್ನೈಡ್ ವರ್ಸನ ಹುಡ್ಗಿಲಾಗದೆಯೆ ಲೇಗಿಣಿ ಯೇಗಿಣಿಯೇ
“ತನ್ನಲು ಮಡುದೀ ಇಲ್ಲೇ ಮೂಡದಯೋ ಲೇಗಿಣಿ ಯೇಗಿಣಿಯೇ ‖ 67 ‖
ಕೇಳಲ್ ಕೇಳಲ್ಲೋ ಬಾವಲುದೀರ ಲೇಗಿಣಿ ಯೇಗಿಣಿಯೇ
ನಿನ್ನಲು ತಂಗೀ ಕರುಕಂಡ್ ಹೋಗೀ” ಲೇಗಿಣಿ ಯೇಗಿಣಿಯೇ ‖ 68 ‖
ಏಳ ಜನ ಲಣದೀರು ತಂಗೀನೂ ಬಾವಾ ಲೇಗಿಣಿ ಯೇಗಿಣಿಯೇ
ಕುದುರೆ ಯೇರಕಂಡೀ ಮನಿಗೆ ಬಂದವ್ರೆ ಲೇಗಿಣಿ ಯೇಗಿಣಿಯೇ ‖ 69 ‖

- **ಕೆಲವು ಪದಗಳ ವಿವರಣೆ**

ದಣಿಯ = ಬಹಳ
ಅನುಮಾಡ್ತು = ತಯಾರ್ ಮಾಡ್ತು
ತಾಂಬರ ಹೂಗು = ತಾವರೆ / ಕಮಲದ ಹೂ

▪ ಹೇಳಿದವರು : **ತಿಮ್ಮಕ್ಕ ಕಂಚು ನಾಯ್ಕ,** ಹೆಗಡೆ ಊರು.

⌘

# ಕೆಂಚಮ್ಮ

ಮುಟ್ಟಳಕೆಂಚಮ್ಮಾ ಮನ್ಯಾ ತಳುವನೆ ಬಿಟ್ಟೀ
ನಡ್ಡಳೇ ಗಾರಾಹೂಳಿಗಿನ್ನೂ ಸುವ್ವೇ
ಹರ್ವಾನದೀಗೂಳಾ ಮುಳ್ಕೀ ಸಾನಮಾಡೀ
ಕನ್ನಿಯೋರಿಗೆ ಕಯ್ಯಾ ಮುಗಿದಳೆ ಸುವ್ವೇ ‖ 1 ‖
ಕನ್ನಿಯೋರಿಗ್ ಕಯ್ಯಾ ಯೇನೇಳಿ ಮುಗೀದಳೇ
"ಸಂಜೀಲೀ ಕೊಡು ಸ್ವಾಮೀ ಮುಂಜಾಲೀ ವಯಸ್ವಾಮೀ,
ಬಂಜೆಂಬು ಸಬುದಾ ಮರ್ಸಿ ಸ್ವಾಮಿ ಸುವ್ವೇ
ತಾ ಬತ್ತೀ ಗಾರಾ ಹೊಳಿಗಿನ್ನೂ" ಸುವ್ವೇ ‖ 2 ‖
ಅಟ್ವಾರೂಲಿನ್ನೂ ನುಡಿದಳೆ ಕೆಂಚಮ್ಮ
ತನ್ನ ಮನೆಗಾರೂ ಬರೂವಳು ಸುವ್ವೇ
ಮುಟ್ಟಾಗೊಂದು ತಿಂಗಳಾ ಮುಟ್ಟಾಗೆರಡು ತಿಂಗಳಾ
ವಂಬತ್ತು ತಿಂಗಳಾ ಗಳಿದಾವೆ ಸುವ್ವೇ ‖ 3 ‖
ವಂಬತ್ತೂ ತಿಂಗಳಾ ತುಂಬೂತನವಾ ಕೇಳೂ
ಹೆರುವಾ ಕೋಟೂಲಿಯೇ ತೊಡೂಗದೆ ಸುವ್ವೇ
ತೊಡ್ಗದೆ ಕೆಂಚಮ್ಮಾಗೆ
ಹಡದಳೆ ಗಂಡೂ ಕೊಮುರಾನಾ ಸುವ್ವೇ ‖ 4 ‖
ವಾಲೆದ್ದೀ ನೀರಾ ಕಾಸದೆ ಕೆಂಚಮ್ಮಗೇ
ಉಂಗ್ಲೆದ್ದೀ ಬೆನ್ನಾ ತಿಕ್ಕದೇ ಸುವ್ವೇ
ಅರದಲರೂಸೀನಾ ಮೆರ್ದಾ ಸೀಗೆ ಹೊಡಿಯೆಲಿ
ಯಣ್ಣೀ ಕಂದಲವೇ ಬರೂವದೆ ಸುವ್ವೇ ‖ 5 ‖
ಅಟ್ವಾರೂಲಿನ್ನೂ ಲಾಗೂ ತನಕಾ ನೋಡೂ
ಕೆಂಚಮ್ಮ ಕರೂವದಕೇ ಬರೂವರೇ ಸುವ್ವೇ
"ಕಂದಯ್ಯಾ ಹುಟ್ಟೀ ಇಂದೀಗ್ ಮೂರೂ ದಿನಾ
ಇಂದಾರೂ ನಾನೂ ಬರೂನಾರೇ" ಸುವ್ವೇ ‖ 6 ‖

ಅಪ್ಪ್ ಹೇಳ್ದ್ರೂ ಕೇಳೂ ಕೆಂಚ್ಯಲ್ಲಾ ಅವ್ ಹೇಳ್ದ್ರೂ ಕೇಳೂ ಕೆಂಚ್ಯಲ್ಲಾ
ಪುರಿಸರ ತಡೂದಾರೂ ಕೇಳೂ ಕೆಂಚ್ಯಲ್ಲಾ ಸುವ್ವೇ
ಪುರಿಸರ ತಡೂದಾರೂ ಇರೂ ಕೆಂಚ್ಯಲ್ಲಾ, "ಕನ್ನೀಯೋರಾ
ಇಂದೆಗೇಳು ದಿನಕೇ ಬರೂತೆನೇ" ಸುವ್ವೇ ‖ 7 ‖
ಐದಲೂ ದಿನವೇ ಸಾಗೂತನಕಾ ನೋಡೂ
ನೆಡ್ಡಳೇ ಗಾರಾ ಹೊಳಿಗಿನ್ನೂ ಸುವ್ವೇ
ಅತ್ತೆಲಂಬದೂ, "ಕೇಳೂ ನೀನೂ ಸೊಸಿಯೇ,
ಯೆಟ್ಟೂ ಹೇಳಿದ್ರೂ ಕೇಳಬೇಕು ಸೊಸಿಯೇ
ಹೊಳಗಾರೂ ನೀನೂ ಹೋಗೂಕಾಗಾ ಸುವ್ವೇ ‖ 8 ‖
ಕತ್ಯರು ನೀವ್ ಬನ್ನೀ, ಕೊವ್ಯಾರೂ ನೀವ್ ಬನ್ನೀ
ಕೆಂಚಮ್ಮ ಹೊಗ್ತದೆ ಗಾರಾ ಹೊಳಿಗಿನ್ನೆ" ಸುವ್ವೇ
"ಕತ್ಯರು ನಾ ಕೇಳುದಿಲ್ಲಾ, ಕೊವ್ಯರೂ ನಾ ಕೆಳುದಿಲ್ಲಾ
ನಾಹೋಗ್ತೇ ಗಾರಾ ಹೊಳಿಗಿನ್ನೂ" ಸುವ್ವೇ ‖ 9 ‖
ಹರ್ವಾ ನದ್ಯಗೋಳಾ ಮಿಂದಳ್ ಕೆಂಚಮ್ಮ
ತನ್ನಲರೂಮನಿಗೇ ಬರೂವಳೇ ಸುವ್ವೇ
ತಾಯ್ ಬಳಗಕೆ ವಂದೋಲೇ ತಂದಿ ಬಳುಗಕೆ ವಂದೋಲೇ
ಗಂಡನ ಬಳಗದೋರಿಗೇ ವಂದೋಲೇ ಸುವ್ವೇ ‖ 10 ‖
ಮೂರೂ ವಾಲೀ ಬರದೀ ಕಳಗಳೇ ಕೆಂಚಮ್ಮಾ
ತಾನೂ ಕಟ್ಟಿಗೇ ನಡಿದದೇ ಸುವ್ವೇ
ಅಪ್ಪಯ್ಯಂಬವ್ಗೇ ಸುದ್ದೀಲಾಗದೆ ನೋಡೂ
ಮಡದೀಕೂಡಿನ್ನೂ ನುಡೀತಾನೇ ಸುವ್ವೇ ‖ 11 ‖
"ಬಿದ್ರೂರಲ್ಲಿ ವಂದೂ ಯಡಪುಂಡಾ ಇದ್ದೀದಾ
ನಿನ್ನೊಂದ್ ಹೆರೀಮಗಳಾ ಕೊಟ್ಯಲ್ಲೇ ಸುವ್ವೇ
ಇದ್ದೊಂದ ಹೆರೀಮಗಳಾ ಕೊಟ್ಯಲ್ಲೇ ಮಡದೀ
ಅವ ಹೊಳೀಗಾಹುತೀ ಕೊಡೂತಾನೇ" ಸುವ್ವೇ ‖ 12 ‖

“ಮನ್ಯಲ್ಲೀಲಿನ್ನೂ ಮಡ್ಡಿ ಇಲ್ಲಾ”ಲಂದೀ
ಕೇರೀಕೇರೀಯಾ ಹುಡುಕುತ ಬಂದಾ ಸುವ್ವೇ
“ಯಲ್ಲೆಲ್ಲೂಲಿನ್ನೂ ಮಡದಿಇಲ್ಲಾ” ಹೇಳೀ
ಕಟ್ಟೀಮೇನ್ ಹೋಗೀ ಕುಳೂವದೇ ಸುವ್ವೇ
ಕುಳ್ಳೂ ಸಮ್ಯಗಲ್ಲೀ ಕಟ್ಟೀಮೇನ್ ತಾನ್ ಹೋಗೀ ಕುಳೂವನೇ ಸುವ್ವೇ ‖ 13 ‖
“ಬಂದೀಯರ್ಾಕ್ ಸ್ವಾಮೀ ಕಟ್ಟೆಮೇನ್‌ಯಂತಾಕ್ ಕುಳ್ತೀರೀ?
ಕಟ್ಟಿಕಲ ಹರ್ದಿ ಕೆಳಗೇ ಬೀಳುರೀ” ಸುವ್ವೇ
“ಕಟ್ಟಿ ಹರ್ದಿ ಬಿದ್ದಾರೇ ಕಟ್ಟಿ ಕಟ್ಟೂಕ್ ಬಲ್ಲೇ
ಮಾಳೂಗೀ ಮಡದೀ ಮನಿಗೋಗೇ ಸುವ್ವೇ ‖ 14 ‖
ಇಪ್ಪತ್ ವರಾಕೊಟ್ಟೀ ಯಮ್ಮಿ ತಂದಿದೇ
ಅರುತಿಕೊಂದ್ ತುತ್ತಾ ಉಣಲಿಲ್ಲಾ ಸುವ್ವೇ
ಇಪ್ಪತ್ ವರೂ ಕೊಟ್ಟೀ ವಾಲೀಗೆಯ್ಯುಸೀದೋ
ವಂದಿನೂ ನೀನೂ ಇಡುಲಿಲ್ಲಾ ಸುವ್ವೇ ‖ 15 ‖
ಕಂದಯ್ಯಾ ಹುಟ್ಟೀ ಇಂದೀಗ್ ಮೂರೂ ದೀನಾ
ಕಂದಯ್ಯುಳ್ಳೂವಾ ಮನೀಗೋಗು” ಸುವ್ವೇ
“ಕಂದಯ ಅಳ್ಳದ್ರು ಅಳ್ಳೀ, ಪುಟ್ಟಯ್ಯ ಅಳ್ಳದ್ರೆ ಅಳ್ಳೀ
ಕಂದಯ್ಯನ ಗೊಡವೇ ನನುಗಿಲ್ಲ” ಸುವ್ವೇ “ದೇವರೇ ‖ 16 ‖
ಕಂದಯ್ಯುಳ್ಳುವಾ ನೀವ್ ಮನಿಗ್ ಹೋಗೀ” ಸುವ್ವೇ
ಅಟ್ಟಾರೂ ಅನ್ನೂ ಹೇಳೂ ತನ್ನಾಕೇಳೂ
ಮಡ್ಡೀ ವಳೂಗ್ ಹಾಕೀ ಕದೂ ಹಾಕ್ದಾ ಸುವ್ವೇ
ತೀಡೂತಾದೇ ನೋಡೂ ಮರ್ಕುತಾದೇ ನೋಡೂ ‖ 17 ‖
ಯೇನೇನ್ ಹೇಳಿದರೂ ಕೇಳೂದಿಲ್ಲಾ ಸುವ್ವೇ
“ಕೇಳ್ ಕೇಳೇ ಕೆಂಚಮ್ಮಾ, ಕೇಳಲೆ ಕೆಂಚಮ್ಮಾ
ಅಪ್ಪಯನಿನ್ಗೆ ಪಟ್ಟಯಾ ತರೂವನೆ” ಸುವ್ವೇ
“ಪಟ್ಟಿ ತಂದ್ರೂ ತರ್ಲೀ, ಹೂಂಗಾ ತಂದ್ರೂ ತರ್ಲೀ ‖ 18 ‖

ಅಪ್ಪಯ್ಯನಾ ಗೊಡವೇ ನನುಗಿಲ್ಲಾ" ಸುವ್ವೇ
"ಕೇಳ್ ಕೇಳೇ ಕೆಂಚಮ್ಮಾ, ಕೇಳಲೆ ಕೆಂಚಮ್ಮಾ
ನಿನ್ನ ತಾಯಿ ಬಂದದ್ಯೆ ಕರೂವಾಕೆ ಸುವ್ವೇ
ತಾಯಿ ಬಂದರ್ಯೇ ಕರವಕೆ ತಂಗಿ, ಕೇಳೂ ‖ 19 ‖
ಕುಪ್ಸ ತಂದದ್ಯೇ ಲಿಡೂನಾಕೇ" ಸುವ್ವೇ
"ತಾಯೀ ಬಂದ್ರೆ ಬರ್ಲಿ ಕುಪ್ಸ ತಂದ್ರೆ ತರಲೀ
ತಾಯವ್ವೀಗೊಡವೀ ನನೂಗಿಲ್ಲಾ" ಸುವ್ವೇ ‖ 20 ‖
"ಕೇಳ್ ಕೇಳೇ ಕೆಂಚಮ್ಮಾ, ಕೇಳಲೆ ಕೆಂಚಮ್ಮಾ,
ನಿನ್ನಣ್ಣ ಬಂದನೇ ಇಲುನೋಡೆ" ಸುವ್ವೇ
"ಅಣ್ಣ ಬಂದ್ರೆ ಬರಲೀ, ಹೂಗಾ ತಂದ್ರೆ ತರಲೀ
ಅಣ್ಣಯ್ಯನ ಗೊಡವೇ ನನುಗಿಲ್ಲ" ಸುವ್ವೇ ‖ 21 ‖
"ಅಪ್ಪಯ್ಯ ನಿನ್ನೂ ಕರದರೇ ಕೆಂಚಮ್ಮಾ
ಅಪ್ಪಯ್ಯನ ತೊಡೀ ಮೇನೇ ಕುಳೂವದೇ" ಸುವ್ವೇ
"ಕೇಳ್ ಕೇಳೊ ಲಪ್ಪಯ್ಯ, ಕೇಳಲಪ್ಪಯ್ಯಾ
ತಾನ್ ಹೋತೇ ಗಾರಾ ಹೊಳಿಗಿನ್ನು ಸುವ್ವೇ ‖ 22 ‖
ನಾನೆ ಹೋಗೆ ಗಾರಾ ಹೊಳಿಗಿನ್ ಕಲುಜೇನಮ್ಮಾ
ಕಲುಜೇನ ತಂಗಮ್ಮಾ ಕಯುದಾರೀ ಸುವ್ವೇ
ತಂಗಮ್ಮ ಕೈದಾರೀ ಯೆರಕೂಡೊಲಪ್ಪಯ್ಯಾ"
ತಾಯೀ ಪಾದಕೇ ವಂದನೆ ಮಾಡಿದ್ದಾಳೇ ಸುವ್ವೇ ‖ 23 ‖
ತಾಯೀ ಕೂಡಿನ್ನೂ ನುಡೀದದೇ ಸುವ್ವೇ
"ಕೇಳ್ ಕೇಳೆ ತಾಯವ್ವಾ ಕೇಳಲೆ ತಾಯವ್ವಾ,
ಕಲುಜೇನಾ ತಂಗಮ್ಮ ಕೈದಾರೀ ಯೊರಕೊಡೆ" ಸುವ್ವೇ
ಅಣ್ಣನ ಪಾದಕೇ ವಂದನೆ ಮಾಡಿದಾಳೇ ಸುವ್ವೇ ‖ 24 ‖
ಅಣ್ಣನ ಕೂಡಿನ್ನೂ ನುಡಿದಾಳೇ ಸುವ್ವೇ
ಅಣ್ಣನ ಕೂಡಿನ್ನೂ ಯೇನೇಳಿ ನುಡಿದಾದೇ?

“ಕೇಳ್ ಕೇಳೊ ಅಣ್ಣಯ್ಯ, ಕೇಳಲೆ ಅಣ್ಣಯ್ಯ,
ಕಲುಜೇನ ತಂಗಮ್ಮ ದಾರೀ ಯರೂಕೊಡೀ ” ಸುವ್ವೇ ‖ 25 ‖
ಅಟ್ಟಾರೂಲಿನ್ನೂ ನುಡ್ದದೇ ಕೆಂಚಮ್ಮಾ
ನಡೆದಾಳೇ ಗಾರಾ ಹೊಳೀಗಿನ್ನೂ ಸುವ್ವೇ
ಅಪ್ನ ಬಳ್ಗ್ ವಂದ್ ಸಾವ್ರಾ, ಅವಿ ಬಳ್ಗ್ ವಂದ್ ಸಾವ್ರಾ
ಗಂಡನ ಬಳುಗೆದವರೂ ಐನೂರು ಸುವ್ವೇ ‖ 26 ‖
ಲೈನೂರು ಸಯ್ತುಲಾಗೀ
ಹಣ್ಣನಾ ಮುಟ್ಟೊ ಹದಿನಾರೂ ಸುವ್ವೇ
ಹದ್ನಾರೂ ಸಯ್ತುಲಾಗೀ
ಕೆಂಚಮ್ಮ ಬೆನ್ನಿಗೂ ಬರೂವದೇ ಸುವ್ವೇ ‖ 27 ‖
ಅಲ್ಲೇಲೋಗದೇ ಹಣ್ಣೀ ಹರೂಗಾದೇ
ಹೂಗಾರೂಲಿನ್ನೂ ಲಿಡೂವುದೇ ಸುವ್ವೇ
ಇಡ್ಸೆದೆ ಕೆಂಚಮ್ಮಾ
ಕಡ್ಡಿ ಕುಂಕುಮಿನ್ನೂ ಇಡೂವದೇ ಸುವ್ವೇ ‖ 28 ‖
ಕಡ್ಡಿಕೂಕುಮಾ ಇಟ್ಟದೆ ಕೆಂಚಮ್ಮಾ
ಕಾಯೊಡುದೀ ಕಯ್ಯಾ ಮುಗೂದದೇ ಸುವ್ವೇ
ಮುಗ್ವಾ ತನ್ನಾಕನೋಡೂ
ದೇವಲೋಕ ಸತ್ತುಗೀ ಬರೂವದೆ ಸುವ್ವೇ ‖ 29 ‖
ಸತ್ತುಗಿಲತ್ತದೇ ದಂಡುಗಿಲ್ಲಿಡೂದದೇ
ಸವ್ವುಯ್ಯಲಮೇಲೇ ಕುಳೂವದೆ ಸುವ್ವೇ
“ಕೇಳ್ ಕೇಳ್ ಕನ್ನಿಯೋರಾ, ಕೇಳಲಿ ಕನ್ನಿಯೋರಾ
ನಾನೊಂದಾ ಮಾತಾ ನುಡಿತೇನೇ ಸುವ್ವೇ ‖ 30 ‖
ತಣ್ಣೀ ಉಂಡದಲ್ಲಾ (ತಾಯೀ) ಬಿಸ್ ನೀರ ಮಿಂದದ್ದಲ್ಲಾ
ಬಾಲರಪ್ಪಂತೇ ಸಲಿಕಳ್ಳಿ ಸುವ್ವೇ
ಸಲಿಕಳಿ” ಲಂದ್‌ಹೇಳಿ ಕನ್ನಿಯೋರಿಗೆ ಕಯ್ಯಾ ಮುಗೀದದೇ ಸುವ್ವೇ ‖ 31 ‖

ಅಟ್ಟಾರಲಿನ್ನೂ ಹೇಳಿಕಂಡೀ ಕಂಡೀ
ಅಳಿಯನ ಕರೂಕಂಡೀ ನೆಡೂದರೂ ಸುವ್ವೇ
ಅಳಿಯನಾರೂ ಲಿನ್ನೂ ತಮ್ಮನಿಗೆ ಕರ್ಕಂಡ್ ಹೋಗೀ
ಕಲುಜೇನ ತಂಗಮ್ಮ ಕೈದಾರೀ ಯೆರೂಕೊಟ್ಟೂ ಸುವ್ವೇ ॥ 32 ॥
"ಗಂಡಗ್ ಹಿಣ್ತೀಲಾಯ್ತೂ ಮಗನಿಗೆ ತಾಯೂಲಾಯ್ತೂ
ನೀವ್ ಹೋಗಿರ್ರೋ ನಿಮ್ಮ ಮನಿಯಲ್ಲೀ" ಸುವ್ವೇ
ಮನ್ಯಲ್ಲಿ ಅಂದ ಹೇಳೀ ಮಗಳೂವಾ ಅಳೀನಾ ಯೇನೇಳಿ ಕಳೂಗಾರೇ
"ನೀವ್ ಹೋಗಿರೊ ನಿಮ್ಮಾ ಮನಿಯಲ್ಲಿ ಸುವ್ವೇ ॥ 33 ॥

- **ಕೆಲವು ಪದಗಳ ವಿವರಣೆ**

ಮೆದ್ರಾ = ಕುಟ್ಟಿದ
ಸತ್ತುಗಿ = ಪಲ್ಲಕಿ
ವರೂ = ರೂಪಾಯ್
ತಣ್ಣೀ = ತಣಿದ ಹಿಂದಿನ ದಿನದ ಅನ್ನ

▪ ಹೇಳಿದವರು: **ದಿ. ಬೆಳಿಯಮ್ಮ ಪುಟ್ಟುನಾಯ್ಕ,** ಹೊಸಾಕುಳಿ.

⌘

# ಅತ್ತೆ ಗೌರಮ್ಮ, ಸೊಸೆ ಹೊನ್ನಮ್ಮ

(ಪ್ರತಿ ಸಾಲಿನ ಕೊನೆಗೆ "ತಂದನಂದನವೇ" ಎನ್ನಬೇಕು)

ವಂದ ತಾಯಿಗೇ ವಂದಲು ಮಗನೇ ತಂದನಂದನವೇ
ವಂದಲು ಮಗುನೆ ಜನುಸೀದನಲ್ಲೇ
ಅವ್ನಲು ನಗ್ನಾ ಮಾಡಲುಬೇಕ
ತವ್ರಮನಿಗೋಗೇ ಹೇಲ್‌ಕೇಳ್ಕಬಂತೂ ‖ 1 ‖
ಹೊನ್ನಮ್ಮಾ ಸೊಸಿಯ ನಗ್ಗನ ಮಾಡಿತೂ
ತಾಯಿ ಮಕ್ಕಳೂ ಚಂದಾಗುಳದೀರೂ
ವಂದಲು ವಂದ ದಿವ್ಸೇ ನೋಡೂ
ದಂಡಿನ ಕರ್ಯ ಬಂದೀತೂ ಲಾಗಲವಗೇ ‖ 2 ‖
"ಕೇಳಲೆ ಕೇಳೇ ನನ್ನಲು ತಾಯೇ
ನಾನೂ ನಾದರೇ ದಂಡೀಗೆ ಹೋಗೂತೇ
ನಾಬರೂ ತನ ನಿನ್ ಸೊಸ್ಯೆ ಹೊನ್ನಮ್ಮಾ
ಬೆಂಕಿಕಾದ ರೂಳಿ ಕಳ್ಗಲು ಬೇಡಾ ‖ 3 ‖
ನೀರಿಗಾದರೂ ಕಳ್ಗಲು ಬೇಡಾ"
ಅಂದಿಹೇಳಿನ್ನೇ ತಾಯಿಯ ಕೂಡ ಹೇಳ್ದಾ
ದಂಡೀಗಾದಾರೂ ಹೋಗೀದಲರಸೂ
ಅವ್ ದಂಡಗೋಗೀ ಬರ್ವಲು ತನಕೇ ‖ 4 ‖
"ಕೇಳಲೆ ಕೇಳೇಳಿ ನನ್ನತ್ತೇ ಹೊನ್ನಮ್ಮಾ
ನಾನು ನೀರನಾದಾರೂ ತರತೇನಂತೂ
"ಕೇಳಲೆ ಕೇಳಲ್ಲೇ ಸೊಸ್ಯೇ ಹೊನ್ನಮ್ಮಾ
ನಿನ್ನ ಗಂಡಾಲೇಗಿನ್ನೇ ಯೇನ ಹೇಳವ್ನೇ?" ‖ 5 ‖
"ಹೇಳಿದ ಹೇಳಲಿ ಆಳಿದರಾಗಾಲೀ"
ಅಟ್ಟಂಬು ಮಾತಾಳಿ ಕೇಳೀತ್ ಹೊನ್ನಮ್ಮಾ
ಚಿನ್ನದ ಕೊಡುವಾ ಬಲುಕೆ ಚಚ್ಚೀತೂ ‖ 6 ‖

ಬೆಳ್ಳಿಯ ಕೊಡುವಾ ಯಡುಕೆ ತಡುದೀತೂ
ನೀರೀಗಾದಾರೇ ಹೋಗೀತೂ ಈಗೇ
ಕೆರ್ಯನಾದಾರೂ ಇಳುದಾದೆ ಇನ್ನೂ
ಚಿನ್ನದ ಕೊಡುನಾ ಮೊಗುದಿ ಇಟ್ಟಾದೇ ॥ 7 ॥
ಬೆಳ್ಳಿಯ ಕೊಡುನಾ ಮೊಗಿತದೆ ನೀರ
ಅರಸೂನಾದಾರೇ ಯೇನ ಮಾಡಾನೇ?
ಕೊದುರಿನಾದಾರೇ ಮರುಕೆ ಕಟ್ಟೀದಾ
ಕೆರಿಯನಾದಾರೇ ಇಳುದಿ ಹೋಗೀದಾ ॥ 8 ॥
"ಯಾವೂರು ಆಯ್ತೇ ಯಾವ ದೇಸಲಾಯ್ತೇ?"
ಲಂದೀಲಾಗಿನ್ನೇ ಕೇಳಿದ ನೋಡೂ
ತಲ್ಯನಾದಾರೇ ಲೈತ್ತಿತು ಹೆಣ್ಣು
ಆರುಸೂನಾದಾರೇ ನೋಡಿತು ಹೆಣ್ಣೂ ॥ 9 ॥
ಮುತ್ತೀನ ಕಣ್ಣೀರಾ ಶಡಿತಾಳು ಹೆಣ್ಣಾ
ಲಟ್ಟಂಬೂ ಮಾತಾ ಕೇಳಿದ ಲರಸೂ
ಕಟ್ಟಿನಾದಾರೂ ಹತ್ತಿದ ಲರಸೂ
ಕೊದುರಿನಾದಾರೂ ಹೇರಿದ ನೋಡು ॥ 10 ॥
ಮನಿಗೆ ನಾದಾರೇ ಬಂದಾನಲರಸೂ
"ಕೇಳಲ್ಲೇ ಕೇಳೇ ನನ್ನಲೂ ತಾಯೇ
ನಿನ ಸೊಸ್ಯೇ ಹೊನ್ನಮ್ಮಾ ಯಲ್ಲೀಗೆ ಹೋಗೀತೊ?
ಜೇಜೀಗಾರುತಿಯಾ ತಕ್ಕಂಡಿ ಬಾರೇ" ॥ 11 ॥
ಅಟ್ಟಂಬೂ ಮಾತಾ ಹೇಳಲು ತನಕೇ
ಮುತ್ತಿನ ಕಣ್ಣೀರಾ ಶಡಿತೇ ಹೊನ್ನಮ್ಮಾ
ಚಿನ್ನದ ಕೊಡುನಾ ಬಲುಕೇ ಚಚ್ಚಾದೇ
ಬೆಳ್ಳಿಯ ಕೊಡುನಾ ಯಡುಕೇ ಚೆಚ್ಚಾದೇ ॥ 12 ॥
ದುಕ್ಕ ಬುಡುತಾದೆ ಕಣ್ಣೀರ ತೆಗಿತಾಳೇ
ಚೆಚ್ಚಿದ ಕೊಡುನಾ ವಳುಗೆ ಲಿಟ್ಟೀತೂ

ಕಣ್ಣೀರ ಲಿನ್ನೇ ಬಟ್ಟಲುಕರತೀ
ಜೇಜಿಗಾರುತಿಯಾ ತಕ್ಕಂಡಿ ಬಂತೂ ‖ 13 ‖
ಲಾರುತಿಲಿನ್ನೇ ಕಂಡಿದಾ ಲರಸೂ
ಕೊದುರೀನಾದಾರೂ ಅಳುದೀದಲರಸೂ
"ಕೇಳಲ್ಲೋ ಕೇಳೋ ನನ್ನಲು ಮಗುನೇ
ಊಟಕಾದಾರೂ ಹೋಗಲುಬೇಕೂ" ‖ 14 ‖
ಅಂದೇಳಿ ತಾಯೀ ಹೇಳೀತೂ ಈಗೇ
"ಊಟಾಮಾಡೂಕೇ ನಂಗೆ ಹಸವಿಲ್ಲಾ
ಕೇಳಲ್ಲೇ ನನ್ನು ಗೌರಮ್ಮ ತಾಯೇ
ನಿನ್ನಲು ಸೊಸ್ಯೇ ತೌರಮನಿಗೋಗದೇ ಹೋಗದೇಯೇ
ಬಾಳಲು ದಿನವಾಲಾಗಿತು ತಾಯೇ, ‖ 15 ‖
ತಾಯ್ ಮನಿಗೋಗಿ ಕಳಕೊಟ್ಟಿ ಬತ್ತೇ"
ಲಂದಿಲಾಗಿನ್ನೇ ಹೇಳಿದ ಮಗುನೇ
ಲಟ್ಟಂಬು ಮಾತಾ ಕೇಳಿತು ತಾಯೀ
"ಕೇಳಲ್ಲೇ ಕೇಳೇ ನನ್ನಲು ಸೊಸ್ಯೇ ‖ 16 ‖
ತೌರ ಮನಗೋಗಿ ಬರಬಹುದು ಯೋಗೇ
ಮುಡಿಕಟಿಕೊಳ್ಳೆ ದಂಡಿ ಮುಡಕೊಳ್ಳೇ
ಮುಡೀಕಟ್ಟೀತೂ, ದಂಡೀ ಮುಡಿದೀತೂ
ತಾನುಡೂ ಪಟ್ಟೇ ನೆರದಿ ಉಟ್ಟೀತೂ ‖ 17 ‖
ತಾನಿಡೂ ಚಿನ್ನೂ ಮೈದುಂಬೀತೂ
ಕೊದುರೀನಾದಾರೂ ಹೇರಿಸಿಕಂಡಾ
ಬದ್ಯಾದಾರೀಯಾ ಹಿಡುದೋದಾಲರಸೂ
ಲಾರಂಬಡುವೀಗೇ ಹೋಗಿದಲರಸೂ ‖ 18 ‖
"ಕೇಳಲಿ ಕೇಳೀ ನಮ್ಮಲು ಸ್ವಾಮೀ,
ತಾಯ್ ಮನಿಗೋಗೂ ದಾರೀ ಇದುವಲ್ಲಾ"
"ನೀಮಳ್ಯಾಲೆಂಗಿಸುವೇ ಮರುಳಾಲೆಂಗಿಸುವೇ

ನೀನೂ ಬಾರದೆ ಬಾಳಾ ದಿನವಾಯ್ತೂ
ಇದವೇಯ ದಾರಿ"ಲಂದೀ ಹೇಳೀದಾಲರಸೂ ‖ 19 ‖
ಆರಂಬಡುವೀಗೇ ಕರುಕಂಡ್ ಹೋಗೀದಾ
ಹೆಣ್ಣಿನಾರೊಂಡಾ ಹೊಡದೀದಾಲರಸೂ
ಮನಿಗೆ ಆದಾರೇ ಬಂದಾನೇ ಲರಸೂ
ಇಲ್ಲಿ ಆದಾರೇ ಯೇನಲಾಗದೇ? ‖ 20 ‖
ಮನಿಯಲು ವಳಗೇ ಯೇನೇನು ಇಲ್ಲಾ
ತಾಯಮ್ಮಗೆ ಸಂಸೇ ಬಂದೀತೂ ಯೇಗೆ
"ಕೇಳಲೊ ಕೇಳಲ್ಲೋ ನನ್ನಲು ಮಗುವೇ
ಯಾವಲು ಗತಿಯಾ ಮಾಡಿ ಬಂದೀದೇ?" ‖ 21 ‖
ಪಟುವಾ ತಕ್ಕಂತೂ ಬಾಗಲದಗ ಕೂಂತ್ತೂ
"ಸೊಸ್ಯ ಗೌರಮ್ನೋಯಲ್ ಹಾಕಿ ಬಂದ್ಯೋ?
ಬಾಗ್ಲದಲ್ ನೀನೂ ಹೊಕ್ಕಿದಾರೇ
ನಿನ್ನಲು ಕಡದೀ ತುಂಡಾ ಮಾಡೂತೇ" ‖ 22 ‖
ಅಂದೇಳೀ ತಾಯೀ ಕೂತದೇಲಾಗೇ
ಯೇಗೇ ನಿನ್ಯೇಗೇ ಯೇನೂ ಲಾಗೀತೂ
ಅದುರಾ ತಾಯೀಗೇ ಸಪನ ಬಿದ್ದೀತೂ
"ನಿನ್ನಲೂ ಮಗುಳೂ ಹೊನ್ನಮ್ಮ ನೋಡೂ ‖ 23 ‖
ಆರಂಬಡುವೀಲೀ ಮೋಸ ಮಾಡವ್ರೇ"ಳಿ
ಅಂದೇಳಿ ಸಪನಾ ಬಿದ್ದೀತೂ ಲೇಗೇ
ಹೇಯ್ಕಂತಿ ಜಪುಕಂತೀ ಯೆದ್ದಿಳು ನೋಡೂ
"ಕೇಳಲೆ ಕೇಳಲ್ಲೋ ನನ್ನ ಮಗುದೀರಾ ‖ 24 ‖
ನಿನ್ನಲೂ ತಂಗೀ ಹೊನ್ನಮ್ಮ ನೋಡೂ
ಆರಂಬಡುವೀಲೀ ಮೋಸಾ ಮಾಡವ್ರೇ"
ಅಂದ್ ಹೇಳಿ ಜಪ್ಕಂತೀ ಬಿದ್ದದೆ ತಾಯೀ
"ವಂದ ಸಂಗೋೇಗೀ ಬರಬವ್ದು ಮಗುವೇ" ‖ 25 ‖

ಅಂದಿಲಾಗಿನ್ನೇ ಹೇಳಿತೂ ನೋಡೂ
ಲಟ್ಟಂಬು ಮಾತಾ ಕೇಳೀ ರಣದೀರಾ
ತಂಗೀಯಾ ಮನಿಗೇ ವೋಡಿ ಬಂದವ್ರೂ
"ಕೇಳಲ್ಲೇ ಕೇಳಲ್ಲೇ ನನ್ ಗೌರಮ್ಮಲತ್ತೇ ‖ 26 ‖
ಹೊನ್ನಮ್ಮ ತಂಗೀ ಯೆಲ್ಲೀ ಹೋಗೀತೂ?"
"ಕೇಳಲೆ ಕೇಳಲ್ಲೋ ಯೇಲಳಿದೀರಾ
ನಿನ್ನೇನಾದಾರೇ ಯೇನಾ ಮಾಡವ್ನೇ
ನನ್ನ ಕೋಡಿನ್ನೇ ಹೇಳಿದ ನೋಡೂ ‖ 27 ‖
ಮಡುದಿಲಾದಾರೇ ನಿಮ್ಮಲು ಮನಿಗೇ
ಕಳಿಕೊಟ್ಟ ಬತ್ರನಂದಿ ಕರ್ಕಂಡ್ ಹೋಗವ್ನೇ
ಜಪಕಂತ ಜರ ಕಂತೀ ಬಿದ್ದೀದೆ ನಾನೂ"
ಅಟ್ಟಂಬೂ ಮಾತಾ ಕೇಳೀ ರಣುದೀರೂ ‖ 28 ‖
ಹೊಯ್ಕಂತಾ ಜಪುಕಂತೀ ಲಡುವೀ ಬಿದ್ದಾರೇ
ಆರಂಬಡುವೀಯಾ ತಿರುಗೀರಣದೀರೂ
ರುಂಡಾನಾದರೂ ಸಿಕ್ಕೀತು ಯೇಗೇ
ರುಂಡಾನಾದರೂ ಸಬನಾದಾರೂ ‖ 29 ‖
ಅಂಗೈ ಮೆನೆಸುಟ್ಟೇ ಬೂದೀ ಮಾಡವ್ರೇ
ಮನಿಗೆಲಾದಾರೂ ಹೋದಾರಣದೀರೂ
ತಾಯಿಗಾದಾರೇ ಬುದ್ದೀ ಹೇಳವ್ರೇ
"ನಮ್ಮವರ ನೆಡುಗೇ ಹೊನ್ನಮ್ಮ ತಂಗೀ ‖ 30 ‖
ಯೆಲ್ಲ ಅಂದೇಳೀ ತೆಳುಕೊಣ್ಣಿ ತಾಯೇ
ಅಂಗೈಮೆನೇ ಸುಟ್ಟೇ ಬೂದೀ ಮಾಡವ್ನೇ
ಮದಿಸಿಗೇನಾದರೇ ಬಂದಾರೂ ತಾಯೇ
ನಮ್ಮ ನೋಡಿನ್ನೇ ಸಂತರಸೂ ನೀನೂ" ‖ 31 ‖
ಲರಸುನಾದಾರೇ ಯೇನಾ ಮಾಡವ್ನೇ?
ಊಟಾಯೆಲ್ಲವ್ಗೆ ಲುಪುಚಾರಿಲ್ಲವೋ

ಊಟಾನೂ ಯೆಲ್ಲಾ ಉಪುಚಾರಯೆಲ್ಲಾ
ಬೆಳ್ಗಾಗ್ಯೆದ್ದಿದಾ ಯೇನಾ ಮಾಡೀದಾ? ॥ 32 ॥
ಕೆರ್ಯನೀರೀಗೇ ಮೊಕ ತೊಳೂಕೋದಾರೇ
ಐಜ್ಜನಣದೀರೂ ತಂಗೀಯಾ ಸುಟ್ಟೀ
ಅಂಗೈಯ ಕೆರ್‌ಯಲ್ಲೀ ತೊಳದಿ ಹೋಗೀರೂ
ಅರಸುನಾದಾರೇ ಮೊಕ ತೊಳುಕೋದಾ ॥ 33 ॥
ತಾಂಬರೆಳ್ಳೀಯಾ ಹೂಂಗೂ ಆಗಾದೇ
ಅಡ್ಡ ಮಾಡುಕಂಡೀ ನೀರನ್ನೇ ಮೊಗುದಾ
ಯೇನು ಮಾಡಿದ್ರೂ ಕಯ್ಯಿಗೆ ಶಿಕುತಾದೇ
ಅಡ್ಡ ಹಾಕ್ಬೇಕಂದಿ ನೆಗುದೀದಾ ಮೇನೇ ॥ 34 ॥
ಹೆಣ್ಣಾಗೀಲಿನ್ನೇ ಬಂದೀತು ಕೈಗೇ
ನೆಗುದೀನಾದಾರೇ ಕುಳ್ಳೀಸಿಕಂಡಾ
'ಹರಹರ' ನಂದಾ 'ಸಿರಿಹರಿ' ನಂದಾ
ಮನಿಗೆ ಹೋದಾರೇ ನನ್ನಲೂ ತಾಯೀ ॥ 35 ॥
ನನ್ನಲು ಕಡದೀ ತುಂಡೂ ಮಾಡುತದೇ
ಕೊದುರೀನಾದಾರೇ ತಕ್ಕಂಡಿ ಹೋದಾ
ಕೊದುರೀಯಾ ಮೇನೇ ನೆಗುದೀ ಕುಳ್ಸೀದಾ
ಹಿಂದಲೂ ಕಡಿಗೇ ಅಡಿಕಂಡಿ ಕೂತಾ ॥ 36 ॥
ಕೊದುರೀನಾದಾರೇ ಹೇರಿಕಂಡಿ ಬಂದಾ
ತಾಯಮ್ಮಾಲಿನ್ನೇ ಯೇನ ಹೇಳ್ತದೇ?
"ನಗ್ಗನಾಕಂಡೀ ಬಂದೀದೆ ನೀನೂ
ಮುಂದಲೂ ಬಾರೋ" ಅಂದೀ ಹೇಳೀತೂ ॥ 37 ॥
"ನಿನ್ನಲು ಕುತಗೀ ಮೊದಲೇ ನಾ ಕಡೀತೆ
ನೀಮದ್ಯಾಕ ಬಂದದ್ದ ಕಡಿಗೆ ನಾ ಕಡಿತೆ "
ಅಂದೇಳಿ ತಾಯೀ ಹೇಳಲುುತದೇ
"ಕೇಳಲೆ ಕೇಳೇ ನನ ಗೌರಮ್ಮಲತ್ತೇ ॥ 38 ॥

ನಿನ ಹೊನ್ನಮ್ಮ ಸೊಸ್ಯೇ ನಾನೇಯ ಹೌದೂ"
ಯೇನ ಹೇಳಿದರೂ ಕೇಳೂದಿಲ್ಲಾ
ಕಳವನಾದಾರೂ ಲತ್ತಿಗೆ ತಪ್ ಹೋಯ್ತು
"ನಾನೇಯ ಲತ್ತೇ ಹೊನ್ನಮ್ಮ ನೋಡೂ ‖ 39 ‖
ವಳ್ಗೇ ಹೋಗೀ ನೀನು ನೋಡಾಲು ಬಂದೇ"
ವಳ್ಗೆ ಹೋಗಲಿನ್ನೇ ನೋಡೀತೂ ಲತ್ತೇ
ಮುಂಚೆ ಯಾವ ತರ ವಳಗೇ ತುಂಬೀತೂ
ಅದೇ ಸಂಪತ್ತೂ ವಳುಗೇಲಾಗದಿರೆ
ಆಗ ಹೋಗಿಲಿನ್ನೇ ನೋಡೀಲು ಬಂತೂ ‖ 40 ‖

- **ಕೆಲವು ಪದಗಳ ವಿವರಣೆ**

ಜೇಜೀ = ಕುದುರೆ

ಸಬ = ಶಬ

ಮದಿಗ = ಕೆರೆ

▪ ಹೇಳಿದವರು: **ದಿ. ಸೌ| ನಾಗಮ್ಮ ಮಾಸ್ತಿನಾಯ್ಕ,** ಹೆಗಡೆ ಊರು.

⌘

# ಕೋಳಿ ಜನ್ಮ

(ಪ್ರತಿ ಸಾಲಿನ ಕೊನೆಗೆ "ಲೇಗಿಣಿ ಲೇಗಿಣಿಯೇ" ಎನ್ನಬೇಕು)

ವಂದಲ್ಲ ವಂದೂ ರಾಜ್ಯದಲ್ಲೀ ಲೇಗಿಣಿ ಲೇಗಿಣಿಯೇ
ವಂದೂ ಲಜ್ಜವ್ವಿಲಿದ್ದೀತೂ ಸಿವನೇ ಲೇಗಿಣಿ ಲೇಗಿಣಿಯೇ
ಅದ್ಕು ಅಂದೂ ಬಂದುವೂಯೆಲ್ಲಾ ಲೇಗಿಣಿ ಲೇಗಿಣಿಯೇ
"ಕಣ್ಣು ಕೈಕಾಲೂ ಇರುವಾಗೇ ಲೇಗಿಣಿ ಲೇಗಿಣಿಯೇ ‖ 1 ‖
ಸಾರ್ವಾರಮನಿಯಾ ಪಡ್ಗಿಯಳ್ದು ತಿಂಬೇ ಲೇಗಿಣಿ ಲೇಗಿಣಿಯೇ
ಕಣ್ಣು ಕೈಕಾಲೂ ಮುರುದಿ ಬಿದ್ದಾಗೇ ಲೇಗಿಣಿ ಲೇಗಿಣಿಯೇ
ನನ್ನಲೂ ದಿವ್ಸಾ ಹ್ಯಾಂಗ ಸಾಗೂದೂ?" ಲೇಗಿಣಿ ಲೇಗಿಣಿಯೇ
ಅಜ್ಜವ್ವಿಗಾದ್ರೂ ಲಾಲೋಚ್ನೆ ಆಯ್ತು ಲೇಗಿಣಿ ಲೇಗಿಣಿಯೇ ‖ 2 ‖
ವಂದಲ್ಲಾ ವಂದೂ ದಿನದಲ್ಲೀ ನೋಡೀ ಲೇಗಿಣಿ ಲೇಗಿಣಿಯೇ
ಬೆಳ್ಳೂವ ಮೂಡೀ ಬಿಳುಗಲಾಗೀತೂ ಲೇಗಿಣಿ ಲೇಗಿಣಿಯೇ
ಹಾರಾರಾ ಮನಿಯಾ ಪಡಿಯಳುಕೆ ಹೋಯ್ತೂ ಲೇಗಿಣಿ ಲೇಗಿಣಿಯೇ
ವಂದಲ್ಲಾ ವಂದೂ ರಾಜ್ಯದಾಗಿದ್ದೀ ಲೇಗಿಣಿ ಲೇಗಿಣಿಯೇ ‖ 3 ‖
ವಂದುವ ಹುಡುಗಾ ಕೋಳೀಲು ಮರಿಯೂ ಲೇಗಿಣಿ ಲೇಗಿಣಿಯೇ
ತಕ್ಕಂಡಾದಾರೀ ಅಡ್ವೀಲಿ ಬರುತಾ ಲೇಗಿಣಿ ಲೇಗಿಣಿಯೇ
ಅಜ್ಜೆ ಆದ್ರೂ ಲೀನಾ ಮಾಡೀತೂ? ಲೇಗಿಣಿ ಲೇಗಿಣಿಯೇ
ಹುಡುಗನ ಕಂಡೀ ನಿತ್ತೇ ಬಿಟ್ಟಿತ್ತೂ ಲೇಗಿಣಿ ಲೇಗಿಣಿಯೇ ‖ 4 ‖
"ಯಲ್ಲೀಗ್ ಹುಡುಗಾ ಹೋಗುತೆ ನೀನು?" ಲೇಗಿಣಿ ಲೇಗಿಣಿಯೇ
"ವಂದ್ ಕೋಳೀಯ ಮರಿಯಾ ಮಾರಾಟ್ಕೆ ಬಂದೇ ನಾ" ಲೇಗಿಣಿ ಲೇಗಿಣಿಯೇ
"ನಾಕಾಣೆ ದುಡ್ಡೂ ಅದಿಯೋ ಮೊಮ್ಮಗನೇ ಲೇಗಿಣಿ ಲೇಗಿಣಿಯೇ
ಕೋಳೀ ಮರಿಯಾದ್ರೂ ಕೂಡುತೀಯೇನೋ?" ಲೇಗಿಣಿ ಲೇಗಿಣಿಯೇ ‖ 5 ‖
ಅಟ್ಟ ಮಾತೀಗೇ ಕೊಟ್ಟೀದಾ ಹುಡುಗಾ ಲೇಗಿಣಿ ಲೇಗಿಣಿಯೇ
ಅಜ್ಜಿವ್ವಿ ಆದ್ರೂ ತಕ್ಕಂಡೇ ಬಂತೂ ಲೇಗಿಣಿ ಲೇಗಿಣಿಯೇ

ದಾರಾನಾದರೂ ಮಾಡೀತಜ್ಜವ್ವೀ ಲೇಗಿಣಿ ಲೇಗಿಣಿಯೇ
ಗುಟ್ಟಾನೆ ಹುಗುದೀ ಕಟ್ಟೀಲ್ಲಾಕದಿಯೇ ಲೇಗಿಣಿ ಲೇಗಿಣಿಯೇ ॥ 6 ॥
ಬೀಡ್ದಕ್ಕಿ ಆದ್ರೆ ತೊಳುವಕೆ ಹೋಗದಿಯೇ ಲೇಗಿಣಿ ಲೇಗಿಣಿಯೇ
ತೊಳ್ಕಂಡ ಬರ್‌ವಾಗೇವಂದ ಮುಟ್ಟಿ ಹಾಕ್ತೂ ಲೇಗಿಣಿ ಲೇಗಿಣಿಯೇ
ಅದ್ರ ಬೀಯ್ಸಕಂಡೆ ಉಂಬಾಗೇ ವಂದೇ ಮುಟ್ಟಿ ಹಾಕ್ತೂ ಲೇಗಿಣಿ ಲೇಗಿಣಿಯೇ
ಊಟನೇ ಮಾಡೀ ಮನಗೀತಜ್ಜವ್ವೀ ಲೇಗಿಣಿ ಲೇಗಿಣಿಯೇ ॥ 7 ॥
ಬಿಳ್ಳೂವ ಮೂಡೀ ಬಿಳುಗೇಲಾಗದಿಯೇ ಲೇಗಿಣಿ ಲೇಗಿಣಿಯೇ
"ನಮ್ಮಜ್ಜಿಗಾದ್ರೆ ಹತ್ತೀಯ ಹಾಸ್ಗೀ" ಲೇಗಿಣಿ ಲೇಗಿಣಿಯೇ
ಮತ್ತೊಂದ ಸರವಾ ಯೇನಂದಿ ಹೂಡಿತೂ? ಲೇಗಿಣಿ ಲೇಗಿಣಿಯೇ
"ನಮ್ಮಜ್ಜಗಾದ್ರೆ ಬಂಗಾರ್‌ದ ಕಡಗಾ" ಲೇಗಿಣಿ ಲೇಗಿಣಿಯೇ ॥ 8 ॥
ಅಂದ ಹೇಳಿ, ಕೋಳಿ ಸರವನೆ ಹೊಡಿತೂ ಲೇಗಿಣಿ ಲೇಗಿಣಿಯೇ
ಅಜ್ಜವ್ವಿಗಾದ್ರೆ ಎಚ್ರಲಾಗೀತೂ ಲೇಗಿಣಿ ಲೇಗಿಣಿಯೇ
"ಕೇಳಲ್ ಕೇಳಾಲೀ ಕೋಳೀಯ ಹುಂಜಾ, ಲೇಗಿಣಿ ಲೇಗಿಣಿಯೇ
ನನ್ ಬೀಡ್ದಕ್ಕಿ ಕೂಳೂ ಕೋಗೆಟ್ಟೆ ನಿನಗೆ?" ಲೇಗಿಣಿ ಲೇಗಿಣಿಯೇ ॥ 9 ॥
"ನನ್ಗೆ ಹತ್ತಿಹಾಸುಗೀ ಮಾಡೀಸಿ ತಂದ್ರೇ ಲೇಗಿಣಿ ಲೇಗಿಣಿಯೇ
ಬಂಗಾರುದ ಕಡುಗಾ ಅಜ್ಜವ್ವೀಗಂದೇ" ಲೇಗಿಣಿ ಲೇಗಿಣಿಯೇ
"ಮಾತಾಡು ಕೋಳೀ ಯಾವ ಜಾತಿ ಕೋಳೀ? ಲೇಗಿಣಿ ಲೇಗಿಣಿಯೇ
ಅಚೀಚ್ಯೊರೆಲ್ಲಾ ಕರವನೇ ಕೋಳೀ" ಲೇಗಿಣಿ ಲೇಗಿಣಿಯೇ ॥ 10 ॥
ಅವ್ರಲ್ಲಾ ಇನ್ನೇ ವೋಡೋಡಿ ಬಂದ್ರೂ ಲೇಗಿಣಿ ಲೇಗಿಣಿಯೇ
"ಹೊಡುವಾದಾರ್ ನೀವೂ ಹೊಡಲಕ್ಕಿ..." ಲಂತೂ ಲೇಗಿಣಿ ಲೇಗಿಣಿಯೇ
"ನನ ಮುಂದೇ ಅನ್ನೇ ಬಂದೇ ನೋಡೀ" ಲೇಗಿಣಿ ಲೇಗಿಣಿಯೇ
ಅವ್ರಲ್ಲಾ ಇನ್ನೇ ಹೆದರಿಕಿಲಾಗೀ ಲೇಗಿಣಿ ಲೇಗಿಣಿಯೇ ॥ 11 ॥
ಅವ್ರೆಲ್ಲಾ ಇನ್ನೇ ಓಡೋಡಿ ಹೋದ್ರೂ ಲೇಗಿಣಿ ಲೇಗಿಣಿಯೇ
"ಬಿಂಗ್ಳುರ ರಾಜಾನಾ ಮಗ್ಳ ಮದಿಯಾಗೂಕ ಹೋತೇ" ಲೇಗಿಣಿ ಲೇಗಿಣಿಯೇ
ಅಂದ ಹೇಳೀ, ಸರವಾ ಹೊಡುದೀತು ಕೋಳೀ ಲೇಗಿಣಿ ಲೇಗಿಣಿಯೇ
ಅಚೀಚ್ಯೊರೆಲ್ಲಾ ದೂರೇ ನಿತ್ಕಂಡೀ ಲೇಗಿಣಿ ಲೇಗಿಣಿಯೇ ॥ 12 ॥

"ಕೇಳಲ್ ಕೇಳಾಲೀ ಲಜ್ಜವ್ವಾ, ನೀನೂ ಲೇಗಿಣಿ ಲೇಗಿಣಿಯೇ
ಮಾತಾಡೂ ಕೋಳೀ ಯಾಕೆ ತಂದಿದಿಯೇ? ಲೇಗಿಣಿ ಲೇಗಿಣಿಯೇ
ಊರಾಗ ಯೆಲದೀವ್ ಕೋಳಿ ತಂದಿದಿಯೇ?" ಲೇಗಿಣಿ ಲೇಗಿಣಿಯೇ
"ಅಜ್ಜವ್ವೀಗಾದ್ರೆ ಹತ್ತೀ ಹಾಸ್ಗೆಯಂತು" ಲೇಗಿಣಿ ಲೇಗಿಣಿಯೇ ‖ 13 ‖
ಅಂದ ಹೇಳೀ ಸರವಾ ಹೊಡುದೀತು ಕೋಳೀ ಲೇಗಿಣಿ ಲೇಗಿಣಿಯೇ
"ನಾ ಬಿಂಗ್ಳೂರ ರಾಜ್ನ ಮಗಳಾ ನಗ್ನಾಗೂಕ್ ಹೋತೇ" ಲೇಗಿಣಿ ಲೇಗಿಣಿಯೇ
ಅಂದ್ಹೇಳಿ ಸರವಾ ಹೊಡುದೀತೂ ಕೋಳೀ ಲೇಗಿಣಿ ಲೇಗಿಣಿಯೇ
ಅಜ್ಜವಿಗೆ ಮೂರು ಗುದ್ದಾ ಹೊಡದೀತು ಕೋಳೀ ಲೇಗಿಣಿ ಲೇಗಿಣಿಯೇ ‖ 14 ‖
ಹೆರಗಾದ್ರ ಲಿನ್ನೇ ಬಿದ್ದೀತು ಕೋಳೀ ಲೇಗಿಣಿ ಲೇಗಿಣಿಯೇ
ಹೆರಗಾದ್ರ ಲಿನ್ನೇ ಬಿದ್ದೀತು ಕೋಳೀ ಲೇಗಿಣಿ ಲೇಗಿಣಿಯೇ
ಹದ್ನಾರ ಮೆಟ್ಟೀನಾ ನರೀಯಣ್ಣಾ ಲೇಗಿಣಿ ಲೇಗಿಣಿಯೇ
ಜೀವಾ ತಿರಕಂತೇ ಬರ್‌ವಾಗೇ ಲೀಗೇ ಲೇಗಿಣಿ ಲೇಗಿಣಿಯೇ ‖ 15 ‖
"ತಿಂಬಾದಾರ ನೀನೂ ತಿನಲಾಕ" ಹೇಳ್ತೂ ಲೇಗಿಣಿ ಲೇಗಿಣಿಯೇ
''ಹೆದುರದೇ ನೀನೂ ಮುಂದಾರೂ ಬಾರೇ'' ಲೇಗಿಣಿ ಲೇಗಿಣಿಯೇ
ಬುಡ್ ಬುಡ್ಕ್ ಲಿನ್ನೇ ಬರ್ವಲ್ಲಿ ತನಕೇ ಲೇಗಿಣಿ ಲೇಗಿಣಿಯೇ
ನಿಂಬಿಹಣ್ ವರಣಾ ಅಗೀತು ಲಿನ್ನೇ ಲೇಗಿಣಿ ಲೇಗಿಣಿಯೇ ‖ 16 ‖
ಅದ್ರನ ಹಿಡದೀ ಮಕದಾಗೆ ಲಿಟ್ಟೂ ಲೇಗಿಣಿ ಲೇಗಿಣಿಯೇ
ಮತ್ತೊಂದ ಸರನಾ ಯೇನಂದಿ ಹೊಡಿತು? ಲೇಗಿಣಿ ಲೇಗಿಣಿಯೇ
"ನಾ ಬಿಂಗ್ಳೂರ ರಾಜಾನಾ ಮಗಳ ಮದಿಯಾಗ ಬರ್ತೇ'' ಲೇಗಿಣಿ ಲೇಗಿಣಿಯೇ
ಅಂದ ಹೇಳಿ ಲಿನ್ನೇ ಸರವನ ಹೊಡಿತೂ ಲೇಗಿಣಿ ಲೇಗಿಣಿಯೇ ‖ 17 ‖
ಯೆಪ್ಪತ್ತೇಳ್ ಹೆಡಿಯ ಮಾಸೇಸಲಿನ್ನೇ ಲೇಗಿಣಿ ಲೇಗಿಣಿಯೇ
ಓಡೋಡೆ ಲಿನ್ನೇ ಬರುತಾದೇ ನೋಡೀ ಲೇಗಿಣಿ ಲೇಗಿಣಿಯೇ
" ನನ್ ತಿಂಬದಾರ್ ನೀನೂ ತಿನಲಕ್ಕ" ಲಂತೂ ಲೇಗಿಣಿ ಲೇಗಿಣಿಯೇ
ಬುಡಬುಡ್ಕೇ ಲಿನ್ನೇ ಬರವಾಗೆ ನೋಡೀ ಲೇಗಿಣಿ ಲೇಗಿಣಿಯೇ ‖ 18 ‖
ವಂದ ಹಣ್ಣಡ್ಕಿ ವರಣಾ ಲಾಗೀತು ಲಿನ್ನೇ ಲೇಗಿಣಿ ಲೇಗಿಣಿಯೇ
ಅದ್ರನಾದಾರೇ ಜುಟ್ಟಾಗ್ ಲಿಟ್ಟೂ ಲೇಗಿಣಿ ಲೇಗಿಣಿಯೇ

ಅದಕಿಂದೂ ಮುಂದೆ ನಡದೀತೂ ಕೋಳೀ ಲೇಗಿಣಿ ಲೇಗಿಣಿಯೇ
"ನಾ ಬಿಂಗ್ಲೂರ ರಾಜನಾ ಮಗ್ಳ ಮದಿಯಾಗಿ ಬತ್ತೇ" ಲೇಗಿಣಿ ಲೇಗಿಣಿಯ ‖ 19 ‖
ಅಂದೇಳಿ ಲಿನ್ನೇ ಸರವನ ಹೊಡಿತೂ ಲೇಗಿಣಿ ಲೇಗಿಣಿಯೇ
ಹದ್ನಾರ ಮೆಟ್ಟೀನಾ ಹುಲಿಯಣ್ಣಾ ಲಿನ್ನೇ ಲೇಗಿಣಿ ಲೇಗಿಣಿಯೇ
ವೋಡೋಡಿ ಲಿನ್ನೇ ಕೋಳಿಹಿಡೂಕ ಬಂತೂ ಲೇಗಿಣಿ ಲೇಗಿಣಿಯೇ
"ತಿಂಬದಾರ್ ನೀನೂ ತಿನಲಕ್ಕ..." ಲಂತೂ ಲೇಗಿಣಿ ಲೇಗಿಣಿಯೇ ‖ 20 ‖
"ಹೆದರದೇ ನನ್ನಾ ಬುಡ್ಕಲೂ ಬಾರೇ ಲೇಗಿಣಿ ಲೇಗಿಣಿಯೇ
ಹದ್ನಾರಮೆಟ್ನ ಹುಲಿ ವಂದ್ ಮೆಟ್ಟೂ ಲಾಯ್ತು ಲೇಗಿಣಿ ಲೇಗಿಣಿಯೇ
ಅದ್ರಾನ ಹಿಡುದೀ ರಟ್ಟೀಲಿಟ್ಟು ಲೇಗಿಣಿ ಲೇಗಿಣಿಯೇ
ಅದಕಿಂದೂ ಮುಂದೇ ನಡದೀತು ಕೋಳೀ ಲೇಗಿಣಿ ಲೇಗಿಣಿಯೇ ‖ 21 ‖
ಮತ್ತೊಂದ ಸರವಾ ಲೇನಂದಿ ಹೊಡಿತು? ಲೇಗಿಣಿ ಲೇಗಿಣಿಯೇ
"ಬಿಂಗ್ಲೂರ ರಾಜಾನಾ ಮಗ್ಳ ಮದಿಯಾಗಿ ಬತ್ತೇ" ಲೇಗಿಣಿ ಲೇಗಿಣಿಯೇ
"ಕೇಳಲ್ ಹೇಳಲ್ಲೋ ಬಿಂಗ್ಲೂರ ರಾಜಾ, ಲೇಗಿಣಿ ಲೇಗಿಣಿಯೇ
ನಿನ್ನಲು ಹುಡಗೀ ನಗ್ನಾಗುಕೆ ಬಂದೇ ಲೇಗಿಣಿ ಲೇಗಿಣಿಯೇ ‖ 22 ‖
ಚಿನ್ನದಾ ಕವಚಾ ತೆಗದೀ ಬೀಳಲೀ" ಲೇಗಿಣಿ ಲೇಗಿಣಿಯೇ
ಅಂದಹೇಳಿ ಕೋಳೀ ಸರವಾನ ಹೊಡಿತೂ ಲೇಗಿಣಿ ಲೇಗಿಣಿಯೇ
ಬಿಂಗ್ಲೂರ ರಾಜಾಗೇ ಯಚ್ರ ಲಾಗೀತೂ ಲೇಗಿಣಿ ಲೇಗಿಣಿಯೇ
ಚಿನ್ನಾದಾ ಕವಚಾ ತೆಗ್ದೀ ಬಿದ್ದೀತೂ ಲೇಗಿಣಿ ಲೇಗಿಣಿಯೇ ‖ 23 ‖
ಮಂಚಾದಾ ಮೇನೇ ಹೋಗಿ ಕುಂತೀತೂ; ಲೇಗಿಣಿ ಲೇಗಿಣಿಯೇ
ತೆಪ್ಪನೆ ಯೆದ್ದೀ ಕುಂತೀದ ನೋಡೀ ಲೇಗಿಣಿ ಲೇಗಿಣಿಯೇ
ಬಿಂಗ್ಲೂರ ರಾಜಾ ಕಯ್ಯನ ಮುಗದಾ ಲೇಗಿಣಿ ಲೇಗಿಣಿಯೇ
"ಇದು ಯಾವಾ ಸಂಗ್ತೀ? ಯೇನಯಾ ತಳ್ಯ?" ಲೇಗಿಣಿ ಲೇಗಿಣಿಯೇ ‖ 24 ‖
"ಯೇನೂ ಅಲಚ್ನೀ ಮಾಡುಬೇಡಾ ರಾಜಾ ಲೇಗಿಣಿ ಲೇಗಿಣಿಯೇ
ಬಿಂಗ್ಲೂರ ರಾಜನ ಮಗಳಾ ನಗ್ನಾಗೂಕ ಬಂದೇ ಲೇಗಿಣಿ ಲೇಗಿಣಿಯೇ
ಮುತ್ತಿನ ಮಂಟಪವಾ ಮಾಡಲು ಬೇಕೂ" ಲೇಗಿಣಿ ಲೇಗಿಣಿಯೇ
ರಾಜಾನಾದಾರೇ ನಗ್ನಾ ತಯ್ಯಾರ್ಸಿದಾ ಲೇಗಿಣಿ ಲೇಗಿಣಿಯೇ ‖ 25 ‖

ರಟ್ಟೀಲಾದಾರೇ ಕುಡ್ಗೀತೂ ಕೋಳೀ ಲೇಗಿಣಿ ಲೇಗಿಣಿಯೇ
ಜುಟ್ಟಾಗಾದಾರೇ ಶಡದೀತೂ ಕೋಳೀ ಲೇಗಿಣಿ ಲೇಗಿಣಿಯೇ
ಪುಕ್ಕಾನಾದಾರೇ ನಗದೀತು ಕೋಳೀ ಲೇಗಿಣಿ ಲೇಗಿಣಿಯೇ
ಪುಕ್ಕಾನಾದಾರೇ ನಗದೀತು ಕೋಳೀ ಲೇಗಿಣಿ ಲೇಗಿಣಿಯೇ ‖ 26 ‖
ಅದ್ರು ಹೆರ್ಗಲಾದಾರೇ ಹೋಗ್ವಾಗೆ ಲಿನ್ನೇ ಲೇಗಿಣಿ ಲೇಗಿಣಿಯೇ
ಬಿಂಗ್ಳೂರ್ ರಾಜಾ ವಳಗಿದ ಲಿನ್ನೇ ಹೆರ್ಗ್ ಬರುವಾನೇ ಲೇಗಿಣಿ ಲೇಗಿಣಿಯೇ
ಅವ್ನ ಕಣ್ಣೀಗೇ ನದರೀಗೆ ಬಿತ್ತೂ ಲೇಗಿಣಿ ಲೇಗಿಣಿಯೇ
"ಇದು ಯೇನೂ ಸ್ವಾಮೀ ವಿಚಿತ್ರವಾಯ್ತು" ಲೇಗಿಣಿ ಲೇಗಿಣಿಯೇ ‖ 27 ‖
ಅಂದ ಹೇಳಿಲಿನ್ನೇ ಕಲ್ಲಾಗೀನಿತ್ತಾ ಲೇಗಿಣಿ ಲೇಗಿಣಿಯೇ
ಬಿಂಗ್ಳೂರ ರಾಜ್ನಾ ಹಿಡದೇ ನಿಲ್ಲೀಸ್ದಾ ಲೇಗಿಣಿ ಲೇಗಿಣಿಯೇ
ಅದ್ರ ಕಂಡ್ಕಂಡೀ "ಹೆದ್ರವದೂ ಬೇಡಾ ಲೇಗಿಣಿ ಲೇಗಿಣಿಯೇ
ನಾನು ನಗ್ನಾಗೂಕ್ ಬಂದಾಗ ತಿಂಬೂಕ್ ಬಂದಿತೂ ಲೇಗಿಣಿ ಲೇಗಿಣಿಯೇ ‖ 28 ‖
ನಿಮ್ಗ ತೋರ್‌ಸಬೇಕ ಅಂದೇ ಹಿಡ್ಕಂಡೀ ಬಂದೇ" ಲೇಗಿಣಿ ಲೇಗಿಣಿಯೇ
ಅದ್ ಮೂರು ಪರಾಣಿನೂ ಕಿವಿಯಲ್ಲಿ ಬಂದೀತು ಲೇಗಿಣಿ ಲೇಗಿಣಿಯೇ
ಅದ್ರ ಹಣ್ಣಡ್ಕಿ ವರನಾ ಮಾಡ್ಕಂಡಿ ಲೇಗಿಣಿ ಲೇಗಿಣಿಯೇ
ಹಿಡ್ಕಂಡೀ ಲದರಾ ತಕ್ಕಂಡೆ ಲಿನ್ನೇ ಲೇಗಿಣಿ ಲೇಗಿಣಿಯೇ ‖ 29‖
ಹಿಡ್ಕಂಡಿ ಲದರಾ ತಕ್ಕಂಡ್ ಬಂದೀದೇ ಲೇಗಿಣಿ ಲೇಗಿಣಿಯೇ
ನಿಂಬೀ ಹಣ್ ವರಣಾ ಮಾಡ್ಕಂಡೆ ಬಂದೇ ಲೇಗಿಣಿ ಲೇಗಿಣಿಯೇ
ಮಗಳಾ ನಾದಾರೇ ನಗ್ನನು ಮಾಡಿ" ಲೇಗಿಣಿ ಲೇಗಿಣಿಯೇ
ಅಟ್ಟಲು ಇನ್ನೇ ಕೇಳೀದ ಲರಸೂ ಲೇಗಿಣಿ ಲೇಗಿಣಿಯೇ ‖ 30 ‖
ಮಾಳೂಗಿ ವಳುಗೇ ನೆಡದೀದ ರಾಜಾ ಲೇಗಿಣಿ ಲೇಗಿಣಿಯೇ
ವಳುಗಿದ್ದಾ ಮಡದೀ ಕರುದಿದ್ದ ರಾಜಾ ಲೇಗಿಣಿ ಲೇಗಿಣಿಯೇ
ಅದು ಕೋಳೀನೂ ಅಲ್ಲಾ, ಚಿನ್ನದಾ ವರಣಾ ಲೇಗಿಣಿ ಲೇಗಿಣಿಯೇ
ಅವಗೇಲಾದಾರೇ ಲಗ್ನಾ ಮಾಡ್ಬೇಕೂ ಲೇಗಿಣಿ ಲೇಗಿಣಿಯೇ ‖ 31 ‖
ವಳುಗಿದ್ದಾ ತಾಯೀ ಕಣ್ಣೀರಾ ಸುರಿಸ್ತೂ, ಲೇಗಿಣಿ ಲೇಗಿಣಿಯೇ
ಮಗಳಾನಾದಾರೇ ಕರಕಂಡೇ ಬಂದೂ ಲೇಗಿಣಿ ಲೇಗಿಣಿಯೇ

ಮುತ್ತಿನ ಮಂಟಪಕೇ ತಂದಿಲಿಟ್ಟವ್ರೇ ಲೇಗಿಣಿ ಲೇಗಿಣಿಯೇ
ಸೂಲಿದೇವರಿಗೇ ಕಯ್ಯಾನೇ ಮುಗಿತೂ ಲೇಗಿಣಿ ಲೇಗಿಣಿಯೇ ‖ 32 ‖
"ನನ್ನ ಮಗಳಾ ಹಣಯಲ್ಲೀ ಯೇನಬರ್‌ದಿದೆಯೋ" ಲೇಗಿಣಿ ಲೇಗಿಣಿಯೇ
"ಯೇನೇನಾಲಚ್ನೀ ಮಾಡುಬೀಡ ಲಮ್ಮಾ ಲೇಗಿಣಿ ಲೇಗಿಣಿಯೇ
ನಿಮ ದತ್ ಮಗನೂ ಲಾಗೀ ಮನೀಲೀ ಇರುತೇ" ಲೇಗಿಣಿ ಲೇಗಿಣಿಯೇ
ಲಗ್ನಲಾಕಂಡೀ ಅಲ್ಲೀ ಉಳುದಾ ಲೇಗಿಣಿ ಲೇಗಿಣಿಯೇ ‖ 33 ‖

- **ಕೆಲವು ಪದಗಳ ವಿವರಣೆ**

ಹಾರಾರ = ಬ್ರಾಹ್ಮಣರ
ಬೀಡ್ದಕ್ಕಿ = ಬೇಡಿಕೊಂಡು ಬಂದ ಅಕ್ಕಿ
ತಳ್ಯ = ವಿಷಯ
ಸರವಾ = ಸ್ವರ, ಕೋಳಿಯ ಕೂಗು
ತೊಪ್ಪನೆ = ದಬಕ್ಕನೆ (ತಕ್ಷಣ)

▪ ಹೇಳಿದವರು: **ದೇವಿ ಗಣಪತಿ ನಾಯ್ಕ,** ಊರಕೇರಿ, ೬೦ ವರ್ಷ.

⌘

# ಕಾಸೀ ದೇಸಾಂತ್ರೇ ನೆಡುದಾನೇ

ಬಾವಾ ನಂಟನು ಕೂಡೀ ಶಂಗಡ ಬೇಟಿಗೆ ಹೋಗೀ
ಶಂಗಡ ಗುಲಗಂಜೀ ಬಲಬಂದೂ ‖ 1 ‖
ಶಂಗಡ ಗುಲಗಂಜಿ ಬಲಬಂದೂ “ಬಾವಯ್ಯಾ,
ನಿನತಂಗೀ ಮಾಲಕ್ಷ್ಮಿ ಕೊಡಬೇಕೂ” ‖ 2 ‖
“ನನ ತಂಗೀ ಮಾಲಕ್ಷ್ಮಿ ಕೊಡಬೇಕು ‖ ಕೊಡುವದಾದ್ರೇ
ಹನ್ನರಡೆ ವರುಶೀನ ತಲ ದಂಡೂ ‖ 3 ‖
ಹನ್ನೆರಡು ವರುಶೀನ ತಲದಂಡ್ ಹೋಗಿ ಬರುತೇನೇ
ಆವಗೆ ಮಾಲಕ್ಷ್ಮೀ ಕೊಡತೇನೇ” ‖ 4 ‖
ಅಟ್ಟಂಬೂ ಮಾತಾ ಹೇಳಾನೆ ಲಣ್ಣಯ್ಯಾ
ತಂಗೀ ಮಾಲಕ್ಷ್ಮಿ | ಕರೂದಾನೇ ‖ 5 ‖
“ಗೆಂಟ ಕಟ್ಟಲು ಬೇಡಾ ಪಟ್ಟೇ ಉಡಲುಬೇಡಾ
ಕಲ್ಲೂ ಮಾಳುಗೀಯಾ ಇಳಿಬೇಡಾ ‖ ತಂಗಮ್ಮಾ ‖ 6 ‖
ಹನ್ನರಡ್ ವರುಶೀನಾ ತಲದಂಡೂ
ಹನ್ನೆರಡ್ ವರುಶೀನಾ ತಲದಂಡ್ಗ್ ಹೋಗಿ ಬರುತೇ” ‖ 7 ‖
ಅಟ್ಟಂಬೂ ಮಾತಾ ಕೇಳಾನ ಸಲೂಜಾಣಾ
ಕೊಟ್ಟೂಗೀ ಕದವಾ ಜಡೂದಾನೇ ‖ ಸಲೂಜಾಣ ‖ 8 ‖
ಐದ್‌ಕಂಡ್ಗ ಹೊಲಕೇ ಹೊಡೂದಾನೇ
“ಅದುವೇನೇ ಮಾಲಕ್ಷ್ಮೀ, ಇದುವೇನೇ ಮಾಲಕ್ಷ್ಮೀ ‖ 9 ‖
ಹೋಕ್ಕಾಲದ ನಿದ್ರೀ ನಿನಗೇನೇ
ಹೋಕ್ಕಾಲದಾ ನಿದ್ರಿ ನಿನಗೇನೇ ಮಾಲಕ್ಷ್ಮೀ ‖ 10 ‖
ಐದ್‌ಕಂಡ್ಗ್ ಹೊಲವಾ ಕಾಯವೇನೇ?”
ಅಟ್ಟಂಬೂ ಮಾತಾ ಕೇಳಾಳ ಮಾಲಕ್ಷ್ಮೀ
ಬಣ್ಣಾದಾ ದಾಬಾ ಬಲಗೈಲೀ ‖ 11 ‖

ಬಣ್ಣದಾ ದಾಬಾ ಬಲಗ್ಗೈಲೀ ಲಿಡಕಂಡೀ
ಕಲ್ಲೊ ಮಾಳಿಗಿಯಾ ಇಳದಾಳೇ ॥ 12 ॥
ಕಲ್ಲಾಲೂ ಮಾಳುಗೀ ಇಳದಾಳೇ ಮಾಲಕ್ಷ್ಮೀ
ಐದ ಕಂಡಗ ಹೊಲಕೇ ನೆಡುದಾಳೇ ॥ 13 ॥
ಲಿಂಬಿ ಮರದಡಿಗೇ ನಿತ್ತಿರುವ ಸುಲೂಜಾಣಾ
"ಹಾಂಗ್ ಹೋಗಾ ಕದವಾ ತಿರಗಯ್ಯಾ" ॥ 14 ॥
"ಅತ್ತೀಯಾ ಮಗನಲ್ಲ ಮತ್ತು ಸೋದರವಲ್ಲಾ
ಹಾಂಗ್ ಹೋಗಾ ಕರವಾ ತಿರಗಯ್ಯ" ॥ 15 ॥
"ಅತ್ತೀಯಾ ಮಗಾ ಹೌದು ಮತ್ತೂ ಸೋದರ ಹೌದು
ಹಾಂಗ್ ಹೋಗಾ ಕರವಾ ತಿರಗಯ್ಯಾ" ॥ 16 ॥
ಅಟ್ಟಂಬೂ ಮಾತಾ ಕೇಳಾನೆ ಸುಲೂಜಾಣಾ
ಕೊಟ್ಟೂಗೀಗ ಕರವಾ ಜಡದಾನೇ ॥ 17 ॥
ಕೊಟ್ಟೂಗೀಗೇ ಕರವಾ ಜಡದಾನೆ ಸುಲೂಜಾಣಾ
ಬೆಳ್ಳೀ ದಾಬುನಲ್ಲಿ ಬಿಗುದಾನೇ ಸುಲೂಜಾಣಾ ॥ 18 ॥
ಕಲ್ಲೊ ಮಾಳುಗಿಗೇ ನೆಡದಾನೆ
ಕಲ್ಲಲೂ ಮಾಳುಗಿಗೇ ನೆಡದಾನೆ ಸುಲೂಜಾಣಾ
ಅಲ್ಲೀ ಉಂಡಿದುರೂ ವಡನೂಟಾ ॥ 18 ॥
ಅಟ್ಟಂಬೂ ಮಾತಾ ಕೇಳಾವ್ನೆ ಲಣ್ಣಯ್ಯ
ಹನ್ನೆರಡ ವರುಶೀನಾ ತಲದಂಡೂ ॥ 19 ॥
ಹನ್ನೆರಡೂ ವರುಶೀನಾ ತಲದಂಡೂ ಹಿಂದಾಲೆ ಬಂದೀ
ತಂಗೀಯಾ ಕರದೇ ನುಡೀದಾನೆ ॥ 20 ॥
"ಮೊಕವೇಕೇ ಬಾಡೀತೇ? ನೆರಿಯಾಕೇ ಕುಂದೀತೇ?
ಸೀರಿ ನೆರಿಮುಡಿಯೂ ಸಡಲೀತೇ? ॥ 21 ॥
ಸೀರೀಯೂ ನೆರಿಮುಡಿ ಸಡಲಾಯ್ತು ತಂಗಮ್ಮಾ
ಗೋವೇ ಜಂಗಮ್ಮಾಗೊಲಿದ್ಯೇನೇ ॥ 22 ॥

ಹಂಡನೂ ಹಾದೀತೂ ಹುಂಡಿನೂ ಲೊದ್ದೀತೂ
ಶಣ್ಣಾಕೊಡಿನ್ಯೇಮ್ಮೇ ಶಳುದೀತೂ?" ‖ 23 ‖
"ಶಣ್ಣಲೂ ಕೋಡೀನ್ಯೆಮ್ಮೇ ಶಳುದೀತೂ ಲಣ್ಣಯ್ಯ
ಸೀರೀ ನೆರಿಮುಡಿಯೂ ಸಡಲಾಯ್ತೂ" ‖ 24 ‖
ಅಟ್ಟಂಬೂ ಮಾತಾ ಕೇಳಾನೆ ಲಣ್ಣಯ್ಯ
ಅರವತ್ತೂ ಗೆಣ್ಣೀನಾ ಹರಕೋಲಾ | ಹರಕೋಲಾ ತಡಕಂಡೀ
ಅರೂಮುರುಪೆಟ್ಟಾ ಹೊಡದಾನೇ ‖ 25 ‖
"ನನಗೇಕೇ ಹೊಡುತೀಯೊ? ನನಗೇಕೇ ಬಯ್ದೀಯೋ
ನನ್ನಾ ಕೋಡ್ಯೇಕೇ ಕೊಯ್ದಿಯೋ? ‖ 26 ‖
ನನ್ನಾಲೂ ಕೋಡ್ಯಾಕೆ ಕೊಯ್ದಿಯೋ ಲಣ್ಣಯ್ಯಾ,
ಗೋವೀ ಜಂಗಮ್ಮಾಗೊಲೀದಾಳೇ" ‖ 27 ‖
ಅಟ್ಟಂಬೂ ಮಾತಾ ಕೇಳಾನೇ ಲಣ್ಣಯ್ಯಾ
ತಮ ಬಾವಾನಾ ಕರದಾನೇ ‖ 28 ‖
"ಹಾದಿಗೆ ಹಂದರ ನೀಡೂ ಬೀದಿಗೆ ಚಪ್ಪರ ನೀಡು
ಮದವೇ ಸಂಗ್ರಮ್ಮ ಕನಕೊಳ್ರೋ ‖ 29 ‖
ಮದವೀಯಾ ಸಂಗ್ರಮ್ಮಾ ಕನಕೊಳೋ" ಲಂದ ಹೇಳೀ
ಕಾಸೀ ದೇಸಾಂತ್ರೇ ನೆಡುದಾನೇ ‖ 30 ‖

- **ಕೆಲವು ಪದಗಳ ವಿವರಣೆ**

ಜಡುದಾನೆ = ಜಡಿದನು, ಶಬ್ದವಾಗುವಂತೆ ಬಾಗಿಲು ಹಾಕಿದನು
ಹೊಕ್ಕಾಲ = ಹೋಗುವ ಕಾಲ, ಹಾಳಾಗುವ ಕಾಲ
ನೆರಿ = ಸೀರೆಯ ನಿರಿ
ಶಳುದೀತು = ಸೆಳೆಯಿತು
ಗೆಣಲ್ಲಿ = ಗಂಟು
ಸಂಗ್ರಮ್ಮ = ಸಂಗ್ರಹ
ಅವಶ್ಯ ಸಿದ್ಧತೆ ಅನಕೊಳ್ಳೊ = ಅನುವಾಗು
ದಾಬು = ಪಶುವನ್ನು ಕಟ್ಟುವ ಹಗ್ಗ

▪ ಹೇಳಿದವರು: **ಮಾದೇವಿ ನಾರಾಯಣ ನಾಯ್ಕ**, ಗೇರಸೊಪ್ಪೆ.

# ಕಾಳಿಂಗರಾಯ

ಕತ್ತಲರಾಯನೇ ಚಿತ್ರೊಳ್ಳಾ ಬಿನುಮಣ್ಣಾ
ಮುಪ್ಪಿನ ಕಾಲಕ್ವಂದೂ ಪಲವಿಲ್ಲಾ ‖ ಕತ್ತಲರಾಯಾ
ಸೂಲೀಸಕುರಮನಾ ಪುರೂಕೋದ ಸುವ್ವೆ ‖ 1 ‖
"ಕೇಳ್ ಕೇಳಿ ಯಲುಸ್ವಾಮೀ, ನೀವ್ ಕೇಳೇ ಯಲುಸ್ವಾಮೀ
ಮಕ್ಕಳ ಪಲವೇ ನನಗಿಲ್ಲಾ ಸುವ್ವೇ ‖
ಮಕ್ಕಳ ಪಲವೇ ನನುಗೆಲ್ಲಾ ಯಲು ಸ್ವಾಮೀ ‖ 2 ‖
ಮಕ್ಕಳ್ ಪಲವಾ ಕೊಡು ಸ್ವಾಮೀ ಸುವ್ವೇ,
ಕೊಡುಬೇಕು " ಲಂದೇಳೀ ‖
ಕತ್ತಲರಾಯಾ ನುಡ್ದನೇ ಸುವ್ವೇ ‖ 3 ‖
ಅಟ್ಟಂಬೂ ಮಾತಾ ಕೇಳೀದಾ ಯಲುಸ್ವಾಮೀ
ಮಾವೀನ ಹಣ್ಣಾ ಕೊಡೂವನೆ ಸುವ್ವೇ
"ಕೇಳ್ ಕೇಳೋ ಕತ್ತಲರಾಯಾ ನೀ ಕೇಳೋ ಕತ್ತಲ ರಾಯಾ
ಮಡುದೀ ಮಾಲಕ್ಷ್ಮೀಗೆ ಕೊಡುಬೇಕೋ ಸುವ್ವೆ ‖ 4 ‖
ಅಟ್ಟಂಬೂ ಮಾತಾ ಕೇಳಿದ ಕತ್ತಲರಾಯಾ
ಹಿಂತಿರುಗೀ ಮನಿಗೇ ಬರೂವನೇ ಸುವ್ವೇ ‖ ಬರುವ ಕತ್ತಲರಾಯಾ
ಮಡುದಿ ಮಾಲಕ್ಷ್ಮೀ ಕರೂದನೆ ಸುವ್ವೇ ‖ ಕರುದ ಕತ್ತಲರಾಯಾ
ಮಡದೀ ಮಾಲಕ್ಷ್ಮೀಗೆ ಕೊಡುವನೇ ಸುವ್ವೇ ‖ 6 ‖
ವಂದಂಬು ತಿಂಗಳಾ ಲಾಗಿತ್ ಮಾಲಕ್ಷ್ಮೀಗೇ
ವಂದೆಲೇ ಗೊಂಡಾ ರಸಬಾಳೀ ಸುವ್ವೇ
ವಂದಲೇ ಗೊಂಡಾ ರಸಬಾಳಿ ಹಣ್ಣಿನ್ನೇ
ತಿನ್ನಬೇಕಂಬೂ ಬಯಕಿಯೇ ಸುವ್ವೆ ‖ 7 ‖
ಯಿಯ್ದುಂಬ್ ತಿಂಗಳಾಽ ಲಾಗಿತ್ ಮಾಲಕ್ಷ್ಮೀಗೇ
ಯೆಯ್ದೆಲೇ ಗೊಂಡಾ ರಸಬೊಕ್ಕೆ ಸುವ್ವೆ ‖ ರಸಬೊಕ್ಕೆ ಹಣ್ಣಾನೇ
ತಿನ್ನಬೇಕಂಬೂ ಬಯಕೀಯೇ ಸುವ್ವೇ ‖ 8 ‖

ಮೂರಂಬು ತಿಂಗಳಾ ಲಾಗಿತು ಮಾಲಕ್ಷ್ಮೀಗೇ
ಮೂರ್ ಹಣವಿಗೆ ಕೊಂಡಾ ಹರಿಯಳಾ ಸುವ್ವೇ
ಮೂರ್ ಹೊನ್ನಿಗೆ ಕೊಂಡಾ, ಹರಿಯಳಾದೊಳಗಿನ್ನೇ
ತಾ ಉಣ್ಣುವೆಲೆಂಬಾ ಬಯಾಕಿಯೇ ಸುವ್ವೇ ‖ 9 ‖
ನಾಕಂಬ್ ತಿಂಗಳಾ ಲಾಗಿತ್ ಮಾಲಕ್ಷ್ಮೀಗೇ
ನಾಕ್ ಹಣವಿಗೆ ಕೊಂಡ ಹೊಸಪಟ್ಟೀ ಸುವ್ವೇ ‖ ಹೊಸಪಟ್ಟೀ ಸೇರೀಯ
ತಾ ಉಡ್ವೇನೆಂಬಾ ಬಯಕೀಯೇ ಸುವ್ವೇ ‖ 10 ‖
ಐದಂಬು ತಿಂಗಳಾ, ಲಾಗಿತು ಮಾಲಕ್ಷ್ಮೀಗೇ
ಐದ್ ಹಣವಿಗೆ ಕೊಂಡಾ ಹೊಸಚಿನ್ನ ಸುವ್ವೇ ‖ ಲೇಗಿನ್ನೆ
ತಾ ನಿಡ್ವೆನಂಬಾ ಬಯಾಕೀಯೇ ಸುವ್ವೇ ‖ 11 ‖
ಆರಂಬು ತಿಂಗಳಾ ಲಾಗಿತು ಮಾಲಕ್ಷ್ಮೀಗೇ
ಹಾಲು ಚಣ್ಣಕ್ಕೀ ಉಣಬೇಕೋ ಸುವ್ವೇ
ಹಾಲು ಸಣ್ಣಕ್ಕೀ ಉಣಬೇಕುಲಂದೇಳೀ
ಮತ್ತೆ ಮಾಲಕ್ಷ್ಮೀ ಬಯಕಿಯೇ ಸುವ್ವೇ ‖ 12 ‖
ಯೇಳಂಬು ತಿಂಗಳಾ ಲಾಗಿತು ಮಾಲಕ್ಷ್ಮೀಗೇ
ಯೇಳೆಲೆಗೊಂಡಾ ರಸಬಾಳೀ ಸುವ್ವೇ ‖ ಯೆಲಿಮೇನ್ನ
ಉಣ್ಣಬೀಕಂಬೂ ಬಯಕಿಯೇ ಸುವ್ವೇ ‖ 13 ‖
ಯೆಂಟಂಬು ತಿಂಗಳಾ ಲಾಗಿತು ಮಾಲಕ್ಷ್ಮೀಗೇ
ಯೆಂಟಹಣವಿಗೆ ಕೊಂಡಾ ರಸಮಲುಗೀ ಸುವ್ವೇ ‖ ಹೂಗನ್ನೇ
ತಾಮುಡ್ವೆನಂದೀ ಬಯಕಿಯೇ ಸುವ್ವೇ ‖ 14 ‖
ವಂಬತ್ ತಿಂಗಳಾ ತುಂಬಿತೆ ಮಾಲಕ್ಷ್ಮೀಗೆ
ಬೇಸರಕೀ ಬಾಳೂ ದಣೂಬಾಳೂ ಸುವ್ವೇ ‖ ಮಾಲಕ್ಷ್ಮೀಗೇ
ಗಂಡು ಸಂತನವಾ ಹಡಿದಳೇ ಸುವ್ವೇ ‖ ಹಡುದಳೇ ಕತ್ತಲರಾಯಾ
ಜೋಯಿಸರ ಮನಿಗೇ ನೆಡೆದನು ಸುವ್ವೇ ‖ ಕತ್ತಲರಾಯ ‖ 15 ‖
“ಬಾಲೆ ಹುಟ್ಟಿದ ಗುಳುಗೀ ನನಗೇಳೀ” ಸುವ್ವೇ
“ದೆನವೂ ವಳ್ಳದೋ ಗಳಗೀನೂ ವಳ್ಳದೋ

ಕಾಳಿಂಗನಂಬೂ ಹೆಸುರಲ್ಲೋ ಸುವ್ವೇ ‖ ಕತ್ತಲರಾಯಾ
ಹನ್ನೈಡ್ ವರಸೀನಾ ದಿನದಲ್ಲಿ ಸುವ್ವೇ ‖ ಕತ್ತಲರಾಯಾ ‖ 16 ‖
ಹುಲಿರೂಪಾ ಕಂಡೀ ಮಡುದೋತ" ಸುವ್ವೇ
ಅಟ್ಟಂಬೂ ಮಾತ ಕೇಳಿದ ಕತ್ತಲರಾಯಾ
ಹಿಂತಿರುಗೀ ಮನಿಗೇ ಬರೂವನೆ ಸುವ್ವೇ | ಬರುವ ಕತ್ತಲರಾಯಾ
ಮಡುದಿ ಕೂಡ್ಯೇನಾ ನುಡೂದನೆ? ಸುವ್ವೇ ‖ 17 ‖
"ದೆನವು ವಳ್ಳದೇ ಗಳುಗಿನೂ ವಳ್ಳದೇ
ಕಾಳಿಂಗನಂಬೂ ಹೆಸೂರಲ್ಲೀ ಸುವ್ವೇ ‖ ಹೆಸರಲ್ಲೇ ಮಾಲಕ್ಷ್ಮೀ
ಹನ್ನೈಡ ವರುಸೀನಾ ಲಾಯಿಸ್ವಂತೇ ಸುವ್ವೇ ‖ ಆಯಿಸ್ವಂತೇ ಮಾಲಕ್ಷ್ಮೀ
ಹುಲಿರೂವಾ ನೋಡೀ ಮಡಿದೋಗ್ವಾ" ಸುವ್ವೇ ‖ 18 ‖
ಅಟ್ಟಂಬೂ ಮಾತಾ ಕೇಳಿತ್ತೂ ಮಾಲಕ್ಷ್ಮೀ
ಮತ್ತೇ ಕಡುದುಕ್ಕಾ ಬಿಡೂವದೂ ಸುವ್ವೇ ‖ ಬಿಡುವದೇ ಮಾಲಕ್ಷ್ಮೀ
ಆರು ಮೂರು ವರುಸಾ ಗಳೂತನುಕಾ ಸುವ್ವೇ
ಆರು ಮೂರ್ ವರುಸಾ ಗಳುದವೇ ಲೀಗಿನ್ನೇ
ಹನ್ನೈಡ್ ವರುಸೀನಾ ಪರಾಯಕೇ ಸುವ್ವೇ ‖ 19 ‖
"ಕೇಳು ಕೇಳೆ ನನು ತಾಯೇ, ನೀಕೇಳೇ ನನು ತಾಯೇ
ಅಂಬು ಬಿಲ್‌ಯೆಯ್ಡಾ, ಮಾಡಿಕೊಡೇ ಸುವ್ವೇ ಲಂಬಾಗೇ
ಮಾಲಕ್ಷ್ಮೀ ಮಾಡೀ, ಕೊಡೂವದೂ ಸುವ್ವೇ ಲಾಗಿನ್ನೇ
ಊರ ಮಕ್ಕಳಾ ಕುರಕಂಡಾ, ಸುವ್ವೇ ‖ ಕರಕಂಡಾ ಕಾಳಿಂಗಾ
ಹಕ್ಕಿಬೇಟೆಗೇ ನೆಡೀದನೆ ಸುವ್ವೇ ‖ ನೆಡದನೆ ಕಾಳಿಂಗಾ
ವಂದಂಬೂ ಬಿಲ್ಲಾ ಯಸೂದನೇ ಸುವ್ವೇ ‖ ಯಸದನೇ ಕಾಳಿಂಗಾ ‖ 20 ‖
ಹುತ್ತಿನಾ ಗುಡ್ಡೀ ಕೆಳುಗಿನ್ನೇ ಸುವ್ವೇ ‖
ವಂದಂಬೂ ಬಾಣಾ ಹೊಡುದಾನೇ ಸುವ್ವೇ ‖ ಲೇಗಿನ್ನೇ
ಇನ್ನೊಂದು ಬಾಣಾ ಲೆಸದಾನೇ ಸುವ್ವೇ ‖ ಯೆಸ್ವರೊಳಗಿನ್ನೇ
ಹುಲಿರೂವಾ ಕಂಡೀ ಮಡದಾನೇ ಸುವ್ವೇ ‖ ಕಾಳಿಂಗಾ ‖ 21 ‖

ಮಕ್ಕಳ್ಯೇಗೆ ಮನಿಗೆ ಬರುವರು ಸುವ್ವೇ ||
“ಕೇಳಿರೋ ಕೇಳ್ಯೋ ಕೇರಿಯಾ ಹುಡುಗಾರಾ
ಕಾಳಿಂಗ ಯೆಲ್ಲಿಗೋಗೀ, ಬರಲಿಲ್ಲಾ ಸುವ್ವೇ || ಲೇಗಿನ್ನೇ
ಕಾಳಿಂಗಾನಾ ತಂದೀ ನೀವ್ ಕೊಡುಬೇಕೂ'' ಸುವ್ವೇ || 22 |||
“ಕೇಳಿಲ್ಲೇ ಕೇಳೇ ನೀಕೇಳೇ ಯೆಲು ಹೆಣ್ಣೇ
ನಿನ ಕಾಳಿಂಗಾ ಹುತ್ತಿನಾ ಕೆಳಗೇ ಮಡದಾನೇ” ಸುವ್ವೇ ||
ಅಟ್ಟಂಬೂ ಮಾತಾ, ಹೇಳುವ ತನುಕಿನ್ನೇ
ಮತ್ತೇ ದೂಕ್ಕಾವಾ ಬಿಡುತದ್ಯೇ ಸುವ್ವೇ || ಬಿಡ್ವಂತಾ ಸಮ್ಯದಲ್ಲೀ || 23 ||
ಕತ್ತಲರಾಯ ವೋಡ ಹೋಗೀ, ತರೂವನೆ ಸುವ್ವೇ ||
ಕತ್ತಲರಾಯ ಹೋಗೀ ತರ್ವಂತಾ ಸಮಿದಲ್ಲೀ
ಹಾಳ್‌ಬಿದ್ ದೇವಸ್ತಾನದಾ ವಳುಗಿಟ್ವಾ ಸುವ್ವೇ ||
ಹಾಳ್‌ಬಿದ್ ದೇವಸ್ತಾನಾದ ವಳುಗಿಟ್ವಾ ಕತ್ತಲರಾಯ || 24 ||
ಕದ್ವಮೀಡವಾ ಜಡದನೇ ಸುವ್ವೆ ||
ಹಿಂತಿರಗೀ ಮನಿಗೇ ಬರವನೇ ಕತ್ತಲರಾಯಾ
ಕೇರೀ ಮೇನಿನ್ನೂ ನೆಡೂದನೆ ಸುವ್ವೇ || 25 ||
“ಅಚಿಕೇರಿ ಅಕ್ಕದೀರಾ, ಇಚಿಕೇರೀ ತಂಗದೀರಾ
ಹತ ಹೇರೂ ಹೊನ್ನಾ ಕೊಡುತೇನೇ ಸುವ್ವೇ || ಕೊಡುತೇನಕ್ಕಾದಿರಾ,
ಸತ ಹಣಕೆ ಹೆಣ್ಣಾ ನೀವ್ ಕೊಡೀ” ಸುವ್ವೇ || 28 ||
ಅಟ್ಟಂಬೂ ಮಾತಾ ಹೇಳೂವ ತನಕಿನ್ನೇ
ಅಕ್ಕದೀರ್ ಯೇನಾ ನುಡುದಾರೇ? ಸುವ್ವೇ ||
“ಕೇಳಿರಿ ಕೇಳಿ ಪುರಿಸಾರೆ, ನೀವೇ ಕೇಳೀ
ಆರಂಬೂ ಹೆಣ್ಣು ನಮಗಂಟೇ ಸುವ್ವೇ || ನಮಗುಂಟು ಯಲಸ್ವಾಮಿ || 29 ||
ಚೆನ್ನಮ್ಮಾ ಮಗಳೂ ಕೊಡುವಾನಿ ಸುವ್ವೇ || ಪುರಿಸಾರೇ
ಹತ್ತೇರೂ ಹೊನ್ನಾ ಲಳುಕಂಬಾ” ಸುವ್ವೇ
ಅಟ್ಟಂಬೂ ಮಾತಾ, ಕೇಳಿತೂ ಲಾಜಾಣೇ
ಹತ್ ಹೇರು ಹೊನ್ನಾ ಲಳುಕಂಡೀ ಸುವ್ವೇ || ಲ್ಯೇಗಿನ್ನೇ || 30 ||

ಚನ್ನಮ್ಮ ಮಗಳಾ ಕೊಡುವಾರೆ ಸುವ್ವೇ ‖ ಕರಕಂಡೀ ಬಂದನೂ
ಹಾಳಬಿದ್ ದೇವಸ್ತಾನದಾ ಒಳಗಿಟ್ಟು ಸುವ್ವೇ ‖ ಕತ್ತಲರಾಯ
ಕದ್ವ ಮೆಡವಾ ಜಡುದಿದ್ದಾ ಸುವ್ವೇ ‖ ಜಡದನೆ ಕತ್ತಲರಾಯ
ತನ್ನ ಅರಮನಿಗೆ ತಾ ನಡದನೇ ಸುವ್ವೇ ‖ 31 ‖
ಮೂರು ಯೆಳ್ಳುಂಡೀ ತಾಯಮ್ಮ ಕೊಟ್ಟಿದಾಳೆ
ಅದ್ರುಕಟ್ಟಿಲ್ಯೇಗೇ ಬರುತಾಳೆ ಸುವ್ವೇ ‖ ಬರ್‍ವದು ಚೆನ್ನಮ್ಮ
ಕತ್ತಲರಾಯ ಹೋಗ್ವಂತಾ ಸಮಿದಲ್ಲೀ
ಮೂರು ಯೆಳ್ಳುಂಡೀ ಮುರೀತಾಳೆ ಕಟ್ಟುತಾಳೆ ‖ 32 ‖
ಮತ್ತೆ ಲೀಗ್ಯೇನಾ ನುಡಿತಾಳೇ ಸುವ್ವೇ ಚೆನ್ನಮ್ಮಾ
"ಮತ್ತೆಲಿದುವೇನೂ ವಿಪುರೀತಾ" ಸುವ್ವೇ
ಅಟ್ಟಂಬೂ ಮಾತಾ ಹೇಳೂವ ತನುಕಿನ್ನೇ
ಪಾರ್ವತಿ ಪರುಮೇಸ ಆಲ್ ಬರುತಾರೆ ಸುವ್ವೇ ‖ ಬಂದುಲ್ಯೇನಂಬೂರೆ ‖ 23 ‖
"ಕೇಳಲ್ಲೇ ಕೇಳೇ ನೀ ಕೇಳೇ ಸುವ್ವೇ ‖ ಯಲು ಮಗುವೆ,
ಅಲ್ ಮಲಗಿದರಾತು? ಅವನ್ಯಾರೇ? ಸುವ್ವೇ
ಮಲಗಿದಾರಾತು ಅವನ್ಯಾರೆ" ಲಂಬಾಗೇ ‖ 34 ‖
"ನನಗೆ ಯೇನೀಗೆ ಗುರುತಿಲ್ಲ ಸುವ್ವೆ ‖
ಮತ್ತೆ ಯಾರಂದೀ ಗುರುತಿಲ್ಲ ಯಲು ಸ್ವಾಮೀ"
ಅಟ್ಟಂಬು ಮಾತಾ, ನುಡುದಳು ಸುವ್ವೇ ‖ ನುಡ್ವರೊಳಗೆ ಲೀಗೇ
ಮತ್ತೆಲೀಗ್ಯೇನಾ ನುಡುದರೇ? ಸುವ್ವೆ ‖ 35‖
"ಕೇಳಲ್ಲೆ ಕೇಳೇ ಯೇ ಮಗುವೆ, ನೀ ಕೇಳೇ
ಅವ್ನಕಯ್ಯನೇ ಹಿಡದೀ ಕೊಳ್ಸಬೇಕೇ" ಸುವ್ವೇ
ಅಟ್ಟಂಬೂ ಮಾತಾ ಹೇಳುವ ತನಕಿಲ್ಲಿ
ಯಯ್ದು ಕಯ್ಯಲ್ಲೀ ನೆಗ್ದೆ ಕುಳುಸದ್ಯೇ ಸುವ್ವೇ ‖ ಕುಳ್ಸೂವ ಸಮೀದಲ್ಲೀ ‖ 36 ‖
ಸ್ವಾಮೀ ಮಾಯಾಗೀ ನೆಡುದಿರೆ ಸುವ್ವೇ ‖ ಹೋಗುವಾಗೆ ಲೀಗಿನ್ನೇ
ಬಿಳ್ಳುಮೂಡಿನ್ನೂ ಬೆಳುಗಾಗೀ ಸುವ್ವೇ ‖ ಬೆಳೂಗಾಗೂ ಸಮಯಕ್ಕೇ
ಕತ್ತಲರಾಯೇನಾ ಮಾಡುವನೇ? ಸುವ್ವೇ ‖ ಮಾಡಿದಾ ಲೇಗಿನ್ನೇ
ಬೆಂಕಿಪೆಟ್ಟಿಗೆಯ ತಡದನೇ ಸುವ್ವೇ ‖ ತಡದನೆ ಕತ್ತಲರಾಯಾ ‖ 38 ‖

ಸೌದಿಕೋಲಿಟ್ಟೂ ಹಿಡುಕಂಡೀ ಸುವ್ವೇ ‖ ಕತ್ತಲರಾಯಾ
ಹಾಳ್‌ಬಿದ್ ದೇವಸ್ತಾನಕೇ ಬರುವನೇ ಸುವ್ವೇ ‖ ಬರ್‌ವಂತಾ ಸಮಿದಲ್ಲಿ
ಮಕ್ಕಳ ಪಗಡಿಯಾ ಹೂಡರೆ ಸುವ್ವೇ ‖
ದೇವರ ಮನಿ ಕದವಾ ತೆಗ್ದು ಕತ್ತಲರಾಯ ‖ 39 ‖
ಪಗಡಿಯಲಾಟ ಲಾಡ್ವದ ನೋಡಿನ್ನೇ
ಯೆದ್ದಿ ಹೆರಗಿನ್ನ ನೆಡದನೆ ಸುವ್ವೇ ‖
ಹಕ್ಕಿ ಬೇಟೆಯ ಮಾಡಿದನೆ ಸುವ್ವೇ ‖ ಕತ್ತಲರಾಯಾ
ಬೆಂಕಿಪೆಟ್ಗಿ ಹೊಡ್ದೀ ಕತ್ತಸಿದ ಸುವ್ವೇ ‖ 40 ‖
ಬೆಂಕಿಪೆಟ್ಗಿ ಹೊಡ್ದೀ ಕತ್ತಸಿದಾ ಸುವ್ವೇ ‖ ಕತ್ತಸಿದಾಲೀಗಿನ್ನೇ
ದವಸದ ಮೇನೇ ಹೆಕ್ಕಿ ಗರುದನೇ ಸುವ್ವೇ ‖ ಗರುದಿದ್ದಾ ಲೇಗಿನ್ನೇ
ಮತ್ತೇ ದೇವಸ್ತಾನಕೇ ಬರುವನೇ ಸುವ್ವೇ ‖ ಬರ್ವ ಕತ್ತಲರಾಯಾ
ಚನ್ನಮ್ಮ ಸೊಸ್ಯಾ ಮೆಚ್ಚಿಕಂಡಾ ಸುವ್ವೇ ‖ ಕರೆಕಂಡ ಕತ್ತಲರಾಯಾ ‖ 41 ‖
ಮಗ್ನ ಕೈಹಿಡದೀ ಕರಕಂಡಾ ಸುವ್ವೇ ‖ ಕತ್ತಲರಾಯಾ
ತನ್ನಲರಮನೆಗೇ ತರುವನೆ ಸುವ್ವೇ?
ತನ್ನಲರಮನಿಗೇ ಬಂದೀ ಲ್ಯೇನಂಬೂವಾ?
"ಕೇಳಲ್ಲೇ ಕೇಳೇ ಮನಿಮಡದೀ ಸುವ್ವೇ ‖ ನೀನೀಗೇ ‖ 42 ‖
ನಿನ ನೊಸಿಯು ಚೆನ್ನಮ್ಮಾನಾ ಕರುಕೊಳೇ" ಸುವ್ವೇ
ಅಟ್ಟಂಬೂ ಮಾತಾ ಕೇಳಿತ್ತು ಮನಿಮಡುದೀ
ವೋಡೋಡೀ ಸೊಸ್ಯಾ ಕರಕಂಡ್ತೇ ಸುವ್ವೇ ‖ ಕರಕಂಡೀ ಲ್ಯೇಗಿನ್ನೇ
ಪಟ್ಟೆಮಂಚದಲ್ಲೀ ಕುಳುಸದ್ಯೇ ಸುವ್ವೇ
ಮುತ್ತಾ ಕಂಡಂತೇ ಸಲುಗೂದೇ ಸುವ್ವೇ ‖ 43 ‖

- **ಕೆಲವು ಪದಗಳ ವಿವರಣೆ**

ಹರಿಯಳಾ = ಹರಿವಾಣ

ಮಡುದೋತ = ಸತ್ತು ಹೋಗುತ್ತಾನೆ

▪ ಹೇಳಿದವರು: **ದಿ. ನಾಗಮ್ಮ ನರಸ ನಾಯ್ಕ,** ಮಿರ್ಜಾನ, ದಿನಾಂಕ: 05-04-72.

# ಸೂರ್ಯಚಕ್ರ

(ಪ್ರತಿ ಸಾಲಿನ ಕೊನೆಗೆ 'ತಂದಾನಂದಾನಾವೇ' ಅನ್ನಬೇಕು)

ಸೂಲಿ ಚಕ್ಕರಾ ಪರದಾನಿ ತಮ್ಮಾ | ತಂದಾನಂದಾನಾವೇ
ಇಂದ್ರಜ್ಯೋತ್ಯಂಚೂ ಯೇ ಅರಸೂ ಅಣ್ಣಾ
ವಂದಲ್ಲಾ ವಂದೂ ರಾಜ್ಯಾದಲ್ಲೋ
ವಂದಲ್ಲಾ ವಂದೂ ಸಿಮ್ಯಾದಲ್ಲೀ
ಕಾಗತ ಪತ್ತುರವೇ ಬಂದಿತೂ ಸಿವನೇ ‖ 1 ‖
ಬಂದಾ ಕಾಗಿತವಾ ವಡದು ವೋದವನೇ
ಬೂಮಿಗೆ ಮುರಜ್ಯಾಗೀ ಬಿದ್ದೀದಾ ಅಣ್ಣಾ
ಅಣ್ಣ ಸಂತರಸೀ ಕುಳಸೀದ ತಮ್ಮಾ
"ಕೇಳಲ್ ಕೇಳಲ್ಲೋ ನನ್ನಾ ತಮ್ಮಾ ‖ 2‖
ದಂಡೀಗಾದಾರೇ ಬರಬೇಕು ಲಂದೀ
ಕಾಗತ ಪತ್ತರವೇ ಬಂದೀತು ನೋಡೂ
ದಂಡೀ ಗಾದಾರೆ ಬಾರಾದಿದ್ದಾರೇ
ನಮ್ಮ ರಾಜಗಳಾ ಬಿಟ್ಟೀಕೊಡಬೇಕೂ ‖ 3 ‖
ನಮ್ಮ ರಾಜಗಳಾ ಬಿಟ್ಟೀಕೊಡದೀರೇ
ಹೆಣ್ ಹೆಂಗ್ಸ್ರಕಿಂದೂ ಕಡಿಯಾಂತ್ರೋ ತಮ್ಮಾ
ನಾ ದಂಡೀಗಾದಾರೇ ಹೋಗಿನ್ನು ಬರುತೇ"
ಅಂದೇಳಿ ಲೇಗೇ ನುಡಿದಾನೇ ಲಣ್ಣಾ ‖ 4 ‖
"ಕೇಳಲ್ ಕೇಳಲ್ಲೋ ನನ್ನಾಲು ಅಣ್ಣಾ
ಆಯಿದ್ಯಗಳು ನಿನಗೇ ತಿಳಿಯವೊ ಲಣ್ಣ
ನಾನೂಲಾದಾರೇ - ಹೋಗಿನ್ನು ಬತ್ತೆ ತಿಳಿಯವಾ ಲಣ್ಣ"
ಅಂದೇಳೀಲಿನ್ನೇ ನುಡಿದಾನೆ ತಮ್ಮಾ ‖ 5 ‖
ಲಣ್ಣನಾದಾರೇ ಲೇನ ಹೇಳೀದಾ?
"ನಿನ್ನಾಲು ಮಡದೀ ಚಿಕ್ಕವ್ವ ತಮ್ಮಾ

ನನ್ನಾಲು ಮಡದೀ ಸಮುರಂತಿ ತಮ್ಮಾ
ನಾ ದಂಡೀ ಗೋಗೀ ಬರುತೇ" ನಂದಾ ‖ 6 ‖
ಯೇನೇನ್ ಹೇಳಿದರೂ ಕೇಳುದೆಲ್ಲಾ ತಮ್ಮಾ
"ತಾನೇ ಲಾದಾರೇ ಹೋಗಿನ್ನೆ ಬರುತೇ"
ಅಟ್ಟಂಬೂ ಮಾತಾ ಹೇಳೀದರು ಯೇಗೇ
ವಳಗಿದ್ದ ತಾಯಾ ಹೆರುಗೇ ಕರುದಾರೇ ‖ 7 ‖
"ಕೇಳಲ್ ಕೇಳಲ್ಲೇ ನೀ ಕೇಳೇ ತಾಯೇ
ಗಾಡಾದಿಂದಡಗೀ ಮಾಡಾಬೇಕಂ"ದಾ
"ದಂಡೀಗಾದಾರೇ ಸವ್ನವ್ನೇ ನಾನೂ"
ಅಟ್ಟಂಬೂ ಮಾತಾ ಕೇಳೀತು ತಾಯೀ ‖ 8 ‖
ಮುತ್ತೀನ ಕಣ್ಣೀರಾ ಶಡದಾಳೂ ತಾಯೀ
ಬಚ್ಚಲಕೇ ಕಿಚ್ಚಾ ನುರುದೀತು ತಾಯೀ
ಮಿಂದಳೇ ವಗುದಾಳೇ ಚಂದ್ರ ಬಟ್ಟಿಟ್ಟೀ
ಮಿಂದೆಲ್ಲೀ ಮಡಿಯಾ ವಗೂದುಟ್ಟೀ ‖ 9 ‖
ಮಾಳೂಗೀ ವಳಗೇ ಬರುವದೂ ತಾಯೀ
ಗಾಡಾದಿಂದಡಗೀ ಮಾಡೀತೂ ತಾಯೀ
ಮಾಳೂಗೀ ಹೆರಗೇ ಬಂದೀತೂ ತಾಯೀ
"ಆಯೀತೂ ಅಡಗೀ ಕಾದೀತು ಬಿಸಿನೀರೂ ‖ 10 ‖
ವೋಟಾಕಾದಾರೇ ಬರಬವ್‌ದೋ ಮಗನೇ"
ಅಟ್ಟಂಬೂ ಮಾತಾ ಕೇಳಿರು ಮಗದೀರೂ
ಮಿಂದರೆ ವಗೆದಾರೇ ಚಂಡೂಕಿ ಸಳದೀ
ಮಿಂದಲ್ಲೇ ಮಡಿಯಾ ವಗೂದುಟ್ಟೀ ‖ 11 ‖
ದ್ಯೇವರ ಪುರಕಿನ್ನೀ ಬಂದರೆ ಮಗದೀರೂ
ದ್ಯೇವರ ಪೋಜೀಯಾ ಮಾಡವ್ರೇ ಲೇಗೇ
ಮಾಳೂಗೀ ವಳಗೇ ನೆಡವರೆ ಮಗದೀರೂ
ಯೇಯ್ಡು ಜನ ಅಣ್ಣದೀರೂ ವೋಟಕ್ ಕೂತಾರೇ ‖ 12 ‖

ತಂಗಿನು ತಾಯಿನೂ ವೋಟಕ್ ಕೂತಾರೇ
ವೋಟಾನಾದಾರೇ ಮಾಡವ್ರೇ ಲೇಗೇ
ಮಾಳೂಗೀ ಹೆರುಗೇ ಬಂದವ್ರೇ ಲೇಗೇ
ಕೈಬಾಯಾಲಿನ್ನೇ ತೊಳುದವ್ರೇ ಲೇಗೇ ॥ 13 ॥
ಮಾಳೂಗಿ ವಳುಗೇ ನೆಡದಾರು ಯೇಗೇ
ಪಟ್ಟೇ ಮಂಚದಲ್ಲೀ ಕುಂತೀಕಂಡವ್ರೇ
ಹೊಳೂ ಬೆಳಿಯೆಲಿಯಾ ಮೆಲಿದವ್ರೇ ಅವರೂ
"ಕೇಳಲ ಕೇಳಲ್ಲೋ ನನ್ನಾಲು ಅಣ್ಣಾ ॥ 14 ॥
ನಮ್ಮಿಬ್ಬರಾ ನೆಡುಗೇ ವಬ್ಬಾಳೂ ತಂಗೀ
ತೆಂಗೂ ಸಿಂಗರವೇ ನಮಗುಂಟು ತಮ್ಮಾ
ನಮ್ಮಲರವಾಸೀ ತಂಗೀನ್ ಬಳುವಳೀ
ಆರೂ ಸಾವಿರದಾ ಗೋಪಾದೇವೀ ॥ 15 ॥
ನಮ್ಮಲರವಾಸೀ ತಂಗೀಗ್ ಬಳವಳೀ
ಮೂರು ಸಾವಿರದಾ ಕರಗೋಳ್ ಹಿಂಡೂ
ನಮ್ಮಲರವಾಸೀ ತಂಗೀಗ್ ಬಳುವಳೀ
ಯೇಳು ಕೊಪ್ಪರಕೀ ದುರವ್ಯಾಗಳುಂಟೂ ॥ 16 ॥
ನಮ್ಮಲರವಾಸೀ ತಂಗೀಗ್ ಬಳವಳೀ
ಸೋದರತ್ತೀಯಾ ಮಗಗೇ ಕೊಡಬೇಕೊ"
ಅದೇಳೀಲಿನ್ನೇ ನುಡದಾನೆ ತಮ್ಮಾ
"ಕೇಳಲ್ ಕೇಳಲ್ಲೇ ನಾಸಾಕಿದ ಗಿಳಿಯಾ ॥ 17 ॥
ನಿಮ್ಮಲೂ ವಡಿಯಾ ದಂಡೀಗ್ ಸವ್ನವ್ನೇ
ಬಿಂಬೀ ರೂಪದಲ್ಲಿ ಹೋಗಬೇಕು ನೀನೂ
ವಡತೀಗೆ ಕರಿಯಾ ಕೊಡಬೇಕೋ ನೀನೂ
ದಂಡೀಗಾದರೇ ಸವ್ನವ್ನ" ಅಂದೇಳಿ ॥ 18 ॥
ಅಟ್ಟಂಬೂ ಮಾತಾ ಕೇಳಿತೂ ಗಿಳಿಯಾ
ಹಾರೀಕುಂತಳ್ ವಡತೀ ಮನಿಯಾಲು ಮುಂದೇ
"ಮಾಳುಗೀ ವಳುಗೇ ಹಾಲ್ ಕಾಸೂ ವಡತೀ " ॥ 19 ॥

ಅಟ್ಟಂಬೂ ಮಾತಾ ಕೇಳೀತೂ ಹೆಣ್ಣೂ
ಮಾಳೂಗೀ ಹೆರಗೇ ಬಂದೀತೂ ಹೆಣ್ಣೂ
ಕೊಟ್ವಾವಾಲೀಯಾ ತಟ್ಟೀ ವೋದೀತೂ
ಮುತ್ತಿನ ಕಣ್ಣೀರಾ ಬಿಡವದೂ ಮಡದೀ ‖ 20 ‖
ಕಟ್ದಸಿರಿ ಮೂಡಿಯಾ ಬಿಚ್ಚೀ ಬೀರಾಡೀ
ರಾಜಂಗಳ ಮೆಟ್ಟಾ ಇಳುದಾಳೆ ಹೆಣ್ಣೂ
ಬಿದ್ದಾ ಮಾರಿಗವಾ ಹಿಡಿದಾಳೆ ಹೆಣ್ಣೂ
ತನ್ನಲೂ ಮನಿಗೇ ಬಂದೀತೂ ಹೆಣ್ಣೂ ‖ 21 ‖
ಕೈಕಾಲು ಸಿರಿಮೊಕವಾ ತೊಳದೀತು ಹೆಣ್ಣೂ
ವಳಗೆ ನಾವಾರೇ ಸಿಡದೀತೇ ಹೆಣ್ಣೂ
ಮುತ್ತಿನ ಕಣ್ಣೀರಾ ಬಿಡವದು ಹೆಣ್ಣೂ
ಗಂಡಾಲೂ ಲಿನ್ನೇ ಯೇನ ನುಡುದಾನೇ? ‖ 22 ‖
"ಕೇಳಲ್ ಕೇಳಲ್ಲೇ ನನ್ನಾಲು ಮಡದೀ,
ನಾ ದಂಡೀಗಾದಾರೇ ಹೋಗಿನ್ನು ಬತ್ತೇ
ಹೋಗೀ ಬಾರಂದೀ ಯೇಳ್ಯ ಕೊಡು ಮಡದೀ, "
"ಹರಹಾರಾ" ಲಂತೂ "ಶಿವಶೀವಾ" ಲಂತೂ ‖ 23 ‖
ಮುತ್ತಿನ ಕಣ್ಣೀರಾಶಡದಾಳೂ ಹೆಣ್ಣೂ
"ನನ್ನ ತರವಾಗೇ ಚಿಕ್ಕವಳಾಗಿದ್ದೆ
ಯೇಗೆ ನಾದಾರೇ ಸಮರಂತೀ ನಾವೂ
ಕೂತೊಂದ ಯೇಳ್ಯಾವಾ ಮೆಲಿಲಿಲ್ಲ ಸ್ವಾಮೀ ‖ 24 ‖
ವಂದೂ ಚೆಂಬೂದಿಕಾ ಚೆಲಲಿಲ್ಲಾ ಸ್ವಾಮೀ,
ಇಂದೋಗೂ ಪಯಣಾ ನಾಳೆ ಹೋಗ ಬಿಡುದೂ
ಇಂದೊಂದೂ ದಿವಸೇ ಉಳದೋಗೀ ಸ್ವಾಮೀ"
"ಇಂದೀನಾದಿವಸಾ ನಾಳೀಕೆ ಶಿಕ್ಕಾ ‖ 25 ‖
ಪೆಟ್ಟೂಗೀ ವಳುಗೇ ಪಟ್ಟೀದೇ ಮಡದೀ
ಉಟ್ಟೀ ಕಂಡಿನ್ನೇ ಲಿರಬವುದೂ ಮಡದೀ"

“ಪೆಟ್ಟೊಗೀವಳಗೇ ಪಟ್ಟೇಲಿದ್ದಾರೇ
ನೀವಿದ್ರೆ ನನ್ನಾ ಪಟ್ಟೇಯೇ ಸ್ವಾಮೀ”
“ಪೆಟ್ಟೊಗೇ ವಳಗೇ ಚೆನ್ನೀದೇ ಮಡದೀ ‖ 26 ‖
ಇಟ್ಟೇಕಂಡಿನ್ನೇ ಲಿರಬವದೂ ಮಡದೀ”
“ಪೆಟ್ಟೊಗೀವಳಗೇ ಚೆನ್ನಾಲಿದ್ದಾರೇ
ಚೆನ್ನಾಕ್ಕೇ ಬೆಂಕಿ ಹಚ್ಚಾರೂ ಹೋಗೀ
ನೀವಿದ್ರೆ ನನ್ನಾ ಚೆನ್ನಾವೆ ಸ್ವಾಮೀ” ‖ 27 ‖
ಯೇನೇನ್ ಹೇಳಿದರೂ ಕೇಳೂದಲ್ಲಾ
“ಕೇಳಲ್ ಕೇಳಲ್ಲೇ ಯೇ ನನ್ನ ತಾಯೀ,
ನಿಂಬೀಕಾಯ್ನಂತಾ ಬುತ್ತೀನೇ ಕಟ್ಟೊ
ಕಣಬೀ ಕಾಯ್ನಂತಾ ರೊಟ್ಟೀನೇ ಸುಡೂ ‖ 28 ‖
ಕೇಳಲ್ ಕೇಳಲ್ಲೇ ನನ್ನಾಲೂ ತಾಯೇ
ಹೋಗೀಬಾರಂದೀ ಯೇಳ್ಯಕೊಡು ತಾಯೇ”
ಬೂಮೀ ಮುರುಚ್ಯಾಗೀ ಬಿದ್ದೀತೂ ತಾಯೀ
ತಾಯ ಸಂತರುಸೀ ಕುಳಸೀದಾ ಮಗನೂ ‖ 29 ‖
ಯೆಡಗೈಲ್ ಕಣ್ಣೀರಾ ಬಲಗೈಲೀ ಯೇಳ್ಯಾ
“ಹೋಗೀ ಬಾರಂದೀ” ಯೆಳ್ಯಾ ಕೊಟ್ಟಿತು
ಆಡೂಕ್ ಹೋದಾ ತಂಗೀ ವೋಡೇ ಬಂದೀತೂ
ಇಬ್ಬರ ನೆಡಗೇ ವಬ್ಬಳೂ ತಂಗೀ ‖ 30 ‖
“ನಾ ದಂಡೀಗಾದಾರೇ ಹೋಗಿನ್ನೆ ಬತ್ತೇ
ಹೋಗೀ ಬಾರಂದೀ ಲೀಳ್ಯಕೊಡೆ ತಂಗೀ”
ಬೂಮೀಗ್ ಮುರಚಾಗೀ ಬಿದ್ದೀತೂ ತಂಗೀ
ತಂಗೀ ಸಂತುರುಸೀ ಕುಳಸೀದಾ ಲಣ್ಣ ‖ 31 ‖
ಯೆಡಗೈಲ ಕಣ್ಣೀರೂ ಬಲಗೈಲಿ ಲಿಳ್ಯಾ
“ಹೋಗೀ ಬಾರಂದೀ” ಲೀಳ್ಯಾ ಕೊಟ್ಟಿತೇ

“ಕೇಳಲ್ ಕೇಳಲ್ಲೋ ನನ್ನಾಲೂಲಣ್ಣಾ
ನಾ ದಂಡೀಗಾದಾರೇ ಹೋಗಿನ್ನೂ ಬರುತೇ ‖ 32 ‖
ಹೋಗೀ ಬಾರಂದೀ ಲೇಳ್ಯ ಕೊಡೂ ಲಣ್ಣಾ”
ಯೆಡಗೈಲಿ ಕಣ್ಣೀರೂ, ಬಲಗೈಲೀ ಯೇಳ್ಯಾ
“ಹೋಗೀ ಬಾರಂದೀ” ಲೇಳ್ಯಾ ಕೊಟ್ಟವ್ನೇ
“ಕೇಳಲ್ ಕೇಳಲ್ಲೇ ನನ್ನಾಲೂ ಲತ್ಗೀ ‖ 33 ‖
ನಾದಂಡೀಗಾದಾರೇ ಹೋಗಿನ್ನೇ ಬತ್ತೇ
ಹೋಗೀ ಬಾರಂದೀ ಲೇಳ್ಯ ಕೊಡೇಲತ್ತಗೀ”
ಯಡಗೈಲಿ ಕಣ್ಣಿರೂ ಬಲಗೈಲೀ ಯೇಳ್ಯಾ
“ಹೋಗೀ ಬಾರಂದೀ” ಯೇಳ್ಯ ಕೊಟ್ಟೀತೂ ‖ 34 ‖
“ಕೇಳಲ್ ಕೇಳಲ್ಲೇ ನನ್ನಾಲು ಮಡದೀ,
ನಾದಂಡೀಗಾದಾರೇ ಹೋಗಿನ್ನೇ ಬತ್ತೇ
ಹೋಗೀಬಾರಂದೀ ಲೀಳ್ಯ ಕೊಡೆ ಮಡುದೀ”
ಯೇನೇನೇಳಿದರೂ ಕೇಳೂವದೆಲ್ಲಾ ‖ 35 ‖
ಯಡಗೈಲ ಕಣ್ಣೀರೂ ಬಲಗೈಲಿ ಲೇಳ್ಯಾ
“ಹೋಗೀ ಬಾರಂದೀ” ಲೇಳ್ಯ ಕೊಟ್ಟೀತೂ
ಬೇಕಾದ್ ವಸ್ತ್ರಲೂ ಮೈಯಾರ ದರಸೀದ
ದೆಟ್ಟೀನಾದಾರೇ ಸೊಂಟಕೆ ಬಿಗದೀವಾ ‖ 36 ‖
ಪಟವಾನಾದಾರೇ ಜಗಲಾಗಿಟ್ಟೀದಾ
ರಾಜಂಗಳ ಮೆಟ್ಟಾ ಇಳದವ್ನೇ ಲೀಗೇ
ಕಟ್ಟೂಗೀ ಹೊರಿಯಾ ಹೊತ್ತೀ ಬಂದವ್ರೇ
“ಹರಹರ” ನಂತೂ “ಶಿವಶೀವಾ” ನಂತೂ ‖ 37 ‖
“ಇಂದೋಗೂಪಯಣಾ ನಾಳ್ ಹೋಗಬವದೂ
ಇಂದೀನಾ ಸಕಣಾ ಮಾಹಾಳಂ”ತೂ
ಮುತ್ತೀನ ಕಣ್ಣೀರಾ ಬಿಡುತಾದೆ ಮಡದೀ
“ಇಂದೀನ ಸೊರೀ ತಾ ನಾಳೀಕೆ ಸಿಕ್ಕಾ” ‖ 38 ‖

ಮತ್ತೈದೂ ಹೆಜ್ಜೀ ಗಳದಾಲೀಗೇ
ಹೊಸ ಮಡಕೀ ಹೊರಿಯಾ ಹೊತ್ತೀ ಬಂದವ್ರೇ
“ಇಂದ್ ಹೋಗೂ ಪೆಯಣಾ ನಾಳೆ ಹೋಗಬವ್ದೂ
ಇಂದೀನಾ- ಸಕಣಾ ಮಾಹಾಳಂ”ತೂ ‖ 39 ‖
ಮುತ್ತಿನ ಕಣ್ಣೀರಾ ಬಿಡುತಾದೆ ಮಡದೀ
“ಇಂದಿನ ಮೊರಿತಾ ನಾಳೀಕೆ ಸಿಕ್ಕಾ”
ಮತ್ತೈದೂ ಹೆಜ್ಜೆ ಗಳದಾ ಲೀಗೇ
ಸತ್ತಾಲೂಹೆಣವಾ ಹೊತ್ತೀ ಬಂದವ್ರೇ ‖ 40 ‖
“ಹರಹರಾ” ಲಂತೂ “ಶಿವಶೀವಾ” ಲಂತೂ
ಮುತ್ತಿನ ಕಣ್ಣೀರಾ ಶಡದೀತೂ ಮಡದೀ
“ಇಂದೋಗೂ ಪಯಣಾ ನಾಳೆ ಹೋಗಬವದೂ
ಇಂದೊಂದು ದಿನವೇ ಉಳದೋಗೀ ಸ್ವಾಮೀ” ‖ 41 ‖
ಮತ್ತೈದೂ ಹೆಜ್ಜೀ ಗಳದಾನೇ ಲೀಗೇ
ತಾನೆ ಹೇರೂ ಚೇಜೀ ಹೇರಿದಾನೋಡೂ
ಬಿದ್ದಾ ಮಾರಿಗವಾ ಹಿಡಿದಾ ನೇ ಲೀಗೇ
ಮೂರೂ ದಿವ್ಸಾಕೇ ದಾರೀ ತೊಳದೀವಾ ‖ 42 ‖
ಮಾರ್ನಮೀ ಬಯ್ಲಾಕ್ ಹೋಗೀ ನಿತ್ತಾನೇ
ಪಾರ್ವಾರಾ ದಂಡೊಂದ ಹಾರಾಡೀ ಕಡದಾ
ಮುಗುಲಾರ ದಂಡಾ ಮುಡುಗಾಡೀ ಕಡದಾ
ದಂಡಂಬೂ ದಂಡ ಸವ್ರಾಣೀ ಮಾಡಿ ‖ 43 ‖
ಅಸ್ವಂತಯೆಳ್ಳೀಯಾ ಕಟ್ಟೀ ಬುಡದಲ್ಲೀ
ಗಾಳೀಗಾದಾರೇ ಬಂದೀ ನಿತ್ತೀದಾ
ಹತ್ತೇವಾ ಜೇಜೀ ಇಳದಾ ನೀಗೇ
ಸೊಂಟಾನಾ ಹೆಚ್ಚೀ ಬಿಡಸೀದಾಲೀಗೇ ‖ 44 ‖
ಕಳ್ಳರ ಪೋಕಾರೂ ಮೊಕ ಸಾರನಿತ್ತೀರೂ
ಅಳ್ ಹೊಟ್ಟೀಮೆನೆ ಗುಂಡಾ ಹೊಡದಾರೋಲಿನ್ನೇ

ಅಯ್ಯಯ್ಯಾ ಅಪ್ಪಾ - ಸತ್ತೇ ನಂದಾ
ಬಿಚ್ಚೀದಾ ದಟ್ಟೀ ಸುತ್ತೇದಾ ಸೊಂಟಾ ॥ 45 ॥
ಇಳ್ಡಾ ಜೇಜೀಯಾ ಹತ್ತೀದಾ ನೋಡೂ
"ಕೇಳಲ್ ಕೇಳಲ್ಲೋ ನಾಸಾಕಿದ ಜೇಜೀ
ನನಗೇ ನಿನಗೇಯಾ ವಂದೇ ನೊಡ್ಲೀಯೇ
ಮೂರೂ ದಿವ್ಸದ ದಾರೀ ಮೂರ ತಾಸಿಗೆ ತುಳಿಯೇ" ॥ 46 ॥
ಕೊದುರೀಗೇ ಚಿಮಕಾ ಹೊಡುವಾನೇ ಲೀಗೆ
ಮೂರೂ ದಿವ್ಸನ ದಾರೀ ಮೂರ್ ತಾಸೀಗ್ ತುಳಿತೂ
ಹಿಂತಿರುಗೀ ಮನಿಗೇ ಬಂದೀ ನಿತ್ತೀದಾ
ಹನ್ನೈಯ್ಡಾ ಗಂಟೇಯಾ ರಾತೂರೀದಲ್ಲೀ ॥ 47 ॥
"ತಾಯೆ ತಾಯೇ" ನಂದಿ ಮೂರ ವಾಕ್ಯಾ ಕರಿದಾ
ಮರದೀ ಬಿದ್ದೀನ್ನೇ ಸತ್ತಾನೂ ನೋಡು ॥ 48 ॥

- **ಕೆಲವು ಪದಗಳ ವಿವರಣೆ**

ಮುರಜ್ಯಾ = ಮೂರ್ಛೆ

ಸವ್ವನ್ನೇ = ತಯಾರಾಗಿದ್ದೇನೆ

▪ ಹೇಳಿದವರು: **ದಿ. ನಾಗಮ್ಮ ಗೋವಿಂದ ನಾಯ್ಕ,** ತಾರಿಬಾಗಿಲ, ಹೆಗಡೆ ಊರು.

ಮಿತ್ರಮಾಧ್ಯಮ
ನೋಂದಾಯಿತ ಟ್ರಸ್ಟ್
ಮುಕ್ತ ಮಾಹಿತಿಗೆ ಪುಟ್ಟ ಹೆಜ್ಜೆ

mitramaadhyama.riverthoughts.com
beluru@beluru.com

# ಮಿತ್ರಮಾಧ್ಯಮದ ಸಾಮಾಜಿಕ ಚಟುವಟಿಕೆಗಳು

MITRAMAADHYAMA

## ಈಗ ನಡೆಯುತ್ತಿರುವ ಚಟುವಟಿಕೆಗಳು

- **ಮಿತ್ರಮಾಧ್ಯಮದ ಟ್ರಸ್ಟೀ ಶ್ರೀ ಬೇಳೂರು ಸುದರ್ಶನ ಅವರಿಂದ ಕರ್ನಾಟಕ ಸರ್ಕಾರದ ಜಾಲತಾಣಗಳಲ್ಲಿ ಕನ್ನಡ ಬಳಕೆ, ಏಕರೂಪತೆ ಸುಲಭಗ್ರಾಹ್ಯತೆ ಕುರಿತಂತೆ ಕನ್ನಡ ಅಭಿವೃದ್ಧಿ ಪ್ರಾಧಿಕಾರಕ್ಕೆ ಸಮಗ್ರ ವರದಿ ಸಲ್ಲಿಕೆ (2017). ಈ ವರದಿಯ ಆಧಾರದಲ್ಲಿ ಸರ್ಕಾರವು ಸರ್ಕಾರದ ಏಕೀಕೃತ ವೆಬ್ ಮಾಹಿತಿ ಸಂಗ್ರಹಣಾ ವ್ಯವಸ್ಥೆಯನ್ನು ರೂಪಿಸಿದೆ (2019)**
- **ಕನ್ನಡವೂ ಸೇರಿದಂತೆ ಭಾರತೀಯ ಭಾಷೆಗಳ ತಂತ್ರಾಂಶಗಳನ್ನು ಕಡ್ಡಾಯವಾಗಿ ಭಾರತೀಯ ಮಾರುಕಟ್ಟೆಗೆ ಬರುವ ಮೊಬೈಲ್ ಸಹಿತ ಎಲ್ಲಾ ಐಟಿ ಸಾಧನಗಳಲ್ಲಿ ಮಾರಾಟಕ್ಕೆ ಮುಂಚಿತವಾಗಿಯೇ ಅಳವಡಿಸುವಂತೆ ಕೇಂದ್ರ ಸರ್ಕಾರಕ್ಕೆ ಒತ್ತಾಯಿಸಿ ಸಹಿ ಸಂಗ್ರಹ, ಮನವಿ ಸಲ್ಲಿಕೆ. (2016)**
- ಸಿದ್ಧ ಪೊಟ್ಟಣಗಳ ಮೇಲೆ ಭಾರತೀಯ ಭಾಷೆಗಳಲ್ಲಿ ಉತ್ಪನ್ನದ ಶೀರ್ಷಿಕೆ, ಮಾಹಿತಿ ಮುದ್ರಿಸಲು ಒತ್ತಾಯಿಸಿ ಅಭಿಯಾನ. (2016)
- ಕನ್ನಡದ ಓಸಿಆರ್‌ನ್ನು ಮುಕ್ತ ತಂತ್ರಾಂಶವಾಗಿ ಬಿಡುಗಡೆ ಮಾಡುವಂತೆ ಭಾರತೀಯ ವಿಜ್ಞಾನ ಸಂಸ್ಥೆಗೆ ಸೂಚಿಸಲು ಕೇಂದ್ರ ಸರ್ಕಾರಕ್ಕೆ ಒತ್ತಾಯ (2016)
- ಕನ್ನಡವೂ ಸೇರಿದಂತೆ ಕೇಂದ್ರ ಸರ್ಕಾರದ ಐಟಿ ಇಲಾಖೆಯಿಂದ ರೂಪಿಸಿರುವ ವಿವಿಧ ತಂತ್ರಾಂಶಗಳನ್ನು ಸಮಕಾಲೀನಗೊಳಿಸಿ ಮುಕ್ತ ತಂತ್ರಾಂಶಗಳಾಗಿ ಬಿಡುಗಡೆ ಮಾಡಲು ಒತ್ತಾಯ (2016)

## ಈವರೆಗೆ ಕೈಗೊಂಡ ಚಟುವಟಿಕೆಗಳು

- ವಿವಿಧ ಸೇವಾಕಾರ್ಯಗಳಿಗೆ ಧನಸಹಾಯ (2016,2018)
- ರಾಜ್ಯ ಸರ್ಕಾರಕ್ಕೆ ಮಾಹಿತಿ ನೀಡಲು ಓಸಿಆರ್ ಕುರಿತು ಒಂದು ದಿನದ ಕಾರ್ಯಾಗಾರ ಸಂಘಟನೆ (2015)
- **ಕ್ರಿಯೇಟಿವ್ ಕಾಮನ್ಸ್ ಎಂಬ ಮುಕ್ತ ಹಕ್ಕುಸ್ವಾಮ್ಯದಡಿ ಕನ್ನಡದ ಮೊಟ್ಟಮೊದಲ ಪುಸ್ತಕ 'ಕಂಪ್ಯೂಟರ್ ಮತ್ತು ಕನ್ನಡ' ಪ್ರಕಟಣೆ (2014) ಉಚಿತ ಪುಸ್ತಕ ಸಂಸ್ಕೃತಿ ಅಭಿಯಾನ (freebookculture.com/ freebookculture.riverthoughts.com)**
- 'ಇಂಟೆಗ್ರೇಟಡ್ ಪವರ್ ಪಾಲಿಸಿ' ಕುರಿತ ಪುಸ್ತಕದ ಬಿಡುಗಡೆ ಕಾರ್ಯಕ್ರಮ, ಪ್ರಚಾರ (2013)
- ಎಂಡೋಸಲ್ಫಾನ್ ಸಂತ್ರಸ್ತರಿಗೆ ಸೂಕ್ತ ಪರಿಹಾರ ಕೊಡುವಂತೆ ಒತ್ತಾಯಿಸಿ ರಾಜ್ಯ ಸರ್ಕಾರಕ್ಕೆ ಮನವಿ, ವಿಶೇಷ ಮಾಹಿತಿ ಸಭೆ (2011)
- ರಾಜ್ಯದ ಇಂಧನ ನೀತಿಯಲ್ಲಿ ಪರಿಸರ ಸಂರಕ್ಷಣೆಗೆ ಒತ್ತು ನೀಡಲು ಮುಖ್ಯಮಂತ್ರಿಯವರಿಗೆ ಒತ್ತಾಯ; ಕನ್ನಡದ ಪ್ರಮುಖ ದಿನಪತ್ರಿಕೆಗಳಲ್ಲಿ ಹಿರಿಯ ಸಾಹಿತಿ, ಕಲಾವಿದರ ಸಹಿಯ ಬಹಿರಂಗ ಪತ್ರ ಪ್ರಕಟಣೆ (2010)
- ವಿದ್ಯುತ್ ತಜ್ಞ ಶ್ರೀ ಶಂಕರ ಶರ್ಮ, ಮಕ್ಕಳ ಮನೋವಿಜ್ಞಾನಿ ಡಾ॥ ಮಾಳವಿಕಾ ಕಪೂರ್ ಮುಂತಾದವರಿಂದ ಮಾಹಿತಿ ಸಭೆಗಳು.

# ಡಾ॥ ಎಲ್ ಆರ್ ಹೆಗಡೆ

ಅಪ್ರಕಟಿತ ಸಂಗ್ರಹ ಮಾಲೆ

**೨ ಆಯ್ದ ನಾಮಧಾರಿ ಕಥನಗೀತೆಗಳು**



ಉತ್ತರ ಕನ್ನಡದ ನಶಿಸಿಹೋಗುತ್ತಿರುವ ಜಾನಪದ ಸಂಪತ್ತನ್ನು ಸಂಗ್ರಹಿಸಿ, ಉಳಿಸುವ ಕಾರ್ಯದಲ್ಲಿ ತೊಡಗಿಸಿಕೊಂಡಿದ್ದ ಮಹಾಚೇತನ. ಅಧ್ಯಾಪನದಿಂದ ನಿವೃತ್ತಿಯಾದ ನಂತರ ತಮ್ಮೆಲ್ಲ ಸಮಯವನ್ನು ಜಾನಪದ ಸಾಹಿತ್ಯ ಸಂಗ್ರಹ ಮತ್ತು ಸಂರಕ್ಷಣೆಯ ಕೆಲಸಕ್ಕೇ ಮೀಸಲಿಟ್ಟಿದ್ದ ಸಮಾಜಜೀವಿ. ಜಾನಪದ ಕ್ಷೇತ್ರದಲ್ಲಿ ಅವರ ಸಾಧನೆ ಅಪೂರ್ವ. ಅವರಿರುವಾಗ ಪ್ರಕಟವಾದ ಪುಸ್ತಕಗಳು ಹಾಗೂ ಅವರೇ ಬರೆದ ಪಾಂಡಿತ್ಯ ಪೂರ್ಣ ಪೀಠಿಕೆ, ಮುನ್ನುಡಿಗಳು ಜಾನಪದ ಕ್ಷೇತ್ರದಲ್ಲಿ ಅವರ ಆಳವಾದ ಅಧ್ಯಯನವನ್ನು ಎತ್ತಿ ತೋರಿಸುತ್ತವೆ. ಉತ್ತರ ಕನ್ನಡದ ಬುಡಕಟ್ಟು ಜನಾಂಗಗಳ ಕುರಿತ ಅವರ ಅಧ್ಯಯನಗಳು ಅನನ್ಯ; ಸಂಶೋಧನಾ ಪ್ರಬಂಧಗಳು, ಭಾಷಣಗಳು, ಜಾನಪದ ಲೇಖನಗಳು ಅಸಂಖ್ಯ.

ಈಗಾಗಲೇ ಅವರ 84 ಕೃತಿಗಳು ಪ್ರಕಟಣೆ ಕಂಡಿವೆ. ಅವರ ಅಪಾರ ಸಂಗ್ರಹದಲ್ಲಿ ಪ್ರಕಟವಾಗದ ಜಾನಪದ ಸಾಹಿತ್ಯ ಇನ್ನೂ ಸಾಕಷ್ಟಿದೆ. ಅವುಗಳಲ್ಲಿ ಕೆಲವನ್ನು ಆಯ್ದು ಅಪ್ರಕಟಿತ ಸಾಹಿತ್ಯ ಸರಣಿಯನ್ನು ಈ ಮೂಲಕ ಆರಂಭಿಸಲಾಗಿದೆ. ಅವರ ಪುತ್ರಿ ಶ್ರೀಮತಿ ರೇಣುಕಾ ರಾಮಕೃಷ್ಣ ಭಟ್ಟ ಅವರು ಈ ಸಂಗ್ರಹಗಳನ್ನು ನಾಡಿಗಾಗಿ ಸಂರಕ್ಷಿಸಿ, ಸಂಪಾದಿಸಿ ಕೊಟ್ಟಿದ್ದಾರೆ.


ಉಚಿತ ಪುಸ್ತಕ

ಮಿತ್ರಮಾಧ್ಯಮ

ಮುಕ್ತ ಮಾಹಿತಿಗೆ ಪುಟ್ಟ ಹೆಜ್ಜೆ